ಕರ್ನಾಟಕ ಸರಕಾರ

ಕಡೆಂಗೋಡ್ಲು ಸುಬ್ರಹ್ಮಣ್ಯ ಭಟ್ಟ (ಸುಬ್ಬಣ್ಣ) ರಚಿತ

ಶಬ್ಧ ಬೋಧೆ
ನಾನಾರ್ಥ ನಿಘಂಟು – ತತ್ವ ನಿರ್ಣಯ
ಮತ್ತು ಆರೋಗ್ಯ ನಿರ್ಣಯ

ಸಂಪಾದಕರು :
ಡಾ. ಎಸ್. ಆರ್. ವಿಘ್ನರಾಜ
ಪೈಕಾನ – ತೆಕ್ಕೆಕೆರೆ ಶಂಕರನಾರಾಯಣ ಭಟ್ಟ

ಕನ್ನಡ ಪುಸ್ತಕ ಪ್ರಾಧಿಕಾರ

ಕಡೆಂಗೋಡ್ಲು ಸುಬ್ರಹ್ಮಣ್ಯ ಭಟ್ಟ (ಸುಬ್ಬಣ್ಣ) ರಚಿತ

ಶಬ್ದ ಬೋಧೆ
ನಾನಾರ್ಥ ನಿಘಂಟು-ತತ್ವ ನಿರ್ಣಯ
ಮತ್ತು ಆರೋಗ್ಯ ನಿರ್ಣಯ

ಸಂಪಾದಕರು

ಡಾ. ಎಸ್.ಆರ್. ವಿಘ್ನರಾಜ, ಧರ್ಮಸ್ಥಳ

ಪೈಕಾನ-ತೆಕ್ಕೇಕೆರೆ ಶಂಕರನಾರಾಯಣ ಭಟ್ಟ, ಕಾಸರಗೋಡು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ,

ಬೆಂಗಳೂರು-೫೬೦ ೦೦೨

SHABDHA BODHE, NAANAARTHA NIGHANTU, THATVA NIRNAYA MATHU AROGYA NIRNAYA- Edited by Kadengodlu Subbanna Bhat, Edited by Dr. S.R.Vignaraja Dharmasthala & Paikana- Tekkekere Shankara Narayana Bhatta, Kasaragod and Published by **B.H. Mallikarjuna**, Administrative Officer, Kannada Pustaka Pradhikara, Kannada Bhavana, J.C. Road, Bangalore-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ : **ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು**

ಪ್ರಥಮ ಮುದ್ರಣ	:	೨೦೧೧
ಪುಟಗಳು	:	**xxi** + ೧೬೨ = ೧೮೩
ಪ್ರತಿಗಳು	:	೧೦೦೦
ಬೆಲೆ	:	₹ ೮೦/-

First Print	**2011**
Pages	**xxi + 162 = 183**
Copies	**1000**
Price	**₹ 80/-**


ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಕರಡು ತಿದ್ದಿದವರು : **ಸಂಪಾದಕರು**

ಮುಖಪುಟ ವಿನ್ಯಾಸ : **ವಿಘ್ನರಾಜ ಅಜೆಕ್ಕಳ**

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ
ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪೮೮೧೧; ಮೊ : ೯೩೪೨೮೬೪೭೬೧

ಅರ್ಪಣೆ



ಭೀಮ ಭಟ್ಟ		ಶಂಕರಿ ಅಮ್ಮ
ಜನನ	ಮರಣ	ಜನನ
6-7-1916	4-12-1988	6-1-1927

ಕಡೆಂಗೋಡ್ಲು ಸುಬ್ಬಣ್ಣ ಭಟ್ಟರ ಕೊನೆಯ ಪುತ್ರ ತೆಕ್ಕೇಕೆರೆ ಭೀಮಭಟ್ಟ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಶಂಕರಿಅಮ್ಮ ಅಂದರೆ ನನ್ನ ತೀರ್ಥರೂಪ ಮತ್ತು ಮಾತೃಶ್ರೀ ಇವರ ದಿವ್ಯ ಚರಣಾರವಿಂದಗಳಲ್ಲಿ ಈ ಕೃತಿಯನ್ನು ಅರ್ಪಿಸುತ್ತಿದ್ದೇನೆ.

– ತೆಕ್ಕೇಕೆರೆ ಶಂಕರನಾರಾಯಣ ಭಟ್ಟ

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿಯೇ ಸ್ಥಾಪಿತವಾಗಿರುವ ಸರ್ಕಾರದ ಅಂಗಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರ ಕನ್ನಡ ಭಾಷೆ, ಸಂಸ್ಕೃತಿಯ ಏಳಿಗೆಗೆ ಹಲವಾರು ಅಕಾಡೆಮಿ, ಪ್ರಾಧಿಕಾರಗಳನ್ನು ರಚಿಸಿ, ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದೆ. ಈ ಸಂಸ್ಥೆಗಳಷ್ಟೇ ಅಲ್ಲದೆ ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳೂ ಸಹ ಕನ್ನಡದಲ್ಲಿ ಜ್ಞಾನ ಪ್ರಸರಣ ಕಾರ್ಯದಲ್ಲಿ ನಿರಂತರವಾಗಿ ತೊಡಗಿದ್ದು, ಸಾಹಿತ್ಯ, ವಿಮರ್ಶೆ, ಸಂಸ್ಕೃತಿ, ವಿಜ್ಞಾನ ಆರೋಗ್ಯ... ಮುಂತಾದ ಕ್ಷೇತ್ರಗಳಲ್ಲಿ ಅಮೂಲ್ಯ ಕೃತಿಗಳನ್ನು ಪ್ರಕಟಿಸಿ, ಸುಲಭದರಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಕಾರ್ಯವನ್ನು ಕೈಗೊಂಡಿವೆ. ಉಳಿದ ಸಂಸ್ಥೆಗಳ ಅನೇಕ ಕಾರ್ಯಗಳಲ್ಲಿ ಪುಸ್ತಕ ಪ್ರಕಟಣೆ ಒಂದು ಭಾಗವಾದರೆ ಪುಸ್ತಕ ಪ್ರಾಧಿಕಾರದ ಮುಖ್ಯ ಆಶಯವೇ ಕನ್ನಡದ ಲೇಖಕರು, ಪ್ರಕಾಶಕರು, ಓದುಗರ ಅಭಿರುಚಿಯ ಉತ್ತೇಜನಕ್ಕೆ ಪೂರಕವಾಗಿ ಕಾರ್ಯಕ್ರಮ ಕೈಗೊಳ್ಳುವುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರ ಕಳೆದ ಸುಮಾರು ಎರಡು ದಶಕದ ಅವಧಿಯಲ್ಲಿ ೪೦೦ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದರೂ, ಶಾಸ್ತ್ರ, ವೈಚಾರಿಕತೆಗೆ ಸಂಬಂಧಿಸಿದ ಕೃತಿಗಳೇ ಹೆಚ್ಚು ಎನ್ನಬಹುದು.

ಸುಮಾರು ೧೧೮ ವರ್ಷಗಳ ಹಿಂದೆ ಪ್ರತಿ ಮಾಡಲಾಗದ ಹಸ್ತಪ್ರತಿ ಲೇಖಕರ ಮಕ್ಕಳಿಗೆ ಇತ್ತೀಚೆಗೆ ದೊರೆತಿರುವುದು ಕನ್ನಡಿಗರ ಸುದೈವವೇ ಸರಿ. ಕೇವಲ ೩ನೇ ತರಗತಿಯವರೆಗೆ ಔಪಚಾರಿಕ ಶಿಕ್ಷಣ ಪಡೆದಿದ್ದ ಶ್ರೀ ಸುಬ್ಬಣ್ಣ ಭಟ್ಟರು ಆಗಿನ ಕಾಲಕ್ಕೆ ಎಂಥ ಹಿರಿಯ ವಿದ್ವಾಂಸರು ಎಂಬುದು ಗೊತ್ತಾಗುತ್ತದೆ. ಕನ್ನಡ ನಿಘಂಟು ರಚನೆಗೆ ಮಾರ್ಗದರ್ಶಕ ಸೂತ್ರಗಳೇ ರಚಿತವಾಗದ ಕಾಲದಲ್ಲಿ ಯಾವುದೇ ರೀತಿಯ ಸಾಂಪ್ರದಾಯಿಕ ಶಿಕ್ಷಣ ಪಡೆಯದ ವ್ಯಕ್ತಿಯೊಬ್ಬರು ತಮ್ಮ ಸತತ ಸಾಧನೆ ಪರಿಶ್ರಮದಿಂದ ಇಂತಹ ಮಹತ್ವದ ಕಾರ್ಯ ಕೈಗೊಂಡಿರುವುದು ಆಶ್ಚರ್ಯ ಹಾಗೂ

ಮೆಚ್ಚುಗೆಯನ್ನು ಉಂಟುಮಾಡುತ್ತದೆ. ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಶಬ್ದಗಳಿರುವ ಈ ಕೃತಿಯು ಇಂದಿನ ವಿಮರ್ಶಾ ಮಾನದಂಡಗಳಿಂದ ಗಮನಸೆಳೆಯದಿದ್ದರೂ, ಐತಿಹಾಸಿಕವಾಗಿ ಇದರ ಪಾತ್ರ ಬಹಳ ಮಹತ್ತರವಾದದ್ದು. 'ಶಬ್ಧಬೋಧೆ ನಾನಾರ್ಥ ನಿಘಂಟು–ತತ್ವ ನಿರ್ಣಯ ಮತ್ತು ಆರೋಗ್ಯ ನಿರ್ಣಯ' ಕೃತಿಯನ್ನು ಡಾ. ಎಸ್.ಆರ್. ವಿಘ್ನರಾಜ ಹಾಗೂ ಪೈಕಾನ ತೆಕ್ಕೇಕೆರೆ ಶಂಕರನಾರಾಯಣ ಭಟ್ಟ ಅವರು ಸಂಪಾದಿಸಿಕೊಟ್ಟಿದ್ದಾರೆ. ಅವರಿಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಕೃತಿಯ ಪ್ರಕಟಣೆಯಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿ–ಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಕನ್ನಡ ವಾಚಕ ಲೋಕ ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸಲೆಂದು ಹಾರೈಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

ಪೈಕಾನ ತೆಕ್ಕೇಕೆರೆ ಸುಬ್ಬಣ್ಣ ಭಟ್ಟರ ಕಾಲ್ಪನಿಕ ಚಿತ್ರ
(ಜನನ: ಸು.1867–ಮರಣ: 1917)



ಕನ್ನಡ ಅರ್ಥಕೋಶದ ಕರ್ತೃ
ಕಡೆಂಗೋಡ್ಲು ಸುಬ್ಬಣ್ಣ ಭಟ್ಟರು

'ವಿದ್ಯಾದದಾತಿ ವಿನಯಂ' ಎಂಬ ಸುಭಾಷಿತ ಮಾತು ಕಡೆಂಗೋಡ್ಲು ಸುಬ್ಬಣ್ಣ ಭಟ್ಟರಿಗೆ ಸರಿಯಾಗಿ ಒಪ್ಪುತ್ತದೆ. ಕೇವಲ ಮೂರನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ವ್ಯಕ್ತಿಯೊಬ್ಬರಿಗೆ ಅರ್ಥ ಕೋಶ ರಚನೆ ಸಾಧ್ಯವೇ ಎಂಬ ಪ್ರಶ್ನೆಗೆ ಈ ವ್ಯಕ್ತಿತ್ವವೇ ಉತ್ತಮ ಉದಾಹರಣೆ. ನಿರಂತರ ಅಧ್ಯಯನ, ಚಿಂತನೆ ಅವರ ಪ್ರತಿಭೆಯ ಉದ್ದೀಪನಕ್ಕೆ ಕಾರಣವಾಯಿತು. ಅಮರಕೋಶವೇ ಮೊದಲಾದ ಗ್ರಂಥಗಳನ್ನು ಕಂಠಗತ ಮಾಡಿಕೊಂಡಿದ್ದ ಶ್ರೀಯುತ ಭಟ್ಟರಿಗೆ ಭಾಷೆ, ವ್ಯಾಕರಣ ಮತ್ತು ನಿಘಂಟುಗಳಲ್ಲಿ ಹೆಚ್ಚಿನ ಒಲವು ಮೂಡಿತು. ಕೆಲವು ಪದಗಳ ಅರ್ಥ ನಿರ್ಣಯಕ್ಕೆ ಎಷ್ಟೋ ಸಂದರ್ಭಗಳಲ್ಲಿ ದಿನಗಳೇ ಬೇಕಾಗಬಹುದು. ಭಾಷಾ ಸಾಹಿತ್ಯಗಳ ಅಧ್ಯಯನಕ್ಕೆ ಕೋಶಗಳೇ ಮೂಲ ಆಕರಗಳು ಎಂಬುದನ್ನು ಮನಗಂಡು ಕಡೆಂಗೋಡ್ಲು ಸುಬ್ಬಣ್ಣ ಭಟ್ಟರು ಈ ಸಾಹಸ ಕಾರ್ಯಕ್ಕೆ ತೊಡಗಿರಬೇಕು. ಅವರು ಬರೆದಿರುವ 'ಶಬ್ದಬೋಧೆ' ಎಂಬ ಹೆಸರಿನ ನೂರ ಹದಿನೇಳು ವರ್ಷಗಳ ಹಿಂದಿನದೆಂದು ನಂಬಲಾದ ಕನ್ನಡ ಅರ್ಥಕೋಶದ ಹಸ್ತಪ್ರತಿ ಇತ್ತೀಚೆಗಷ್ಟೇ ನಮಗೆ ದೊರಕಿದೆ.

ಸುಬ್ಬಣ್ಣ ಭಟ್ಟರು ವಿಖ್ಯಾತ ಕವಿ ಪತ್ರಿಕೋದ್ಯಮಿಗಳಾಗಿದ್ದ "ರಾಷ್ಟ್ರಬಂಧು" ದಿ. ಕಡೆಂಗೋಡ್ಲು ಶಂಕರಭಟ್ಟರ ವಂಶೀಯರು. ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಪೆರುವಾಯಿ ಗ್ರಾಮದ ಕಡೆಂಗೋಡ್ಲು ಸಣ್ಣ ಕೃಷ್ಣ ಭಟ್ಟ ಮತ್ತು ತಿರುಮಲೇಶ್ವರಿ ಇವರ ಹಿರಿಯ ಮಗನಾಗಿ ಸು. 1867ರಲ್ಲಿ ಜನಿಸಿದ ಇವರಿಗೆ ಇಬ್ಬರು ಸಹೋದರರು ಮತ್ತು ಇಬ್ಬರು ಸಹೋದರಿಯರೂ ಇದ್ದರು. ಯಕ್ಷಗಾನ ಅರ್ಥಗಾರಿಕೆಯಲ್ಲಿ ಎತ್ತಿದ ಕೈ ಆಗಿದ್ದ ಭಟ್ಟರು ಕೂಡ್ಲು ಕಲಾರತ್ನ ಸುಬ್ರಾಯ ಶಾನುಭಾಗರ ಆತ್ಮೀಯ ಮಿತ್ರರಾಗಿದ್ದರಂತೆ. 1890ರಲ್ಲಿ ಇವರು ಕಡೆಂಗೋಡ್ಲಿನಿಂದ ಕಾಸರಗೋಡು ತಾಲೂಕು ಕಾರಡ್ಕ ಗ್ರಾಮದ ತೆಕ್ಕೇಕೆರೆಗೆ ವಲಸೆ ಬಂದು ನೆಲೆಸಿದರು. ಇದರಿಂದ ಕಲಾವಿದರ ಕುಟುಂಬವೆಂದು ಬಹಳ ಹಿಂದಿನಿಂದಲೇ ಪ್ರಸಿದ್ಧವಾದ ಪುಂಡೂರು ಪುಣಿಂಚತ್ತಾಯ ಕುಟುಂಬದೊಂದಿಗೆ ಸಂಪರ್ಕ ಉಂಟಾಯಿತು.

ಯಕ್ಷಗಾನದ ಒಳ ಹೊರಗನ್ನು ಅರ್ಥೈಸಿಕೊಂಡಿದ್ದ ಸುಬ್ಬಣ್ಣ ಭಟ್ಟರು ಬಹುಬೇಗ ಪುಂಡೂರು ಕುಟುಂಬದ ಕಲಾರಾಧನೆಯಲ್ಲಿ ಹವ್ಯಾಸಿ ಕಲಾವಿದರಾಗಿ ತಮ್ಮನ್ನು ತೊಡಗಿಸಿಕೊಂಡರು. ಇವರ ಹಿರಿಮೆಯನ್ನರಿತ ಎಷ್ಟೋ ಯಕ್ಷಗಾನ ಆಸಕ್ತ ಯುವಕರು ಇವರಲ್ಲಿ ಯಕ್ಷಗಾನದ ಅರ್ಥಗಾರಿಕೆಯ ಮಾರ್ಗದರ್ಶನವನ್ನೂ ಪಡೆದಿದ್ದಾರೆ.

ಸುಮಾರು 50 ವರ್ಷಗಳಷ್ಟು ಕಾಲ ಬಾಳಿ ಸಂತೃಪ್ತ ಜೀವನವನ್ನು ನಡೆಸಿದ ಸುಬ್ಬಣ್ಣಭಟ್ಟರು 1917ರಲ್ಲಿ ತೀರಿಕೊಂಡರು. ಅವರಿಗೆ ಕೃಷ್ಣಭಟ್ಟ, ಪರಮೇಶ್ವರ ಭಟ್ಟ, ನಾರಾಯಣ ಭಟ್ಟ ಮತ್ತು ಭೀಮಭಟ್ಟ ಎಂಬ ನಾಲ್ವರು ಗಂಡು ಮಕ್ಕಳಿದ್ದರು.

'ಅರ್ಥಂ ತ್ಯಜತಿ ಪಂಡಿತಃ' ಎಂಬ ಮಾತಿನಂತೆ ಪಂಡಿತರು ಅರ್ಥ ಹೇಳಲು ಸಾಧ್ಯವಾಗದೆ ಅದನ್ನು ಬಿಟ್ಟು ಬಿಡುತ್ತಾರಂತೆ. ಹೀಗೆ ವ್ಯಂಗ್ಯವಾಡಿದವರಿಗೆ ಸುಬ್ಬಣ್ಣ ಭಟ್ಟರು. ತಮ್ಮ 'ಶಬ್ದಬೋಧೆ'ಯ ಮೂಲಕ ಹಳಗನ್ನಡ ಕಾವ್ಯಗಳ ಅತಿ ಕ್ಲಿಷ್ಟ ಪದಗಳಿಗೂ ಸೂಕ್ತ ಅರ್ಥವನ್ನು ನೀಡಿ ತಕ್ಕ ಉತ್ತರವನ್ನು ನೀಡಿದ್ದಾರೆ.

ಕ್ರಿ.ಶ. 1893ರಲ್ಲಿ ಪ್ರತಿ ಮಾಡಲಾದ 'ಶಬ್ದಬೋಧೆ'ಯ ಹಸ್ತಪ್ರತಿ ಇತ್ತೀಚೆಗಷ್ಟೇ ದೊರಕಿದೆ. 6x8 ಗಾತ್ರದ ಈ ಹಸ್ತಪ್ರತಿಯಲ್ಲಿ 'ದೇವವಿರಚಿತ ವೈದ್ಯಗ್ರಂಥದ ಅನುಪಾನ ಭೋಗ ಪ್ರಕರಣ'ದ ಭಾಗವೂ ಇದ್ದು ಅದನ್ನು 'ಆರೋಗ್ಯಕ್ಕೆ ಇರುವ ಆಚರಣೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಡಾ॥ ಪಿ. ವೆಂಕಟರಾಜ ಪುಣಿಂಚತ್ತಾಯ ಪುಂಡೂರು ಸಂಪಾದಿತ ಕೃತಿ ವೀರರಾಜೇಂದ್ರ ಪ್ರಣೀತ "ವೈದ್ಯಸಾರ ಸಮುದ್ರ ತರಂಗ" (2003)ದಲ್ಲಿ ಪ್ರಕಾಶನವಾಗಿದೆ. ಉಳಿದ ಭಾಗವನ್ನು "ಆರೋಗ್ಯ ನಿರ್ಣಯ"ವೆಂಬ ಹೆಸರಲ್ಲಿ ಇಲ್ಲಿ ಕೊಡಲಾಗಿದೆ. ಇದರೊಂದಿಗೆ 'ನಾನಾರ್ಥ ನಿಘಂಟು' ಮತ್ತು 'ತತ್ತ್ವ ನಿರ್ಣಯ' ಎಂಬ ಇನ್ನೆರಡು ಕೃತಿಗಳೂ ಸೇರಿಕೊಂಡಿವೆ. ತತ್ತ್ವ ನಿರ್ಣಯವು 'ಸಾಂಖ್ಯಿಕ ಶಬ್ದ ಮಂಜರಿ'ಯ ಮಾದರಿಯಲ್ಲಿದ್ದು 67 ಪುಟಗಳಲ್ಲಿ ಹರಡಿಕೊಂಡಿದೆ.

ಕನ್ನಡದಲ್ಲಿ ನಿಘಂಟು ರಚನೆಗೆ ಒಂದು ನಿಖರವಾದ ಮಾರ್ಗದರ್ಶನ ಇಲ್ಲದೇ ಇದ್ದ ಕಾಲಘಟ್ಟದಲ್ಲಿ, ಕ್ರಮಾಗತವಾಗಿ ವಿದ್ಯಾಭ್ಯಾಸದ ಮೆಟ್ಟಲೇರದ ವ್ಯಕ್ತಿಯೊಬ್ಬರು ತಮ್ಮ ಸ್ವಂತ ಅಧ್ಯಯನ, ಚಿಂತನೆ, ಪರಿಶ್ರಮದ ಮೂಲಕ ಅರ್ಥಕೋಶವೊಂದನ್ನು ಸಿದ್ಧಪಡಿಸಿ ಸಾರಸ್ವತ ಲೋಕಕ್ಕೆ ನೀಡಿದ ಶ್ರೀಯುತ ಸುಬ್ಬಣ್ಣ ಭಟ್ಟರ ಸಾಧನೆ ನಿಜವಾಗಿಯೂ ಮಹತ್ವದ್ದು. ಇಂತಹ ಅಮೂಲ್ಯ ಗ್ರಂಥವೊಂದು ಶಾಸ್ತ್ರೀಯವಾಗಿ ಸಂಪಾದನೆಗೊಂಡು ಕನ್ನಡಿಗರ ಕೈಸೇರಿದಾಗ ಶ್ರೀ ಭಟ್ಟರ ಶ್ರಮ ಸಾರ್ಥಕವಾದೀತು.

[illegible]

[illegible]

ಮುನ್ನುಡಿ

ಭಾರತೀಯ ಪದ್ಧತಿಯಲ್ಲಿ ಅರ್ಥಕೋಶ ಎಂದು ನಾವು ಯಾವುದನ್ನು ಬಳಸುತ್ತಿದ್ದೇವೋ ಅದು ಇಂಗ್ಲೀಷ್‌ನ ಡಿಕ್ಷನರಿ(Dictionary) ಆಗಿದೆ. ಡಿಕ್ಷನರಿ ಶಬ್ದಗಳ ಪಟ್ಟಿಯಾದರೆ ನಮ್ಮ ಅರ್ಥಕೋಶವು ಮುಂದಿನ ಸಾಹಿತ್ಯ ರಚನೆಗೆ ಬುನಾದಿ ಹಾಕುವುದು. ಶಬ್ದಭಂಡಾರವನ್ನು ತೆಗೆದಿರಿಸಿ, ನವ ಸಾಹಿತ್ಯದ ನಿರ್ಮಾಣಕ್ಕೆ ಮಾರ್ಗದರ್ಶಿಯಾಗುವುದು. ಸಾಮಾನ್ಯವಾಗಿ ಭಾರತೀಯ ಎಲ್ಲಾ ಶಾಸ್ತ್ರಗ್ರಂಥಗಳು ಇತಿಹಾಸ ಪರಂಪರೆಗೆ ಅನುಗುಣವಾಗಿ ಅಮರಸಿಂಹನ ಅಮರ ಕೋಶಕ್ಕೆ ಸಮನಾಗಿವೆ.

ಪ್ರಸ್ತುತ ದಿ॥ ಕಡೆಂಗೋಡ್ಲು ಪೈಕಾನ ತೆಕ್ಕೆಕೆರೆ ಸುಬ್ಬಣ್ಣ ಭಟ್ಟರು ಸ್ವಪ್ರಯತ್ನದಿಂದ ಅರ್ಥಕೋಶವೊಂದನ್ನು ತಯಾರಿಸಿ ಓದುಗರಿಗೆ ಅರ್ಪಿಸಿದ್ದಾರೆ. ಕ್ರಿ.ಶ. 1893ರಲ್ಲಿ ಪ್ರತಿ ಮಾಡಲಾದ ಈ ಗ್ರಂಥವನ್ನು ಅಳೆಲೆಶಾಯಿಯಲ್ಲಿ ಬರೆಯಲಾಗಿದ್ದು ಸಂಗ್ರಹಕಾರರಿಗೆ ಉಪಕಾರವಾಗಿದೆ. ಸುಬ್ಬಣ್ಣಭಟ್ಟರ ಹಿರಿಯರು ಹಿಂದೆ ದ.ಕ.ಜಿಲ್ಲೆಯ ಬಂಟ್ವಾಳ ತಾಲೂಕಿನ ಪೆರುವಾಯಿ ಗ್ರಾಮದ ಕಡೆಂಗೋಡ್ಲು ಎಂಬಲ್ಲಿ ವಾಸಿಸುತ್ತಿದ್ದು, ಅಲ್ಲಿಂದ ಕಾರಡ್ಕ ಗ್ರಾಮದ ಪೈಕಾನ ತೆಕ್ಕೆಕೆರೆಗೆ ಬಂದು ನೆಲೆಸಿದರೆಂದೂ ಈ ಗ್ರಂಥದ ಕೊನೆಯಲ್ಲಿರುವ ಉಲ್ಲೇಖಗಳಿಂದ ತಿಳಿದು ಬರುತ್ತಿದೆ. ನಂದಿಕೇಶ್ವರ ದೇವರು ಅವರ ಕುಲದೇವರಾಗಿದ್ದು ಗ್ರಂಥದ ಕೊನೆಯಲ್ಲಿ ಒಂದೆಡೆ ಶ್ರೀ ನಂದಿಕೇಶ್ವರಾಯ ನಮಃ ಎಂಬ ಶ್ರೀಕಾರವನ್ನು ಕಾಣಬಹುದಾಗಿದೆ.

ಸುಮಾರು 6"x8" ಗಾತ್ರದ ಈ ಹಸ್ತಪ್ರತಿಯಲ್ಲಿ ದೇವ ವಿರಚಿತ ವೈದ್ಯಗ್ರಂಥದ ಅನುಪಾನಭೋಗ ಪ್ರಕರಣದ ಭಾಗವೂ ಇದ್ದು ಅದಕ್ಕೆ ಆರೋಗ್ಯಕ್ಕೆ ಇರುವ ಆಚರಣೆ ಎಂಬ ಶೀರ್ಷಿಕೆಯನ್ನು ಬರೆಯಲಾಗಿದೆ. ಇದರ ಜೊತೆಯಲ್ಲಿ ನಾನಾರ್ಥ ನಿಘಂಟು ಮತ್ತು ತತ್ತ್ವ ನಿರ್ಣಯ ಎಂಬ ಇನ್ನೆರಡು ಕೃತಿಗಳು ಸೇರಿವೆ. ತತ್ತ್ವ ನಿರ್ಣಯವು ಸಾಂಖ್ಯಿಕ ಶಬ್ದ ಮಂಜರಿಯ ಮಾದರಿಯಲ್ಲಿದೆ. ರೆವರೆಂಡ್ ಫಾದರ್ ಕಿಟ್ಟೆಲ್

ಅವರು ತಮ್ಮ ಅರ್ಥಕೋಶದಲ್ಲಿ ಭಾರತ ನಿಘಂಟು, ನಾನಾರ್ಥ ರತ್ನಾಕರ, ಶಬ್ದಮಂಜರಿ, ಶಬ್ದಸಾರ ಮುಂತಾದ ಹಸ್ತಪ್ರತಿಗಳನ್ನು ಬಳಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಆದರೆ ಶಬ್ದಬೋಧೆಯೆಂಬ ಈ ಹಸ್ತಪ್ರತಿಯನ್ನು ಅವರು ಪರಾಮರ್ಶಿಸಿರುವ ಬಗ್ಗೆ ಎಲ್ಲೂ ಪ್ರಸ್ತಾಪಿಸಿಲ್ಲ. ಆದುದರಿಂದ 'ಶಬ್ದಬೋಧೆ'ಯೆಂಬ ಹೆಸರಿನ ಈ ಗ್ರಂಥವು ಪ್ರಕಟಣಾ ಯೋಗ್ಯವೂ ಆಗಿದೆ.

ನನ್ನ ಅನಾರೋಗ್ಯದ ಕಾರಣದಿಂದ ಈ ಗ್ರಂಥವನ್ನು ಸಂಪಾದಿಸಲು ಅಸಾಧ್ಯವೆಂದು ತಿಳಿದು, ಕಡೆಂಗೋಡ್ಲು ಸುಬ್ಬಣ್ಣಭಟ್ಟರ ಕೊನೆಯ ಮಗ ಭೀಮಭಟ್ಟರ ಮಗನಾದ ಪೈಕಾನ ತೆಕ್ಕೇಕೆರೆ ಶಂಕರನಾರಾಯಣ ಭಟ್ಟರು(ಗ್ರಂಥ ಸಂಗ್ರಹಕಾರರು) ಸಂಪಾದಕರಾಗಿದ್ದು ಈ ಕಾರ್ಯವನ್ನು ಬಹಳ ಮುತುವರ್ಜಿಯಿಂದ ಪೂರೈಸಿದ್ದಾರೆ. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಸಂಶೋಧಕರಾದ ಡಾ॥ ಎಸ್.ಆರ್.ವಿಘ್ನರಾಜ ಅವರು ಈ ಹಸ್ತಪ್ರತಿಯನ್ನು ಪರಿಷ್ಕರಿಸಿ ಮುದ್ರಣಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರಿಗೆ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಮುದ್ರಿಸಿ ಬಿಡುಗಡೆಗೊಳಿಸುತ್ತಿದೆ. ಇದಕ್ಕಾಗಿ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಸಿದ್ದಲಿಂಗಯ್ಯನವರನ್ನು ಕೃತಜ್ಞತೆಯಿಂದ ಅಭಿನಂದಿಸುತ್ತೇನೆ.

ಡಾ॥ ಪಿ. ವೆಂಕಟರಾಜ ಪುಣಿಂಚತ್ತಾಯ

ತಾ: 19-3-2010
"ಗಾಯತ್ರಿ"
ಅಂಚೆ : ಕಕ್ಕೆಬೆಟ್ಟು
ವಯ : ಮುಳ್ಳೇರಿಯ
ಕಾಸರಗೋಡು

ಸಂಪಾದಕರ ನುಡಿ

"ಕಾಲಾಯ ತಸ್ಮೈ ನಮಃ", "ಎಲ್ಲಕ್ಕೂ ಕಾಲ ಕೂಡಿ ಬರಬೇಕು", ಎಂಬ ಮಾತಿದೆ. ಒಂದು ಕಾರ್ಯ ಕೈಗೂಡಲು ಕಾಲದ ಮಹಿಮೆ ಅನಾದೃಶವಾದುದು. ಇದಕ್ಕೆ ಪೂರಕವೆಂಬಂತೆ ನಮ್ಮ ಅಜ್ಜ ಕಡೆಂಗೋಡ್ಲು ಸುಬ್ರಹ್ಮಣ್ಯ(ಸುಬ್ಬಂಣ) ಭಟ್ಟರ "ಶಬ್ದ ಬೋಧೆ, ನಾನಾರ್ಥ ನಿರ್ಘಟು, ತತ್ವ ನಿರ್ಣಯ ಮತ್ತು ಆರೋಗ್ಯ ನಿರ್ಣಯ" ಎಂಬ ಈ ಕೃತಿಯು ತಮ್ಮ ಹಸ್ತವನ್ನಲಂಕರಿಸಿದೆ.

ಸುಮಾರು 1884ರಲ್ಲಿ ಕಡೆಂಗೋಡ್ಲು (ಈಗ ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನ ಪೆರುವಾಯಿ ಗ್ರಾಮದಲ್ಲಿದೆ) ಸಣ್ಣ ಕೃಷ್ಣಭಟ್ಟರ ಮಕ್ಕಳಾದ-ನಮ್ಮ ಅಜ್ಜಂದಿರು-ಸುಬ್ರಹ್ಮಣ್ಯ (ಸುಬ್ಬಂಣ) ಭಟ್ಟ, ಶಂಕರ ಭಟ್ಟ ಮತ್ತು ರಾಮಭಟ್ಟ ಎಂಬ ಮೂವರು ಕಡೆಂಗೋಡ್ಲಿನಿಂದ ಬಂದು ಕಾಸರಗೋಡು ತಾಲೂಕಿನ ಕಾರಡ್ಕ ಗ್ರಾಮದಲ್ಲಿ ಕಾಸರಗೋಡು-ಕೂಡ್ಲು ಶಾನುಭಾಗರಿಗೆ ಸೇರಿದ ತೆಕ್ಕೇಕೆರೆ ಎಂಬಲ್ಲಿ ಕುಳಿತು ಅಡಕೆ, ತೆಂಗು, ಭತ್ತ ಇತ್ಯಾದಿ ಕೃಷಿಯಲ್ಲಿ ನಿರತರಾದರು. ಕಡೆಂಗೋಡ್ಲು ಮನೆತನದವರು ಸಾಹಿತ್ಯ, ಕಲೆ, ಪುರಾಣವಾಚನ ಯಕ್ಷಗಾನ ಕೃಷಿಯಲ್ಲೂ ತೊಡಗಿಸಿಕೊಂಡ ಸಾಹಿತ್ಯ, ಕಲಾಭಿಮಾನಿಗಳು. ಈ ಮೇಲೆ ತಿಳಿಸಿದ ಮೂವರು ಹಿರಿಯರಿಗೂ ತಲಾ ನಾಲ್ವರು ಗಂಡು ಮಕ್ಕಳೂ, ಇವರಿಂದ ಇಂದು ಸುಮಾರು 50 ಮನೆಗಳೂ ಬೇರೆ ಬೇರೆ ಕಡೆಗಳಲ್ಲಿವೆ.

ಪ್ರಸ್ತುತ ನಮ್ಮ ಅಜ್ಜನವರಾದ ದಿ| ಸುಬ್ಬಂಣ ಭಟ್ಟರು ಸಾಹಿತ್ಯ ಪ್ರಿಯರಾಗಿದ್ದುದಕ್ಕೆ ಅವರು ರಚಿಸಿದ್ದ ಈ ಕೃತಿಯೇ ಸಾಕ್ಷಿಯಾಗಿದೆ. ಅವರಿದನ್ನು ಯಾವಾಗ ಬರೆದರೆಂದು ನಿರ್ದಿಷ್ಟ ಹೇಳಲು ಸಾಧ್ಯವಿಲ್ಲ. ಆದರೂ, ವಿಜಯ ಸಂವತ್ಸರದ ಆಷಾಢ ಬಹುಳ 2ರಂದು ಬರೆದು ಮುಗಿಸಿದ ದಿನವನ್ನು ತಿಳಿಸಿದ್ದಾರೆ. ಇದು ಸುಮಾರು 1892ನೇ ಇಸವಿ.

ಅಜ್ಜನವರು ಯಾವುದೋ ಒಂದು ಪುಸ್ತಕದಲ್ಲಿ ಮುದ್ರಾದ ಸಣ್ಣ ಅಕ್ಷರಗಳಲ್ಲಿ ಬರೆದಿಟ್ಟಿದ್ದ ಈ ಕೃತಿಯು ನಮಗೆ ಗೊತ್ತಿಲ್ಲದೆ ಮೂಲೆ ಪಾಲಾಗಿತ್ತು. ಒಂದು ದಿನ ನನ್ನ ದೊಡ್ಡ ತಂದೆ ದಿ| ಕೃಷ್ಣಭಟ್ಟರ ಎರಡನೇ ಮಗ ನನಗೆ ತಮ್ಮ-ಹರಿಯಪ್ಪ, ಕಸದ ರಾಶಿಯಲ್ಲಿ ಸಿಕ್ಕಿದ ಪುಸ್ತಕವೊಂದನ್ನು 'ಏನೋ ಇದೆ'ಯೆಂದು ತಂದು ನನ್ನಲ್ಲಿತ್ತನು. ತೆರೆದು ನೋಡಲಾಗಿ ನನ್ನ ಆಶ್ಚರ್ಯಕ್ಕೆ ಮಿತಿಯೇ ಇಲ್ಲ. ಇದು ನಮ್ಮ ಅಜ್ಜನವರ ರಚನೆಯಾಗಿತ್ತು. ಅದರ ಹೆಚ್ಚಿನ ಪರಿಶೀಲನೆಗಾಗಿ ಹಿರಿಯ ಸಂಶೋಧಕರಾದ ಶ್ರೀ ಪುಂಡೂರು ವೆಂಕಟರಾಜ ಪುಣಿಂಚತ್ತಾಯರಲ್ಲಿ ವಿನಂತಿಸಿದೆನು. ಅವರಿದನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಸಂಶೋಧನೆಗೆ ಯೋಗ್ಯವೆಂದು ಪರಿಗಣಿಸಿ, ಇದರ ಮೌಲ್ಯವರ್ಧನೆಗೆ ಕಾರಣವಾಗುವಂತೆ ಪತ್ರಿಕೆಯಲ್ಲೂ ಪ್ರಕಟಿಸಿದರು. ಹೀಗೆ ಮೂಲೆ ಗುಂಪಾಗುವಂತಿದ್ದ ಪ್ರಾಚೀನ ರತ್ನವೊಂದು ಮತ್ತೆ ಶುದ್ಧೀಕರಣಗೊಂಡು ಬೆಳಕು ಕಾಣುವಂತಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರಾಚೀನ ಕೃತಿಯೊಂದು ಸೇರ್ಪಡೆಯಾಗುವಂತಾದುದು ಕಾಲ ಮಹಿಮೆಯಲ್ಲವೇ?

ನಮ್ಮ ಕುಲಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು, ಶ್ರೀ ಸಂಸ್ಥಾನ ಗೋಕರ್ಣ, ಶ್ರೀರಾಮ ಚಂದ್ರಾಪುರ ಮಠ, ಹೊಸನಗರ ಇವರ ಶ್ರೀಚರಣಗಳಿಗೆ ಸಾಷ್ಟಾಂಗವಂದನೆಗಳೊಂದಿಗೆ ಈ ಕೃತಿ ರಚನೆಗೆ ಕೈ ಹಾಕಿದೆವು. ಇದನ್ನು ಪ್ರಥಮ ಪರಿಶೀಲನೆ ನಡೆಸಿದ ಹಿರಿಯ ಸಂಶೋಧಕರೂ, ವಿದ್ವಾಂಸರೂ ಆದ ಶ್ರೀ ಪುಂಡೂರು ವೆಂಕಟರಾಜ ಪುಣಿಂಚತ್ತಾಯರಿಗೆ ಮತ್ತು ಈ ಕೃತಿಯ ಶಬ್ದಗಳನ್ನು 'ಅ' ಕಾರಾದಿಯಾಗಿ ವ್ಯವಸ್ಥೀಕರಿಸಿದ್ದಲ್ಲದೆ, ಮುದ್ರಣಕ್ಕೆ ಪ್ರತಿ ಮಾಡಿ ಕರಡನ್ನು ಸಿದ್ಧಪಡಿಸಿಕೊಟ್ಟ ಬಂಧುಗಳೂ, ಶ್ರೀ ಧರ್ಮಸ್ಥಳದ ಹಸ್ತಪ್ರತಿ ಮತ್ತು ಸಂಶೋಧನಾಲಯದ ಡಾ| ಎಸ್.ಆರ್. ವಿಘ್ನರಾಜ ಅವರಿಗೂ, ಇದಕ್ಕೆ ಪ್ರಮುಖವಾಗಿ ಸಹಕರಿಸಿದ ಬಂಧುಗಳಾದ ಶ್ರೀ ರಾಜಗೋಪಾಲ ಕನ್ಯಾನ, ಶ್ರೀ ನಾರಾಯಣ ಶಾನುಭಾಗ-ಇವರೀರ್ವರಿಗೂ ಚಿರಋಣಿಯಾಗಿದ್ದೇನೆ.

ಈ ಕೃತಿಯನ್ನು ಮುದ್ರಿಸಿ ಹೊರತರಲು ಒಪ್ಪಿಗೆಯಿತ್ತ ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ| ಸಿದ್ದಲಿಂಗಯ್ಯನವರಿಗೆ, ಆಡಳಿತಾಧಿಕಾರಿ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ ಅನಂತಾನಂತ ವಂದನೆಗಳು.

ಪುಸ್ತಕದ ಮುಖಪುಟ ವಿನ್ಯಾಸ ಮತ್ತು ಸುಬ್ಬಣ್ಣ ಭಟ್ಟರ ಕಾಲ್ಪನಿಕ ಚಿತ್ರ ಮಾಡಿದ ಶ್ರೀ ವಿಘ್ನರಾಜ ಅಜೆಕ್ಕಳರಿಗೆ, ಪುಸ್ತಕ ವಿನ್ಯಾಸ ಮಾಡಿದ ಟಿ.ಕೆ. ಕಿಶೋರರಿಗೆ,

ಅಂದವಾಗಿ ಮುದ್ರಿಸಿದ ಸತ್ಯಶ್ರೀ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಅವರಿಗೆ, ಸಲಹೆ ಮತ್ತು ಪ್ರೋತ್ಸಾಹ ನೀಡಿದ ಬಂಧು ಶ್ರೀ ತೆಕ್ಕೇಕೆರೆ ಸುಬ್ರಹ್ಮಣ್ಯ ಭಟ್ಟ, ಗಮಕಿ ಅವರಿಗೆ, ಸಹಕಾರವಿತ್ತ ಅಣ್ಣ ಶ್ರೀ ಸುಬ್ರಹ್ಮಣ್ಯ ಭಟ್ಟರಿಗೆ, ತಮ್ಮಂದಿರಾದ ಚಿ| ಶ್ರೀಕೃಷ್ಣ ಭಟ್ಟ ಮತ್ತು ಚಿ| ಪರಮೇಶ್ವರ ಭಟ್ಟ ಇವರಿಗೆ, ನನ್ನ ಧರ್ಮಪತ್ನಿ ಚಿ|ಸೌ| ಶಾರದಾ ಕಾಣಿಚ್ಚಾರ್ ಮತ್ತು ಮಕ್ಕಳಾದ ಚಿ| ಭೀಮರವಿ ಮತ್ತು ಚಿ| ಈಶ್ವರಚಂದ್ರ ಇವರಿಗೆ, ತೆಕ್ಕೇಕೆರೆ ಕುಟುಂಬದ ಎಲ್ಲ ಬಂಧುಗಳಿಗೆ, ಕಸವಾಗಿದ್ದ ಪುಸ್ತಕವನ್ನು ರಸವಾಗಿಸಲು ಕಾರಣನಾದ ಕಿರಿಯ ಸಹೋದರ ಚಿ| ಹರಿಯಪ್ಪನಿಗೆ ಮತ್ತು ಈ ಸತ್ಕಾರ್ಯಕ್ಕೆ ಪ್ರೇರೇಪಿಸಿ ಆಶೀರ್ವದಿಸಿದ ನಮ್ಮ ತಾಯಿ ಶ್ರೀಮತಿ ಶಂಕರಿ ಅಮ್ಮನವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕೃತಿಯನ್ನು ಕೊಂಡು ಓದಿ, ಸದುಪಯೋಗಗೊಳಿಸುವ ಕನ್ನಡಾಂಬೆಯ ವರಪುತ್ರರೆಲ್ಲರಿಗೂ ಹಾರ್ದಿಕ ವಂದನೆಗಳು.

ದಿನಾಂಕ : 18-11-2010

ತೆಕ್ಕೇಕೆರೆ ಶಂಕರನಾರಾಯಣ ಭಟ್ಟ

ಪ್ರಸ್ತಾವನೆ

'ನಿಘಂಟು' ಎಂದರೆ ಕಠಿಣ ಶಬ್ದಗಳಿಗೆ ಅರ್ಥವನ್ನು ತಿಳಿಸುವ ಶಬ್ದಾರ್ಥಕೋಶ. ಕಾವ್ಯಗಳಲ್ಲಿ ಬಳಕೆಯಾಗಿರುವ ಕ್ಲಿಷ್ಟಪದಗಳಿಗೆ ಅರ್ಥವನ್ನು ಒದಗಿಸುವ ನಿಘಂಟು ಕಾವ್ಯ ರಸಾಸ್ವಾದನೆಗೆ ನೆರವಾಗುತ್ತದೆ. ಭಾಷೆಯ ಬಂಧದಲ್ಲಿ ಶಬ್ದದ ಜಾಲದಲ್ಲಿ ಹುದುಗಿರುವ ಭಾವನೆಗಳನ್ನು, ವಿಚಾರಗಳನ್ನು ಅರಿಯಲು ಶಬ್ದಾರ್ಥ ಜ್ಞಾನ ಬಹು ಪ್ರಮುಖ. ಶಬ್ದಗಳೆಂದರೆ ಭಾಷೆಯ ಜೀವ ಮತ್ತು ಮತ್ತು ಜೀವಾಳ. ಲೋಕದಲ್ಲಿ ಶಬ್ದಗಳಿಲ್ಲದ ವಸ್ತುಗಳಿಲ್ಲ-ಮಾತಿಲ್ಲ-ವಿಷಯಗಳಿಲ್ಲ. ಯಾವಾಗ ಮನುಷ್ಯ ಮಾತನಾಡಲು ಕಲಿತನೋ ಅಂದಿನಿಂದಲೇ ಶಬ್ದಗಳು ಭಾಷೆಯಾಗಿ ಅವನ ಜೀವನದ ಉಸಿರಾಯಿತು. ಭಾಷೆ ಯಾವುದೇ ಇರಲಿ ಅದನ್ನು ನುಡಿಯುವವನಿಗೆ ಅದರ ಶಬ್ದಾರ್ಥ ಜ್ಞಾನದ ಅರಿವಿರಬೇಕು. ಶಬ್ದಗಳನ್ನು ಅರ್ಥವರಿತು ನುಡಿಯುವುದು ಮತ್ತು ಇನ್ನೊಬ್ಬರು ನಮಗೆ ನೀಡಿದ ಶಬ್ದಗಳನ್ನು ವಿವೇಕಯುತವಾಗಿ ಅರ್ಥ ಮಾಡಿಕೊಳ್ಳುವುದು ಅಷ್ಟೇ ಮುಖ್ಯ. ಅದನ್ನೇ ಕಾಳಿದಾಸನು-

ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿ ಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ||

ಶುದ್ಧವಾದ ಭಾಷೆ ಬೆಳೆಯಲು ವ್ಯಾಕರಣ ಶಾಸ್ತ್ರವು ಶ್ರಮಿಸುವಂತೆ ಶಬ್ದಗಳ ಉತ್ಪತ್ತಿ ಅರ್ಥಸ್ಪಷ್ಟತೆಗೆ ನಿಘಂಟು ಸಹಕಾರಿಯಾಗುತ್ತದೆ. ಇಮ್ಮಡಿ ನಾಗವರ್ಮ, 'ನಿಘಂಟು ಸಕಲ ವಿದ್ಯೆಗಳ ಪ್ರದೀಪ' ಎಂದು ಕೊಂಡಾಡಿದ್ದಾನೆ. ನಿಘಂಟುವಿನ ಮುಖ್ಯ ಉದ್ದೇಶ ಒಂದು ಭಾಷೆಯಲ್ಲಿನ ಶಬ್ದಗಳ ಅರ್ಥ ವ್ಯಾಪ್ತಿ ಹಾಳಾಗದಂತೆ ನೋಡಿಕೊಳ್ಳುವುದು.

ಪಂಚದ್ರಾವಿಡ ಭಾಷೆಗಳಲ್ಲಿ ಕನ್ನಡ ಭಾಷೆಯು ಸಂಪದ್ಭರಿತವಾಗಿದೆ. ಅದರ ಶಬ್ದ ಭಂಡಾರ ವಿಸ್ತಾರವಾಗಿ, ವಿವಿಧತೆಯಿಂದ ಕೂಡಿದೆ. ಭಾಷೆ ನಿಂತ ನೀರಲ್ಲ, ಸದಾ ಬದಲಾವಣೆಗಳಿಂದ ಹರಿಯುವ ಜ್ಞಾನಪ್ರವಾಹ. ಯಾವುದೇ ಭಾಷೆಯಾಗಲಿ, ಸಾಹಿತ್ಯವಾಗಲಿ ಅನ್ಯ ಭಾಷೆಯ ಪರಿಚಯ, ಸಂಸರ್ಗ ಪ್ರಭಾವಕ್ಕೊಳಗಾದಾಗ ಆ

ಭಾಷೆಯ ಕೆಲವು ಶಬ್ದಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತದೆ. ಹಾಗೆಯೇ ಆಡು ಮಾತಿನಲ್ಲಿ, ಬರವಣಿಗೆಯಲ್ಲಿ, ಬೇರೆ ಭಾಷೆಯ ಶಬ್ದಗಳು ಸೇರಿಕೊಂಡು ಕನ್ನಡ ಕೋಶಗಳು ಬೆಳೆದಿದೆ. ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಕಡೆಂಗೋಡ್ಲು ಸುಬ್ಬಣ್ಣ ಭಟ್ಟರ ಶಬ್ದಬೋಧೆ ಹೊಸ ಹೊಸ ಶಬ್ದಗಳನ್ನು ಬಳಸಿ ಕೋಶ ಸೃಷ್ಟಿಯಾಗಿದೆ.

ಈ ಗ್ರಂಥವು ಕವಿಯ ಸ್ವಹಸ್ತಪ್ರತಿ. ಇಲ್ಲಿ ಗ್ರಂಥಕರ್ತನ ಹೆಸರು ಪೆರ್ವಾಯಿ ಗ್ರಾಮದ ಕಡೆಂಗೋಡ್ಲು ಕೃಷ್ಣಭಟ್ಟರ ಮಗ ಶ್ರೀಮಂತ ಪುತ್ರ ಸುಬ್ಬಣ್ಣನು ತನ್ನ ಸ್ವತಃ ಬರಹದಿಂದ ಬರೆದು ಪೂರೈಸಿದ-ಶಬ್ದಬೋಧೆ- ನಾನಾರ್ಥ ನಿಘಂಟು-ತತ್ವ ನಿರ್ಣಯ-ಆರೋಗ್ಯಕ್ಕೆ ಇರುವ ಆಚರಣೆ ವಗೈರೆ ಇರುವ ಪುಸ್ತಕಕ್ಕೆ ಶುಭಮಸ್ತು ಎಂಬುದಾಗಿಯೂ, ನಾನಾರ್ಥ ನಿಘಂಟಿನ ಅಂತ್ಯದಲ್ಲಿ ತಾರೀಖು- 18ಜುಲೈ 1893ನೇ ಇಸವಿಯಲ್ಲಿ ಸಮಾಪ್ತಿ ಎಂಬುದಾಗಿ ಕವಿಯು ತನ್ನ ಕಾಲವನ್ನು ತಿಳಿಸಿರುತ್ತಾನೆ.

ಶ್ರೀ ಸುಬ್ಬಣ್ಣಭಟ್ಟರವರು ಹೊಸಗನ್ನಡದ ಆರಂಭ ಕಾಲದಲ್ಲಿ ಅದರ ಪೂರ್ವಾಭಿವೃದ್ಧಿಗಾಗಿ ದುಡಿದ ಮಹನೀಯರಲ್ಲಿ ಓರ್ವರು. ಸಂಸ್ಕೃತ, ಕನ್ನಡ, ಸೋದರ ಭಾಷೆ ಹವ್ಯಕ ಕನ್ನಡ ಭಾಷೆಗಳಿಂದ ಅಪಾರ ಸಂಖ್ಯೆಯಲ್ಲಿ ಶಬ್ದಗಳನ್ನು ಆಮದು ಮಾಡಿಕೊಂಡು ಆ ಕಾಲದ ವಿಶೇಷ ಪರಿಕಲ್ಪನೆಗಳಿಗೆ ಸಂಗತವಾದ ಅಭಿವ್ಯಕ್ತಿಯನ್ನು ಕೊಡಲು ಈ ನಿಘಂಟಿನ ಮೂಲಕ ಪ್ರಯತ್ನಿಸಿದರು ಮತ್ತು ಸಂಸ್ಕೃತ-ಕನ್ನಡ ಶಬ್ದ ಭಂಡಾರವನ್ನು ವಿಸ್ತರಿಸಲು ಮಾಡಿದ ಮಹತ್ವದ ಪ್ರಯತ್ನಗಳಲ್ಲಿ ಇದೂ ಒಂದು. ಪ್ರತಿಯೊಂದು ನಿಘಂಟಿಗೂ ಅದರದೇ ಆದ ತತ್ತ್ವ ಇರುತ್ತದೆ. ಆ ತತ್ತ್ವವನ್ನು ತಿಳಿದುಕೊಂಡು ನಿಘಂಟುಕಾರ ಅದರ ವ್ಯಾಪ್ತಿ ಸ್ವರೂಪವನ್ನು ದೃಢಪಡಿಸುತ್ತಾನೆ. ಸುಬ್ಬಣ್ಣಭಟ್ಟರ ನಿಘಂಟುಗಳಲ್ಲಿ ಶಬ್ದಗಳ ಸಂಖ್ಯೆಗಳಿಗಿಂತ ಅವುಗಳ ಅರ್ಥ ನೀಡುವ ವೈಖರಿ ವಿಶಿಷ್ಟವಾಗಿದೆ.

ನಿಘಂಟು ರಚನೆ ಅತ್ಯಂತ ಶ್ರಮ ಸಾಧ್ಯವಾದ ಕಾರ್ಯ. ಹೊಸ ಹೊಸ ಭಾಷಾ ಸಮಸ್ಯೆಗಳನ್ನು ಅದು ಒಡ್ಡುತ್ತದೆ. ಇದು ನಿಘಂಟು ಸಂಪಾದನೆಯ ಸಂದರ್ಭದಲ್ಲಿ ಅನುಭವಿಸಿದ ರೀತಿ. ಶ್ರೀ ಸುಬ್ಬಣ್ಣಭಟ್ಟರು 'ಶಬ್ದಬೋಧೆ'ಯನ್ನು ಪ್ರಾರಂಭದಲ್ಲಿ ಅಕಾರಾದಿಯಾಗಿ ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಶಬ್ದ ಭಂಡಾರ ಮಿತಿ ಮೀರಿದಾಗ ಅದು ಅಸಾಧ್ಯವಾಗಿರಬೇಕು. ಇದರಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಪದಗಳಿವೆ. ಅದು ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಸ್ಪಷ್ಟವಾಗಿ ಗೋಚರಿಸುವುದು. ಇಲ್ಲಿ ಹೆಚ್ಚಾಗಿ ಸಂಸ್ಕೃತ ಶಬ್ದಗಳಿಗೆ ಕನ್ನಡದ ಅರ್ಥವನ್ನು ಕೊಟ್ಟಿರುತ್ತಾರೆ.

ಈ ಶಬ್ದಬೋಧೆಯ ವಿಶಿಷ್ಟತೆ ಎಂದರೆ ಕೆಲವರಿಗೆ ಇದು ದೋಷವಾಗಿ ತೋರಬಹುದು. ಯಾಕೆಂದರೆ ಈ ತನಕ ಯಾವುದೇ ಕೋಶದಲ್ಲಿ ಕಾಣದ ಅನೇಕ ಪದಗಳನ್ನು ಇಲ್ಲಿ ಕಾಣಬಹುದು.

ಅಡ್ಕೆ-ಮುಂಡೆ, ಅದಿವಿನ್ಯ-ದೊಡ್ಡಹೆಂಡ್ತಿ

ಗಬಾ-ಹಂಕಾರ, ಕೊಲಂಬ-ತುಂಬಿ

ವಾಸಯೋಗ-ಬುಕಿಟ್ಟು(ಸುಗಂಧ ಚೂರ್ಣ)

ಲವಿತ್ರ-ಕತ್ತಿ(ಕುಡಗೋಲು)

ಜಗಳಾ-ಜಾಗಟೆ, ಉಚಿತ-ಯಿನಾಮು(ತುಳುಪದ), ಇತ್ಯಾದಿ....

ಮುಂದೆ ನಾನಾರ್ಥ ನಿಘಂಟುಗಳಲ್ಲಿ ಸಮನಾದ ಅರ್ಥಗಳುಳ್ಳ ಅನೇಕ ಶಬ್ದಾವಳಿಗಳನ್ನು ಕೊಡಲಾಗಿದೆ. ತತ್ವ ವಿಚಾರ ನಿರ್ಣಯ ಭಾಗದಲ್ಲಿ ಏಕ ಸಂಖ್ಯೆಗಳಿಂದ ಶತ ಸಂಖ್ಯೆಗಳ ತನಕ ಶಬ್ದ ತತ್ವ ವಿಚಾರ ನಿರ್ಣಯಗಳನ್ನು ಕೊಡಲಾಗಿದೆ. ಶ್ರೀ ಸುಬ್ಬಣ್ಣಭಟ್ಟರು ಸಂಸ್ಕೃತ-ಕನ್ನಡ ಪಂಡಿತವರೇಣ್ಯರು. ಅಷ್ಟೇ ಅಲ್ಲದೆ ಸ್ವತಃ ವೈದ್ಯರು ಎಂಬುದಕ್ಕೆ ಇವರ ಆರೋಗ್ಯ ನಿರ್ಣಯ-ಆರೋಗ್ಯಕ್ಕೆ ಕಾರಣವಾದ ಆಚರಣೆಗಳು ದೃಢಪಡಿಸುತ್ತಿದೆ.

"ಸರ್ವೇಷಾ ವ್ಯವಹಾರಾಣಾಂ ಮೂಲಂ ಶಬ್ದಾರ್ಥ ನಿರ್ಣಯಂ". ಯಾವುದೇ ಒಂದು ಶಬ್ದದ ಸಮ್ಯಕ್ ಅರ್ಥ ತಿಳಿದರೆ ಸ್ವರ್ಗಸಮಾನವಾದ ಸುಖ ದೊರಕುವುದು. ನಮ್ಮ ನಾಡಿನ ವಿವಿಧ ಪ್ರದೇಶದ ನಿತ್ಯ ಜೀವನದಲ್ಲಿ ಬಳಕೆಯಾಗುವ ಸಾಮಾಜಿಕ ಉಪ ಭಾಷೆಗಳಿಂದ ಸಂಗ್ರಹ ಮಾಡಿ ತಯಾರಿಸಿದ ಅಪರೂಪದ ಶಬ್ದ ಸಂಗ್ರಹಗಳಿದ್ದು ವಿದ್ವಾಂಸರಿಗೂ, ಸಂಶೋಧಕರಿಗೂ ಉಪಯುಕ್ತವಾಗಲಿದೆ ಎಂದು ಅರಿತು ಈ ಹಸ್ತಪ್ರತಿಯನ್ನು ತೆಕ್ಕೇಕೆರೆ ಪೈಕಾನ ಶ್ರೀಯುತ ಟಿ. ಶಂಕರನಾರಾಯಣ ಭಟ್ಟರು ಪ್ರಕಟಿಸುವ ಇಚ್ಛೆಯನ್ನು ನನ್ನಲ್ಲಿ ವ್ಯಕ್ತಪಡಿಸಿದಾಗ ಧೈರ್ಯವಾಗಿ ಒಪ್ಪಿಕೊಂಡಿರುತ್ತೇನೆ. ಎಷ್ಟೇ ಪರಿಶ್ರಮಪಟ್ಟಿದ್ದರೂ ನಿಘಂಟು ಸಂಪಾದನೆಯು ನನ್ನ ಮೊದಲ ಸಾಹಸ. ಇದು ಅಗಾಧ ಜ್ಞಾನ ಸಂಪತ್ತಿನ ಗಣಿಯಾಗಿದೆ ನಿಜ. ಆದರೆ ಅದರಲ್ಲಿ ಸಾಕಷ್ಟು ಕುಂದು ಕೊರತೆಗಳು, ತಪ್ಪುಗಳು ಇರುವುದನ್ನು ತಿಳಿದು ಅಮರ ಸಿಂಹನ ಅಮರಕೊಶ, ಸಾಹಿತ್ಯ ವಿದ್ವಾನ್ ಶ್ರೀನಿವಾಸ ಗೋಪಾಲಾಚಾರ್ಯರವರ ಸಂಸ್ಕೃತ-ಕನ್ನಡ ಶಬ್ದಕೋಶ ಮುಂತಾದ ಗ್ರಂಥಗಳನ್ನಿಟ್ಟುಕೊಂಡು ಸರಿಪಡಿಸಲು ಪ್ರಯತ್ನಿಸಿದೆ. ಅಷ್ಟೇ ಅಲ್ಲದೆ, ಶ್ರೀ ಧ.ಮ. ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರು ಡಾ| ಇ.ಮಹಾಬಲಭಟ್ಟ ಅವರ ಸಹಕಾರವನ್ನು ಪಡೆದುಕೊಂಡಿರು ತ್ತೇನೆ. ಅವರಿಗೆ ನನ್ನ ಕೃತಜ್ಞತೆಗಳು. ಮತ್ತೆ ಕೆಲವೆಡೆ ಶಬ್ದರೂಪವನ್ನು

ನಿರ್ಣಯಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಅದನ್ನು ಹಾಗೆಯೇ ಬರೆದಿರುತ್ತೇನೆ. ಓದುಗರ ಅಪೇಕ್ಷೆಯು ಇನ್ನೂ ಹೆಚ್ಚಿಗೆ ಇರಬಹುದು. ಬಲ್ಲವರು ಯೋಗ್ಯ ಸೂಚನೆಗಳನ್ನು ಕೊಟ್ಟಲ್ಲಿ ಅವುಗಳನ್ನು ಸಹೃದಯದಿಂದ ಸ್ವೀಕರಿಸಿ ಮುಂದಿನ ಆವೃತ್ತಿಯಲ್ಲಿ ಇದಕ್ಕಿಂತಲೂ ಹೆಚ್ಚು ಉಪಯುಕ್ತವಾಗುವಂತೆ ಮಾಡುತ್ತೇನೆ.

ತಾ : 16–3–2010
(ಯುಗಾದಿ)

ಡಾ| ಎಸ್.ಆರ್. ವಿಘ್ನರಾಜ,
ಸಂಶೋಧಕ,
ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ,
ಧರ್ಮಸ್ಥಳ, (ದ.ಕ.)

ಪರಿವಿಡಿ

❀ ❀ ❀ ❀

- ೧ -

ಶಬ್ದ-ಬೋಧೆ
ನಾನಾರ್ಥ ನಿಘಂಟು-ತತ್ತ್ವ ನಿರ್ಣಯ
ಮತ್ತು ಆರೋಗ್ಯ ನಿರ್ಣಯ

–ಅ–

ಅಂಕ್ಯ– ಮೃದಂಗ ವಿಶೇಷ
ಅಂಗ– ಪುನಃ
ಅಂಗದ–ವಂಕಿ, ತೋಳುಬಂದಿ
ಅಗದಂಕಾರ–ವೈದ್ಯ
ಅಂಗನಾ–ನಾರಿ
ಅಂಗನಾ–ಶೂದ್ರನಾರಿ
ಅಂಗವಿಕ್ಷೇಪ–ಮೈಯಲುಗಿಸುವ ಚಿಹ್ನೆ
ಅಂಗಸಂಸ್ಕಾರ– ಶರೀರಕ್ಕೆ ಹಚ್ಚಿಕೊಳ್ಳುವುದು
ಅಂಗಾರ ವಲ್ಲರಿ–ಹೊಂಗೇಮರ ವಿಶೇಷ
ಅಂಗಾರ–ಇದ್ದಲು
ಅಂಗಿಕಂ–ಹುಬ್ಬೇರಿಸುವಿಕೆ
ಅಂಗುಳೀಯಕ–ಉಂಗುರ
ಅಂಗೈಸಿದ –ಹೊಳಕಿದ
ಅಂಘ್ರಿ–ಕಾಲಅಡಿ
ಅಂಜನ–ದಿಕ್ಕಾನೆ (ದಿಗ್ಗಜಗಳಲ್ಲಿ ಒಂದು)
ಅಂಜಲಿ–ಅಂಗಯಿ
ಅಂಜಿತ–ಅಪಜಯಹೊಂದದ
ಅಂಜೀರ–ಲಿಂಗ
ಅಂಡ–ತತ್ತಿ
ಅಂಡಕೋಶ–ತರಡು, ಬೀಜ
ಅಂಡಜ–ಮೀನು
ಅಂತಪ್ಪರೋಚಿತಂ–ರಾಣಿವಾಸಮನೆ
ಅಂತರಾಳ–ದಿಕ್ಕುಗಳ ಮಧ್ಯ ಪ್ರವೇಶ
ಅಂತರ್ದುಃಖ–ಚಿಂತೆ
ಅಂತರ್ಯಂ–ಸೀರೆ
ಅಂತರ್ವಂಶಿಕಾ–ಅಂತಪ್ಪು ರಾಧಿಕಾರಿಣಿ
ಅಂತರ್ವತ್ನಿ–ಗರ್ಭಿಣಿ
ಅಂತೇವಾಸಿ–ಶಿಷ್ಯ
ಅಂಧತಮಸಂ–ಕಗ್ಗತ್ತಲೆ
ಅಂಧು–ಪುಣ್ಯತೀರ್ಥ, ಬಾವಿ
ಅಂದೋಶುಕ–ಕಂಬಳಿ
ಅಂಬು–ಜಲ
ಅಂಬಭ್ರುತ–ಮೇಘ
ಅಂಬರಿ–ಗೊಲ್ಲತಿ
ಅಂಬಸ–ನೀರು
ಅಂಬಾ–ತಾಯಿ
ಅಂಬುಕಣಾ–ತುಂತುರುಹನಿ
ಅಂಬುಜ–ನೀರುಕುಜ್ಜೆ
ಅಂಭೋಗ–ತುಂಬಿಕೊಂಡಿರುವಿಕೆ
ಅಂಭೋರುಹಂ–ತಾವರೆ
ಅಂಶು ಮತ್ಪಲ–ಬಾಳೆಗಿಡ
ಅಂಶುಕ–ಉಡುವ ಧೋತ್ರ
ಅಂಸ–ಹೆಗಲು
ಅಕ್ಕಜಿಂ–ಹೊಟ್ಟೆಕಿಚ್ಚು
ಅಕ್ಕೆ–ವಾಸಸ್ಥಾನ
ಅಕ್ಷದೇವ–ಜೂಜಾಡುವವ
ಅಕ್ಷೀಬತಿ–ಜೂಜು
ಅಕ್ಷಾ–ಅಚ್ಚಿಕೋಲು
ಅಕ್ಷಿಗತ–ದ್ವೇಷಿಸುವವ
ಅಕ್ಷೀಭಂ (ಅಕ್ಷಿವ)–ಉಪ್ಪು

ಅಗರು-ಅಗುರು ಚಂದನ
ಅಗಸರ-ಊಳಿಗದವನು
ಅಗಿದಾ, ಅಳ್ಕಿದಾ-ಅಂಜಿಕೆಹೊಂದಿದವ
ಅಗೆ-ಮೊಳೆದೋರುವಿಕೆ
ಅಗ್ಗ, ಅಗ್ಗಿ-ಬೆಂಕಿ
ಅಗ್ಗಲೂ-ಹಬ್ಬಲೂ
ಅಗ್ಗಳೆ-ಬಲ್ಲಿದನು
ಅಗ್ಗಾ-ದೊಡ್ಡಸ್ತಿಕೆ
ಅಗ್ನಿಂವಾದ್ಯ-ಕರ್ಮಕರ್ತ
ಅಗ್ರಜನ್ಮ-ಬ್ರಾಹ್ಮಣ
ಅಗ್ರಧೀದಿಷು:-ಪುನರ್ವಿವಾಹಿತನಾದ ವಿಪ್ರ
ಅಗ್ರಂ, ಅಗ್ರಿಯಂ-ಶ್ರೇಷ್ಠವಾದ್ದು
ಅಘಾಪ-ದುಃಖಪರಿಹಾರಿ
ಅಚರರು-ದೇವತೆಗಳು
ಅಚ್ಚಿ-ಆವಿ
ಅಚ್ಛಾದನಂ-ಉಡುವ ಧೋತ್ರ
ಅಜಃ-ನಸುಗುನ್ನಿಗಿಡ, ಅಜ-ಜೀವ
ಅಜನ್ಯ-ಉತ್ಪಾತ
ಅಜಿಂಹಾ-ನೆಟ್ಟಗಿರುವುದು, ಸರಳವಾದ
ಅಜಿತ - ಅಪಜಯ ಹೊಂದದ
ಅಜಿನಯೋನಿ-ಜಿಂಕೆ, ಹೆಣ್ಣುಜಿಂಕೆ
ಅಜೌಜಿ-ಜೀರಿಗೆ
ಅಜ್ಞಾತ-ತಿಳಿಯದ್ದು
ಅಜ್ಞೆ, ಅಪವಾದ-ಆಜ್ಞೆ
ಅಟಮಟ-ಕಪಟ
ಅಟನೀ-ಬಿಲ್ಲಕೊನೆ
ಅಡಂಬರಃ-ವಾದ್ಯ ಸೌರಂಭ
ಅಡವಿಳಮಾಂಸ-ಅಲಗೆಯವನಿಗೂ
ಅಡಿವಣಿ-ಕೆಸರಿನಲ್ಲಾದ ಹಜ್ಜೆ
ಅಡೆ-ಸಗಣಿ, ಗೋಮಯ
ಅಡ್ಡೈ-ಮುಂಡೆ
ಅಣಸೂ-ಇಕ್ಕಟ್ಟು
ಅಣಾ-ಕುತ್ಸಿತಕ್ರಿಯೆ
ಅಣಿ-ಗಾಡಿ ಕತ್ರಿ [ಗಾಡಿಯ ಚಾಲಕ ಕುಳಿತುಕೊಳ್ಳುವ ಸ್ಥಳ]
ಅಣಿ-ಹೊಡೆ, ಗಡಿ
ಅಣಿಃ-ಸಿದ್ಧ
ಅಣಿಯರಂ, ಅಗುಂದಲೆ-ದೊಡ್ಡದೂ
ಅಣುಃ-ಚಿಕ್ಕದ್ದು
ಅಣ್ಮೆ-ಸಾಹಸ
ಅತನು-ಕಾಯರಹಿತ
ಅತಸೀ-ಕರಿಅಗಸೆ
ಅತಿ ಸೌರಭ-ಜೀರಿಗೆ ಮಾವು
(ಬಹಳ ವಾಸನೆಯುಳ್ಳ ಮಾವಿನಮರ)
ಅತಿಕ್ರಮ, ಅಭಿಕ್ರಮ - ಶತ್ರುಗಳ ಮುಂದಾಗುವಿಕೆ
ಅತಿಮುಕ್ತಾ-ಕಾಟು ಸೇವಂತಿಗೆ
ಅತಿರಿಕ್ತಃ-ಅಧಿಕವಾಗಿರುವುದು
ಅತಿವರ್ತಿನ-ಹದ್ದು ಮೀರುವಿಕೆ
ಅತಿಶೋಭನ-ಬಹುಶ್ರೇಷ್ಠನಾದವ
ಅತುಲಿ-ತನ್ನ ಸರಿಯಾದ್ದು
ಅತ್ತಪರಾ-ಕಾಳಗದಲಿಗೆ
ಅತ್ಯಂತೀನ-ಬಹಳ ಸಂಚಾರದ

ಅತ್ಯಯಃ, ಅಂತಃ-ಸಾಯುವುದು, ಮೀರುವಿಕೆ

ಅಥವಾ-ಹಾಗೂ

ಅರ್ಥಪ್ರಯೋಗ-ಬಲ

ಅದಃ-ಮುಂಗೈ

ಅದರ್ಪು-ನಂಬಿಗೆ

ಅದಸ್ತಾ-ಬಾಗಿಲುಮೆಟ್ಟು

ಅದಿತ್ಯಕಾ-ಬೆಟ್ಟದ ಮೇಲಿನ ಭೂಮಿ

ಅದಿಮುಕ್ಕಂ, ಅದಿರ್ಗಂತಿ-ವಸಂತದೂತಿ

ಅದಿರ್ಮುತ್ತೆ-ಜಾಜಿಹೂವಿನಗಿಡ

ಅದಿವಿನ್ನ-ದೊಡ್ಡಹೆಂಡ್ತಿ

ಅದೃಷ್ಟಂ-ಭಯ (ದಿಟ್ಟನಲ್ಲದ)

ಅದೇಷ್ಟ-ಉಪದೇಶ ಮಾಡುವ ಗುರು

ಅದೋರಣ-ಆನೆಮಾವಟಿಗ

ಅದ್ಧರಾ-ಮುಳುಗಿದ್ದು

ಅದ್ರುಕ್-ಕುರುಡ

ಅದ್ವನಿನಃ ಅಧ್ವಗಃ-ಮಾರ್ಗಸ್ತರು

ಅಧಟು, ಅರಣಂ-ಗರ್ವ

ಅಧರ್ಮಣ-ಸಾಲಕೊಂಡವನೂ

ಅಧಿಕರ್ಥ-ಅಧಿಕಸಂಪತ್ತುಳ್ಳ

ಅಧಿಕಾಂಗಂ-ಸೊಂಟದ ಝುಟ್ಟಿ

ಅಧಿಶ್ರುತಾ-ಅಧಿಕಾರಿಣಿ

ಅಧೀರಃ-ವ್ಯಾಕುಲಿಪಟ್ಟವ

ಅಧ್ಯಯನ-ಎಲ್ಲಾ ಓದುವದು, ಕಲಿಯುವಿಕೆ

ಅಧ್ಯಾ-ಜ್ಞಾನ

ಅಧ್ಯಾಪಕ-ಉಪಾಧ್ಯಾಯನು

ಅದ್ವರಃ-ಬಹಳ ತಿನ್ನುವವ

ಅನಡ್ವಾನು-ಎತ್ತುಗಳು

ಅನನ್ಯವೃತ್ತಿ-ಏಕಾಗ್ರಚಿತ್ರನೂ

ಅನವಸ್ಕರಂ-ಶುದ್ಧಗೊಳಿಸಲ್ಪಟ್ಟದ್ದು

ಅನಹಾ-ಬಲ

ಅನಾಗತಾರ್ತವಾ-ಮೈನೆರೆಯದ ಹುಡುಗಿ

ಅನಾತುರ-ಬ್ಯಾಡ, ತವಕವಿಲ್ಲದ

ಅನಾರ-ಸರ್ವದಿಕ್ಕುಗಳನ್ನು ಮುತ್ತಿಕೊಳ್ಳುವುದು

ಅನಾಹಾಶಂ-ಚಾಪೆ

ಅನಿತು-ಪ್ರಮಾಣಸೂಚಕ

ಅನುಕಃ ಅಭಕಃ-ಕಾಮುಖ

ಅನುಕಾಮಿನಾ-ಇಚ್ಛೆಬಂದಾಗ ಮಾಡುವವ

ಅನುಕೂಲ-ಉಪಕಾರ, ಹಿತವಾದ

ಅನುಕ್ತರ್ಶನಂ-ಹೆಂಡಕುಡಿವ ಬಟ್ಟಲು

ಅನುಗ-ಸಂಗಡಹೋಗುವುದು

ಅನುಜ-ಕುತ್ಸಿತನು, ತಮ್ಮ

ಅನೂಚಾನ-ವೇದಜ್ಞಾ

ಅನುನಯ-ಮೆಚ್ಚಿಸುವಿಕೆ

ಅನುಪ್ಲವ, ಅನುಚರ-ಸಂಗಡ ಬಂದವನು

ಅನುಭವ-ತಿಳಿಯುವದು

ಅನುಭೋಗ-ಸುಗಂಧದ್ರವ್ಯ

ಅನುರೋಧ, ಅನುವರ್ತ-ಕೂಡಿನಡವಪ

ಅನುಸಾರ-ಒಂದಕ್ಕೆ ಸಮಾನವಾದ ನಡೆಯುವಿಕೆ

ಅನುಹನಂ, ಅಡ್ಡವಣೆ-ಶ್ರೇಷ್ಠಾರ್ಥ
ಅನೂನಾ-ಕಡಿಮೆಯಿಲ್ಲದಿರುವದು
ಅನೂರ್ನನಕಂ-ಸಂಪೂರ್ಣವಾದದ್ದು
ಅನೇಕಪಃ-ಮದವಿಲ್ಲದ ಆನೆ
ಅನೇಕಾ-ಅರಳುವಂಥ ಮೊಗ್ಗೆ
ಅನೋಕ-ವೃಕ್ಷ
ಅನೃತಃ-ಸುಳ್ಳು, ಕೃಷಿ
ಆಪಂನಸತ್ವಾ-ಗರ್ಭಿಣೀ
ಅಪಕ್ರಯಂ-ಕಿಂಮತು
ಅಪಗನಃ-ಅಂಗ
ಅಪಗೀಣ-ಬಣ್ಣಿಸಲ್ಪಡುವದೂ
ಅಪಟು, ಅಭ್ಯ, ಅಮಿಕ-ರೋಗಉಳ್ಳವ
ಅಪಣಿಕ-ವ್ಯಾಪಾರಿ
ಅಪತೋಕ-ಗರ್ಭದಾಕುಳು
ಅಪದಾಂತರಂ, ಅವ್ಯವಹಿತಂ-
ಸೇರಿರುವುದು
ಅಪದಾನ-ಶುದ್ಧಕ್ರಿಯೆ ಅಪಧ್ವಸ್ತಃ,
ಅಭಿಭೂತಃತಿರಸ್ಕರಿಸಲ್ಪಟ್ಟವನು
ಅಪರಂಜಿ-ಒಳ್ಳೆಯವ
ಅಪರಾಧ-ಸತ್ಯ ತಪ್ಪಿಮಾಡಿದ್ದು
ಅಪರೋಕ್ಷ-ಮರೆಯಾದ್ದು
ಅಪಶದಃ-ನೀಚ, ಅಧಮ
ಅಪಸರ್ಪ- ವೇಷಧಾರಿ
ಅಪಸ್ಕರ-ರಥದ ಸಾಹಿತ್ಯ
ಅಪಾಮೃತ-ಸ್ವತಂತ್ರನು
ಅಪಾಸನಂ-ಕೊಲ್ಲುವಿಕೆ
ಅಪ್ರಕಾಂಡ-ಎಲೆಗಳುಳ್ಳ ಮರ
ದಂಟಲ್ಲದ ಗಿಡ
ಅಪ್ರಗುಣ-ಹೆದರಿಕೊಂಡಿರುವುದು
ಅಪ್ರಪದೀನಂ-ಹಾಜಾರ
ಅಪ್ರಮಾಣ-ಮೋಕ್ಷಾಂಗನೆ
ಅಪ್ರವೇಶ್ಯ-ಒಳಸೇರಕೂಡದು
ಅಬಾಂದಂ-ಅತ್ರಿಯಿಲ್ಲದು
ಅಭಯಾ-ಅವ್ಯಕ-ಅಣಿಲೆಕಾಯಿ
ಅಭಿಜ್ಞ-ಚತುರ
ಅಭಿನವಃ-ಹೊಸತಾದುದು
ಅಭಿನಿರ್ಯಾಣಂ-ಯುದ್ಧಕ್ಕಾಗಿ ರಾಜನ
ಪ್ರಯಾಣ
ಅಭಿಯಾತಿ, ಅಭಿಗಾತಿ-ಶತ್ರು
ಅಭಿವಾದ-ಕೈಮುಗಿವವನು
ಅಭಿಶವ-ಹೆಂಡಮಾಡುವುದು
ಅಭಿಷೇಣನಂ-ಯುದ್ಧಕ್ಕೆ ಹೊರಡುವವ
ಅಭಿಸಾರಿಕಾ-ಪುರುಷೇಯಿಂದ
ಏಕಾಂತ ಹೊಂದಿದವಳು.
ಅಭೀಪ್ಸಿತಂ-ಇಷ್ಟವಾದದ್ದು
ಅಭ್ಯಗ್ರಹ, ಅಭಿತ-ಹತ್ತಿರಕ್ಕೆ
ಅಭ್ಯಮಿತ್ರೀಣ-ಹಗೆಕೂಡೆಯುದ್ಧಕ್ಕೆ
ಹೋಗುವವ
ಅಭ್ಯವಾಹೃತಂ, ಅಶಿತಂ- ಭುಂಜಿಸಲ್ಪ-
ಡುವದು
ಅಭ್ಯಸಾಧನಂ-ಪರರಿಗೆ ಮೋಸ
ಮಾಡುವಿಕೆ
ಅಭ್ಯುದಯ-ಬೆಳವಣಿಗೆ
ಅಭ್ರಂಶಃ-ಧರ್ಮತಪ್ಪದೆ ಇರುವ
ಅಭ್ರಕ-ಕಲ್ಲುನಾರು
ಅಮರ-ಮರಣವಿಲ್ಲದ್ದು

ಅಮರ್ದುಗೆಯ್ಯಾ-ಚಂದ್ರ
ಅಮರ್ದುಗೈಯ್ಯನು-ಚಂದ್ರಬಿಂಬ
ಅಮರ್ದುಣಿವಗೆಯಾ-ರಕ್ಕಸರು
ಅಮರ್ಥ-ಪರರಿಗೆ ಹಗೆ ಮಾಡುವಿಕೆ
ಅಮರ್ವಕ್ಕಿ-ಚಕ್ರವಾಕ
ಅಮರ್ಷಣಃ-ಸಿಟ್ಟುಳ್ಳವನು
ಅಮಲಂ-ಅಭ್ರಕ
ಅಮಾಂಸ-ಬಲಿಷ್ಠ, ಶಕ್ತಿಯುಳ್ಳವ
ಅಮಾತ್ಯ-ಮಂತ್ರಿ
ಅಮಿಶಾ-ಭೋಗ್ಯವಸ್ತುಗಳ ಮೋಹ
ಅಮೂಹು-ಕುದುರೆಯ ನಡಿಕೆ
ಅಮೃತಂ-ಉದ್ಧಾರ, ಸುಧೆ
ಅಮ್ಮಯಂ-ಜಲವಿಕಾರ
ಅಯಃ ಅಶ್ವನಾರ-ಕಬ್ಬಿಣ
ಅಯತಿಃ-ಮುಂದೆಬರುವ ಸಮಯ
ಅಯಾಮಹ-ಎತ್ತರವಾಗಿರುವಿಕೆ
ಅಯೋಗ್ರಂ-ವಣಕೆ
ಅರಣಿ-ಅಗ್ನಿ ತೆಗೆವ ಮರ
ಅರಣ್ಯಾ-ವನ, ಕಾಡು
ಅರಸಃ-ಆಲಸ್ಯಗಾರ, ರಸವಿಲ್ಲದ
ಅರಾಳಂ-ಸುಟಿಯಾಗಿರುವುದು
ಅರಿ-ಸಾಲು, ಶತ್ರು
ಅರಿಲೂ-ನಕ್ಷತ್ರ
ಅರಿಷ್ಟಾತಾತಿ-ಶುಭವನ್ನುಂಟು ಮಾಡುವವ
ಅರಿಷ್ಟಾ-ಕಾಗೆ
ಅರಿಷ್ಟಾ-ಬೇವು
ಅರುಂತುದಃ-ಗೂಟೆತ್ತಿ ಮಾಡುವಿಕೆ, ಮರ್ಮ ಭೇದಕವಾದ
ಅರುಗುಲಿ-ಬೇಡರವ
ಅರುತುದು-ಬಿತ್ತಿಹೋದದ್ದು
ಅರುಲೂ-ಕೆಸರೂ
ಅರುವ, ಅರುವನು-ಉತ್ತಮಾ
ಅರುಹು-ಹುಣ್ಣು
ಅರ್ಚನೆ-ಶುಶ್ರೂಷೆ
ಅರ್ಜುನಿ, ಅಗ್ನ್ಯ-ಕರೆಯುವ ಹಸು
ಅರ್ಜುನಿಕಾ-ಪುಳಿಂದಾ
ಅರ್ತಿತಃ-ಅಪೇಕ್ಷಿಸಲ್ಪಟ್ಟದ್ದು
ಅರ್ತಿಸು-ಕೇಳಿಕೊಳ್ಳು
ಅರ್ತ್ತಿ-ಬೇಡುವವ, ಪೀಡೆ
ಅರ್ಥ ಪ್ರಯೋಗ-ಬಲ
ಅರ್ಥಿಅನುಜೀವಿ-ಚಾರಕ
ಅರ್ದಿಷ್ಟಂ-ಕಡೆದಮಜ್ಜಿಗೆ
ಅನ್ಯೂರ್ನಕಂ-ಸಂಪೂರ್ಣವಾದದ್ದು
ಅರ್ಭಕ-ಚಿಕ್ಕ ಮರಿಗಳು
ಅರ್ಯಾ-ವೈಶ್ಯಜಾತಿಯವಳು
ಅರ್ರಿಯ-ಉತ್ತಮವಿಪ್ರ
ಅರ್ಶ-ಮೂಲವ್ಯಾಧಿ, ಪಾಪಿ
ಅಲಂಕರಿಷ್ಣು-ಶೃಂಗರಿಸುವವನು
ಅಲಂಕರ್ಮಿಣ-ಕಾರ್ಯಸಮರ್ಥ
ಅಲಂಜರ-ಗುಡಾಣ, ಮಣ್ಣಿನ ಹೂಜಿ
ಅಲಗಣಿಸು-ಅಸಹ್ಯವಾಗು
ಅಲಬು-ಅಲ್ಲಾಡಿಸು
ಅಲರು-ಪುಷ್ಪ

ಅಲರ್ಕ-ಹುಚ್ಚುನಾಯಿ
ಅಲರ್ವಕ್ಕಿ-ಕೋಗಿಲೆ
ಅಲರ್ವಕ್ಕಿ-ತುಂಬಿ
ಅಲರ್ವೊಡೆಯಾ-ಕಾಮ
ಅಲಸ-ಬೇಸರಪಡು
ಅಲಾರಂ-ಕೊಳ್ಳಿ, ಬಾಗಿಲು
ಅಲುಬೂ-ಕರ್ಜೂ
ಅಲೋಕಃ-ಕಾಂತಿಯಿಲ್ಲದೆ ಇರುವವ, ಪ್ರಳಯ
ಅಲ್ಲಣಿ-ಮೇಳ
ಅವಂಧ್ಯ-ಫಲವುಳ್ಳವೃಕ್ಷ
ಅವಕಾಶಃ-ಸಾಲದೆ ಇರುವುದು, ಸುಯೋಗ
ಅವಕೇಶಿ-ಬಂಜೆಮರ.
ಅವಗೀತಃ-ನಿಂದೆಯುಳ್ಳವ, ಹಾಸ್ಯ
ಅವಗ್ರ-ಆನೆಹಣೆ
ಅವದಾರಣಂ-ಗುದ್ದಲಿ
ಅವದೀರ್ಣಂ-ಕರಗಿಸಲ್ಪಟ್ಟದ್ದು
ಅವದೂತಃ-ಅಲ್ಲಾಡಿಸಲ್ಪಟ್ಟದು
ಅವದ್ಯ, ಅಣಕ-ಜಾತ್ಯಾಚಾರವಿಲ್ಲದವನು
ಅವಧಾರಣಂ, ಅಭ್ರಂಶಃ-ಧರ್ಮತಪ್ಪದೆ ಇರುವ
ಅವನಂ-ತೃಪ್ತಿ ಹೊಂದಿಸುವಿಕೆ, ಪ್ರೀತಿ
ಅವನಾಪಿ-ಸಣ್ಣಮೂಗಿನವ
ಅವನೀತ-ವಿನಯವಿಲ್ಲದವ
ಅವಯವ-ಕೈ ಕಾಲು ಯೆಂಬವು
ಅವರಜಃ-ತಮ್ಮ
ಅವರೋಧ-ರಾಣಿವಾಸಸ್ಥಳ
ಅವರೋಹ-ಮರಕ್ಕೆ ಹೋದ ಬಳ್ಳಿ
ಅವರ್ತಂ-ಹೊಲತಿ
ಅವರ್ಣಿಣಃ-ಜರಿದಾಡುವನೂ
ಅವಲಗ್ನಂ-ಸೊಂಟ
ಅವಸಾ-ತ್ವರಿತವು
ಅವಸಿತ, ಅವಗತ-ಅರಿಕೆಯಾಗಲ್ಪಡುವದು
ಅವಸೆ-ಅಮಾವಾಸ್ಯೆ
ಅವಸ್ಕರ-ಆಮೆ
ಅವಸ್ಥೆ-ಸ್ಥಿತಿ
ಅವಾಗ್ರಂ, ಅವನತಂ-ಬಗ್ಗಿದ್ದು
ಅವಾಚಿ-ಮೂಕ
ಅವಾಜಿ-ತಲೆಬಗ್ಗಿಸಿಕೊಂಡವನು
ಅವಾಪಕ-ಕಡಗ
ಅವಾಸ್-ಬತ್ತಲೆಯಾಗಿರುವವ
ಅವಿಃಜಸ್ವಲೆ-ಮುಟ್ಟಾದವಳು
ಅವಿಕಲ-ಸಂಪೂರ್ಣವಾಗಿ
ಅವಿಚರ್ಚಿಕಾ-ತುರಿಗಜ್ಜು
ಅವೀಕ್ಷಿಪ್ರ-ಆಕ್ಷೇಪಿಸುವವ
ಅವೀಡಾ-ತಲೆಗೆ ಮುಡಿದ ಹೂ
ಅವ್ವಳಿಸು-ಹರಡು
ಅಶದಕ್ಷಿಣ-ರಹಸ್ಯಸ್ಥಳ
ಅಶಿವಾನಿಸ-ವೀರಭದ್ರ
ಅಶಿಶ್ವಿ, ಅವೀರ-ಮಕ್ಕಳಿಲ್ಲದವಳು, ವಿಧವೆ
ಅಶಿಷ್ಟ, ಅಪ್ಲಿಯಃ-ಸ್ವಲ್ಪವಾಗಿರುವುದು
ಅಶುಗ-ಸರಳು

ಅಶ್ಮಗರ್ಭ–ಪಚ್ಚೆರತ್ನ
ಅಶ್ರವ–ಹೇಳಿದ ಹಾಗೆ ಮಾಡುವವ
ಅಶ್ರುತ–ಕೇಳಲ್ಪಡದ
ಅಶ್ವಕರ್ಣಿನಿ, ಅರ್ಜುನ–ಮತ್ತಿಮರ
ಅಶ್ಮಜಂ–ಶಿಲಾಜಿತು
ಅಶ್ವೀಯಂ–ಕುದುರೆಯಗುಂಪು
ಅಷ್ಟಾಪದಂ–ಒಳ್ಳೆ ಬಂಗಾರ
ಅಸಕಳಿದದೂ–ಅತಿಕ್ರಮಿಸಿದ್ದು
ಅಸಕ್ಕಿ, ಅವೃದ್ಧಾ–ಅಂತಃಪುರದ ಚಾಕರಿಯವಳು
ಅಸತಿ–ಹಾದ್ರಿಗೆತ್ತಿ
ಅಸರ್ಶ–ಕನ್ನಡಿ
ಅಸವಃ–ಪ್ರಾಣಗಳು
ಅಸಿ–ಕತ್ತಿ
ಅಸಿಗಸ್ತಾ–ಮೃಗಾವಲಿಗ
ಅಸಿತಃ–ಕಪ್ಪ
ಅಸಿಹೇತಿ–ಕತ್ತಿಹಿಡಿದವ
ಅಸುಗೆ–ಅಶೋಕವೃಕ್ಷ
ಅಸುಧಾರಣಂ–ಪ್ರಾಣಧರಿಸುವುದು
ಅಸುಲು–ಅಕ್ರಮಿಸಿಕೊಂಡದ್ದು
ಅಸ್ತಃ–ನೂಕಲ್ಪಟ್ಟದ್ದು, ಸಮಾಪ್ತಿ
ಅಸ್ತಮಯ–ಕೆಳಗೆಹೋಗುವಿಕೆ
ಅಸ್ತರಣಂ –ಅಂಬಾರಿ
ಅಸ್ತ್ರಿ–ಬಿಲ್ಲುಗಾರ
ಅಸ್ಫುಟವಾಕ್–ತೊದಲು ಮಾತಿನವನು
ಅಹಂಕಾರ–ತನ್ನತಾನೆ ದೊಡ್ಡದು ಮಾಡುವದು, ಗರ್ವ
ಅಹಮಹಮಿಕಾ–ನಾನು ಗಟ್ಟಿಗನೆನ್ನುವಿಕೆ ಅಯೋದನಂಜನ್ಯಂ. ಅಸ್ಕಂದನಂ. ಅನೀಕಃ. ಅಭಿಸಂಪಾತಃ, ಅಭ್ಯಾಗಮ, ಅಹಮಹ
ಅಳರು, ಅದಿರ್ಪೂ–ಅಂಜಿಕೆ
ಅಳವಳಾ–ಆಲೋಚನೆ
ಅಳವಳಿ–ಸ್ಮೃತಿತಪ್ಪುವಿಕೆ
ಅಳಿ–ಸ್ನೇಹಿತಳು
ಅಳಿಂದ–ಅಂಗಳ
ಅಳಿಗವಿ–ಕೆಟ್ಟಕವಿ
ಅಳು–ಮಣ್ಣಗಡಿಗೆ
ಅಳುಂಬ, ಅಣೆಯರ, ಅಗುಂದಲೆ–ಸಂತೋಷಾತಿಶಯ
ಅಳುಕ್ಕೆ–ಮುಚ್ಚಿದ್ದು
ಅಳ್ಕಮ–ಅಜೀರ್ಣ
ಅಳ್ಕರ್ತನೊ–ಪ್ರೀತಿಯಿಂದೊಲಿದವನು
ಅಳ್ಪಡೆ–ಹುಚ್ಚುತನ

–ಆ–

ಆಂದ್ರಕಃ–ಹಸಿಶುಂಠಿ
ಆಉತ್ತ–ಭಾವ
ಆಕಂಪಿತಃ–ಅಲ್ಲಾಡಿಸಲ್ಪಟ್ಟಿದ್ದು
ಆಕರ–ಲೋಹರತ್ನಾದಿಗಳು
ಆಕರ್ಷಣ–ತನ್ನ ಕಡೆಗೆಯಳೆಯುವದು
ಆಕಸ್ಮಿಕ–ಆಶ್ಚರ್ಯ
ಆಕೀರ್ಣ–ಹರಡಲ್ಪಟ್ಟ
ಆಕುಃ–ಇಲಿ
ಆಖುಭುಕ್–ಬೆಕ್ಕು

ಆಕುಲಃ-ಕೆದರಿಕೊಂಡಿರುವುದು

ಆಕೆವಾಳ-ಶೂರ

ಆಕ್ರೀಡ-ಉದ್ಯಾನವನ

ಆಕ್ಷಾತಂ-ನುಡಿಯಲ್ಪಟ್ಟದ್ದು

ಆಕ್ಷಾರಣ-ಮೃಥುನಲುಕ್ಷೆ (ಅಪವಾದ)

ಆಖ್ಯಾ-ಹೆಸರು

ಆಖ್ಯಾತಂ-ಹೇಳಲ್ಪಟ್ಟ

ಆಖ್ಯಾತಿ-ಯಶಸ್ಸು, ಕೀರ್ತಿ

ಆಗತಃ-ಒಂದರಲ್ಲಿ ಮನಸ್ಸುಳ್ಳವ, ಆಗಮನ

ಆಗದಃ-ರೋಗಹರಔಷಧಿ

ಆಗಮ-ಬರುವಿಕೆ, ಶಾಸ್ತ್ರ, ಉತ್ಪತ್ತಿ

ಆಗಾರ-ವಾಸಸ್ಥಾನ

ಆಗಸ-ಆಕಾಶ

ಆಗಾಪಃ-ದುಃಖಪರಿಹಾರಕ

ಆಗಾವ-ಆ ಪರ್ವತ

ಆಘ್ರಾಣ-ಮೂಸಿನೊಡುವಿಕೆ

ಆಚಾಮಃ-ತೆನೆಗಂಜಿ

ಆಚಾರ್ಯ-ಪಂಡಿತ

ಆಚ್ಛೋದನಂ, ಆನೇಟಃ-ಬೇಟೆ

ಆಜಿನಃ-ಚರ್ಮ

ಆಜೀನಃ-ಜೀವನೋಪಾಯ

ಆಜ್ಯಃ-ತುಪ್ಪ

ಆಡುಪಾಡು-ತಿವಿದಾಟ

ಆಣಿ-ಗಾಡಿಕತ್ತರಿ

ಆತಗಂದಃ-ತಿರಸ್ಕರಿಸಲ್ಪಟ್ಟವ

ಆತಪತ್ರ-ಛತ್ರ

ಆತರಃ-ಹಡಗು ನಡೆಸುವವನ ಕೂಲಿ

ಆತಾಪಿನ್-ಕೆಂಪುಕಾಗೆ

ಆತುರ-ಆತ್ಯಾಶೆ

ಆತುರಃ-ರೋಗಉಳ್ಳವ

ಆತೋದ್ಯ-ನಾನಾವಾದ್ಯ, ವೀಣೆ

ಆತ್ಮಂಬರ್ಹಿ-ಹೊಟ್ಟೆಹೊರೆಯುವವ

ಆತ್ಮಘೋಶ-ಕಾಗೆ

ಆತ್ಮನು-ಜೀವನು

ಆತ್ಮಭೂತ-ಕಾಮ

ಆಧಾರ-ಕೆರೆ

ಆದಿಕಾರಣ-ಮೊದಲಿನ ಕಾರಣ

ಆದಿಭೂಃ-ಅಧಿಪತಿ

ಆದಿರೋಹಿಣಿ-ಏಣಿ

ಆದ್ರಂ-ರಸವೇರಿರುವುದು

ಆಧಾರ-ಆಶ್ರಯ

ಆನತಂ-ಬಗ್ಗಿದಂಥಾದ್ದು

ಆನತರೂ-ಪ್ರಸನ್ನರೂ

ಅನದ್ಧ-ಚರ್ಮವಾದ್ಯ

ಆನ್ಯಾ-ಬಾಯಿ

ಆನ್ವೀಕ್ಷಿಕಿ-ನೀತಿಶಾಸ್ತ್ರ, ತರ್ಕಶಾಸ್ತ್ರ

ಆಪಃ-ನೀರು

ಆಪಗಃ-ನದಿಗಳು

ಆಪಣ-ಮಳಿಗೆ

ಆಪನ್ನಃ-ಆಪತ್ತುಹೊಂದಿದವ

ಆಪಾನ-ಮದ್ಯಪಾನ

ಆಪೂಪಿಕಃ-ಭಕ್ಷಮಾಡುವವನು

ಆಪೋಯಲು-ಮಾಡಿದರು

ಆಪ್ಯಂ-ಜಲವಿಕಾರ
ಆಪ್ಲಾವ-ಸ್ನಾನ
ಆಬಂಧ-ಪಶುಕುತ್ತಿಗೆ ಮಣಿ
ಆಭೀಲಾ-ದುಃಖ
ಆಭವ್ಯೆ-ಹೆಚ್ಚುಮಂಗಲಾ
ಆಭೀಲಂ-ಹಲವುದುಃಖ
ಆಭೀರಪಲ್ಲಿ-ಗೊಲ್ಲರಪಾಳ್ಯ
ಆಮಮಃ-ರೋಗ
ಆಮಲಕಾ-ನೆಲ್ಲಿಕಾಯಿ
ಆಮಿಷಾಶಿನ್-ಮಾಂಸ ತಿನ್ನುವವ
ಆಮೂಲ-ದೊಡ್ಡದಾದದ್ದು
ಆಮೋದ-ಸಂತೋಷ
ಆಮೋದಿ-ಪರಿಮಳ ದ್ರವ್ಯ
ಆಮ್ನಾಯ-ವೇದ
ಆಮ್ರ-ಮಾವಿನಮರ
ಆಯತ-ಉದ್ದವಾದದ್ದು
ಆಯತನ-ಪರಿಶುದ್ಧ ಮನೆ
ಆಯುದಿಯಂ-ಆಯುಧಹಿಡಿಯುವ
ಆರ್-ಅರಚು, ಬೊಬ್ಬಿಡು
ಆರಕೋದಃ-ಹಿತ್ತಾಳಿ
ಆರಡಿ-ಆಟದಕಲ್ಲು
ಆರಾಮ-ಉಪವನ
ಆರಾಮ-ವನೆ, ತೋಟ
ಆರಾಶಿ-ಶತ್ರುವಿನದು
ಆರಾಳಿಕ, ಆಂದಸಿಕ-ಅಡಿಗೆಯವನು
ಆರೈದುಕೊಳ್ಳು-ಹುಡುಕಿಕೊಳ್ಳು
ಆರೋಗ್ಯ-ಆರೋಗದ ಸ್ಥಿತಿಯದ್ದು

ಆರೋಹಣ-ಸೋಪಾನ
ಆರ್ತಗಳ-ಗೋರಂಟಿ
ಆರ್ತನು-ಸಾಧು
ಆರ್ತಾ-ದೀನತ್ವದ
ಆರ್ತಿ-ಕೇಳವ, ತೊಂದರೆ
ಆರ್ದ್ರ-ಅರಚಿ
ಆರ್ಯ-ಗುರು, ಮಿತ್ರ, ಶ್ರೇಷ್ಠ
ಆರ್ಯಃ-ವೈದ್ಯ
ಆರ್ಯಾವರ್ತಃ-ಪುಣ್ಯಭೂಮಿ
ಆಲಂಭಃ-ಕೊಲ್ಲುವದೂ
ಆಲಗೆಯೆ-ತಡೆಯಲಾರೆ
ಆಲಾಪಃ, ಆಭಾಷಣಂ-ಗಮನಕಾಲಕ್ಕೆ ಊತಹೇಳುವದೂ
ಆಲಿ-ಚೇಳು, ದುಂಬಿ
ಆಲಿಂಗ್ಯ-ನಾನಾಮದ್ದಳೆ ಭೇದ
ಆಲಿವೆಳಗ-ಚಂದ್ರಬಿಂಬ
ಆವತಂಸಂ-ಕಿರುಗತ್ತಲೆ
ಆವರ್ತ-ಸುಳಿಗುಂಡಿ
ಆವಹ-ಧೂಳಿ, ಭೂವಾಯು
ಆವಹಾ-ಹೊರುವಿಕೆ
ಆವಳಿ, ಆಳಿ-ಸಾಲು
ಆವಿಕಃ-ತಂದೆ
ಆವಿರ್ಭವಿಸಿದ-ಹುಟ್ಟಿದಾ
ಆವೃತಂ-ಸುತ್ತಿಕೊಳ್ಳಲ್ಪಟ್ಟದ್ದು
ಆವೇಶನ-ಅಕ್ಕಸಾಲೆಕಾರ್ಖಾನೆ, ಶಿಲ್ಪಶಾಲೆ
ಆಶಂಸಿತಾ, ಆಶನು-ಪ್ರಿಯವಸ್ತು ಬಯಸುವವ, ಬಯಕೆ

ಆಶಾ-ದಿಕ್ಕು
ಆಶೀವಿಷಃ-ವಿಷಜಂತುಗಳ ಹೆಡೆ
ಆಶು-ಶೀಘ್ರ
ಆಶುಃ-ಕೆಂಪುಭತ್ತ
ಆಶುಗಃ-ವಾಯು
ಆಶ್ಮಾ-ಕಲ್ಲು
ಆಶ್ರಪಃ-ನೈರುತ್ಯ
ಆಶ್ರಯಾಶ-ಬೆಂಕಿ
ಆಶ್ವಿನಃ-ಆಶ್ವಿಜಮಾಸ
ಆಸಕ್ತಿ-ಪ್ರೀತಿ ಮಾಡುವಿಕೆ.
ಆಸನಂ-ಆನೆಭುಜ
ಆಸವಃ-ಹೆಂಡ
ಆಸಾದಿತಂ-ಹೊಂದಲ್ಪಟ್ಟಿದ್ದು
ಆಸಾರ-ಜಡಿಮಳೆ
ಆಸುರ-ಅತಿಶಯ
ಆಸೇಚನಕಂ-ಬಹಳ ಚೆಲುವಾದ್ದು
ಆಸ್ತರಣ-ಹೊದಿಕೆ, ಚಾಪೆ
ಆಸ್ತಾಲನ-ಚಪ್ಪರಿಸುವಿಕೆ
ಆಸ್ಪದಾ-ಸೇರುವಿಕೆ, ಸ್ಥಾನ
ಆಸ್ಫೋಟ-ಕಾಟುಮಲ್ಲಿಗೆ
ಆಸ್ಫೋಟನ-ಭುಜಲುಗಿಸುವುದು
ಆಸ್ಫೋತ-ಯೆಕ್ಕೆಗಿಡ
ಆಹತ-ಮುದ್ರೆಯುಳ್ಳ ನಾಣ್ಯ, ಢಕ್ಕೆ
ಆಹತಲಕ್ಷಣ-ಗುಣತ್ಯಾಗ ಪ್ರಸಿದ್ಧ
ಆಹಾರ್ಯ-ಬೆಷ್ಪಿ
(ತರಲ್ಪಡುವ, ಇಚ್ಛಾಜನ್ಯಜ್ಞಾನ)
ಆಹ್ವಯ-ನಾಮಧೇಯ
ಆಹ್ವಾನಂ-ಕರೆಯುವಿಕೆ
ಆಹ್ವಾನೆ-ಕರೆಯುವುದು
ಆಳಂಬಿ-ಇಚ್ಛೆಸುವಿಕೆ
ಆಳಿ-ಕಷ್ಟ
ಆಳು-ಮುಳುಗು
ಆಳೂಃ-ಮಣ್ಣುಗಡಿಗೆ

—ಇ—

ಇಂಗಃ-ಇಂಗಿತಃ, ಅಭಿಪ್ರಾಯ ಪ್ರಕಟಿಸುವುದು
ಇಂಗಡಲಕುವರ-ಚಂದ್ರ
ಇಂಗಡಲಣೆಗಿ-ಲಕ್ಷ್ಮಿದೇವಿ
ಇಂಗೋಲ್ವಿಲ್ಲಾ-ಕಾಮನು
ಇಂದನಂ-ಸಮಿಧೆ
ಇಂದಿಂದಿರಾ-ಭ್ರಮರಾ
ಇಂದಿರಾ-ಲಕ್ಷ್ಮೀ ದೇವಿ
ಇಂದೀವರ-ಕಂನೈದಿಲೆ
ಇಂದ್ರಾ-ನೀರುಬೇಕು
ಇಂದ್ರಾಕ್ಯಾ-ಇಂಗ, ಧೀರನೂ, ಇಂದಿರನು-ಚಂದ್ರ
ಇಂದ್ರಾದಾ-ಮತ್ತಿಗಿಡಾ
ಇಂದ್ರಿಯ-ಮನುಷ್ಯನಲ್ಲಿ ಮುಖ್ಯವಾದ ಭೇದ
ಇಂನ್ನೆಗ-ನಿಬಂಧನೆ
ಇಂಪಣ-ಒಗ್ಗಟ್ಟಾಗ
ಇಂಪು-ಸವಿ
ಇಂಬೂ-ಸ್ಥಳ
ಇಕ್ಷು-ಕಬ್ಬು

ಇಚ್ಛೆಗಾಡಿ–ರತಿಯೂ
ಇಚ್ಯಾ–ಶೀಲ
ಇಟ್ಟೆಣಿಸಿವೆ–ತುಂಬಿಕೊಂಡಿವೆ
ಇಡಿ–ತುಂಬು
ಇಡಿದಾ–ಹೂತುಕೊಂಡ
ಇತಿಹಾ–ಪಾರಂಪರ್ಯ ಉಪದೇಶಕಥೆ
ಇತಿಹಾಸ–ಪುರಾತನ
ಇತ್ಕೂ–ಕೊಲ್ಲು
ಇದ್ಧೆ–ಸ್ಥಳಯೆಂಬುವಂತದ್ದು
ಇದ್ವತಂ–ಇಷ್ಟವಾದ್ದು
ಇನಾ–ಶ್ರೇಷ್ಠ
ಇನಿತೂ–ಸವಿ
ಇನಿದೂ–ಸವಿ
ಇಪದಸ್ಥಿತಾ–ಆಚಾರದಿಂ ನಡವಿಕೆ
ಇಭ್ಯ–ಧನಾಢ್ಯ
ಇರಂಮದಃ–ಮೇಘದೊಳಗಿನ ತೇಜಸ್ಸು
ಇರುಬು–ಮೃಗಗಳ ಇಕ್ಕೆ ಕುಳಿ
ಇರುಬೂ–ಇಕ್ಕಟ್ಟುಳ್ಳ ಸ್ಥಳ
ಇರ್ಮ–ಹುಣ್ಣು
ಇರ್ಮಂ–ಸವಿಧೆ
ಇಷಃ–ಬಾಣ ಪ್ರಯೋಗಿಸುವುದು
ಇಷುದಿಃ–ಬತ್ತಳಿಕೆ
ಇಷ್ಟಕ್ಕೆ–ಅಲಂಕರಿಸಿದ
ಇಳ್ದುದೂ–ಸೆಳಕೊಂಡದ್ದು

–ಈ–

ಈಡಾಡು–ಚದುರಿಸು
ಈಡಿತಂ–ಹೊಗಲ್ಪಟ್ಟದ್ದು
ಈಪ್ಸ್ಯಾ–ತಳವಳಗೊಳುವದೂ
ಈರು–ಯೆರಡು
ಈಶಾನ್ಯ–ಈಶಾನಯೆಂಬ ದಿಕ್ಪಾಲಿಕನ ಕುರಿತ ದಿಕ್ಕು
ಈಶಿಕಾ–ಆನೆಕಣ್ಣಿಗುಡ್ಡೆ
ಈಶ್ವಾಸ–ಬಿಲ್ಲೂ
ಈಷಃ–ಆಶ್ವಿಜಮಾಸ
ಈಳಿಕಃ–ಈಟಿಕತ್ತಿ

–ಉ–

ಉಂಗತ–ಮೇಲಕ್ಕೆ ಬೆಳದ್ದು
ಉಚ್ಚ–ಉದ್ದ, ಎತ್ತರವಾದ
ಉಂದುರು–ಇಲಿ
ಉಂಳಾವಳಿ–ದೊಡ್ಡದು
ಉಕ್ತ, ಉದಿತಂ–ನುಡಿಯಲ್ಪಟ್ಟದ್ದು
ಉಕ್ತಿ–ಮಾತು
ಉಕ್ಷಾ–ಎತ್ತುಗಳು
ಉಗುತರು–ಉಜ್ಜಿಹೋಗು
ಉಗ್ರ–ಶಿವ
ಉಗ್ರಂ–ರೌದ್ರರಸ
ಉಚ್ಚ, ಉದಗ್ರ–ಬಹುಮೇಲಕ್ಕೆ ಬೆಳೆದು
ಉಚ್ಚಂಡ–ತ್ವರೆಉಳ್ಳವ
ಉಚ್ಚಳಿಸು–ಪಾರಾಗಿಹೋಗು
ಉಚ್ಚಾರ–ಅಮೇಧ್ಯ, ನುಡಿಯುವುದು
ಉಚ್ಚಾವಚು–ಪ್ರಪಂಚ ವಿಕಾರ
ಉಜ್ಜಗಿಸೂ–ಉದ್ಯೋಗಿಸೂ
ಉಝ್ಘುಡಿಗಂ–ದೊಡ್ಡದಾದುದು
ಉಡುಗೂ–ಎಡೆಬಿಡು

ಉಡುಗೋಲು-ಕತ್ತಿ
ಉಡುಪಂ-ಹರಿಗೋಲು
ಉತಂ-ಸುರಿಯಲ್ಪಟ್ಟದ್ದು, ಪ್ರಶ್ನೆ, ಅತಿಶಯ
ಉತ್ಕ-ಪ್ರಿಯವಸ್ತು ಬಯಸುವವ, ಉತ್ಸುಕನಾದ
ಉತ್ಕಂಠ, ಉತ್ಕಲಿತ-ಈಗ ಸಿಕ್ಕಬೇಕೆಂಬ ಯತ್ನ
ಉತ್ಕಠಃ-ಅಮಲುಕೋರ
ಉತ್ಕರ-ಸಮೂಹ
ಉತ್ಕರಃ-ಧಾನ್ಯಾದಿರಾಶಿ
ಉತ್ಕರ್ಷ-ಹೆಚ್ಚಾಗಿ, ಮೇಲ್ಮೈ
ಉತ್ಕೃಷ್ಟ-ಶ್ರೇಷ್ಠ
ಉತ್ತಂ-ರಸವೇರಿರುವುದು
ಉತ್ತಮರ್ಣ-ಸಾಲಕೊಟ್ಟವನು
ಉತ್ತರ-ಪ್ರತಿನುಡಿ
ಉತ್ತರಾಸಂಗ-ಶಲ್ಲೆಅರುವೆ
ಉತ್ತಾನಂ-ಆಳವಾಗದಿರ್ವದು
ಉತ್ತಾನಂ-ವಲೆ, ಉಬ್ಬಿರುವ
ಉತ್ತಾನಶಯ-ಮೊಲೆತಿನ್ನುವ ಮಗು, ಶಿಶು
ಉತ್ತುಃ-ಕ್ರುಶಿ (ಕೃಷಿ)
ಉತ್ಪಂನ-ವಯಸ್ಸಿನ ಹೋರಿ, ಹುಟ್ಟಿದ
ಉತ್ಪತ್ತಿ-ಫಲ
ಉತ್ಪತ್ಯ-ಹಾರುವ ಸ್ವಭಾವವುಳ್ಳವ
ಉತ್ಪತ್ರ-ಒಣಗಿದ ಮಾಂಸ
ಉತ್ಪಲಂ-ಕಂನ್ನೈದಿಲೆ
ಉತ್ಫುಲ್ಲಾ-ಅರಳಿದ್ದು
ಉತ್ಸರ್ಜನಂ-ದಾನಕೊಡುವುದು
ಉತ್ಸಾಹ-ಬೆಟ್ಟದನೀರು, ಇಚ್ಛೆ
ಉತ್ಸುಕ-ಇಷ್ಟವಾದ್ದು
ಉದಂತ-ವೃತ್ತಾಂತ
ಉದಕ್ಯ-ಮುಟ್ಟಾದವಳು
ಉದರ-ಹೊಟ್ಟೆ
ಉದರ್ಕ-ಭವಿಷ್ಯತ್ಫಲ
ಉದರ್ತನ-ಬಣ್ಣದ ಹುಡಿ
ಉದರ್ಶ, ಉದ್ದವ-ಉತ್ಸವ
ಉದವಸಿತಂ-ಮನೆಯು
ಉದಾತ-ಋಗ್ವೇದಬಲ್ಲವ
ಉದಾತಃ-ಸ್ವರಗಳು
ಉದಿಪೆ-ಉದಿಸಿದು, ಕರುಗುಲ್ಮಾದಿಗಳು
ಉದುಂಬರ-ನೈಋತ್ಯ
ಉದುಂಬುರಃ-ಅತ್ತಿಕಾಯಿ, ಷಂಡ
ಉದ್ಗತಂ-ಒಳಗಿಂದ ಮೇಲೆಬರುವಿಕೆ
ಉದ್ಗಾಢ-ಅತಿಶಯ
ಉದ್ಗಾರ್ಣ, ಉದ್ಗತಂ-ಮೇಲಕ್ಕೆ ತಳ್ಳಲ್ಪಟ್ಟದ್ದು
ಉದ್ಘಾಟನಂ-ನೀರೆತ್ತುವ ರಾಟೆ
ಉದ್ದಾನಂ-ಕಟ್ಟುವುದು
ಉದ್ವಾಸನಂ, ಉನ್ಮಾಥಃ-ಕೊಲ್ಲುವಿಕೆ
ಉದ್ಧರಣೆ-ಸೌಟು
ಉದ್ಧಾರ-ಶ್ರೇಷ್ಠಕಾರ್ಯ
ಉದ್ಧಾರ-ಸಾಲ, ಮೇಲಕ್ಕೆ ಎತ್ತುವುದು
ಉದ್ಭಿಜ್ಯ-ಮೊಳೆತು ಹುಟ್ಟಿದ್ದು
ಉದ್ಭಿತು-ನೆಲದಲ್ಲಿ ಹುಟ್ಟಿದದು

ಉದ್ರಾವ-ಮೋಡಿ ಹೊಗುವಿಕೆ
ಉದ್ವಾಂತ-ಮದವಿಲ್ಲದಾನೆ
ಉಧನ್ವಾ-ಶರಧಿ
ಉನ್ಮತಃ-ಹುಚ್ಚುಹಿಡಿಯುವುದು
ಉನ್ಮಾಥ-ಗಾಳ, ವಧೆ
ಉನ್ಮಾದ-ಚಿತ್ತಚಂಚಲ
ಉನ್ಮಾಳ-ಉದ್ದಕ್ಕೆ ಹೋಗುವ ದಂಟು
ಉಪಕಂಠ-ಹತ್ತಿರ
ಉಪಕರಣ-ಸಹಾಯಮಾಡುವುದು
ಉಪಕಾರ್ಯಾ-ಅರಸುಗಳ ಬಿಡಾರ
ಉಪಕ್ರೋಶ-ನಿಂದೆ
ಉಪಚಾಪ-ಉಪಾಯ
ಉಪತಾಪ-ರೋಗ, ಬಿಸಿ
ಉಪದಾ-ಅರಸಿನಲ್ಲಿ ಪರೀಕ್ಷೆ, ಕಾಣಿಕೆ
ಉಪದೇಶ-ಬುದ್ಧಿಹೇಳುವಿಕೆ
ಉಪನಿಧಿ-ಬಚ್ಚಿಡುವಿಕೆ
ಉಪನಿಶಕ್ಕರಂ-ರಾಜನದಾರಿ
ಉಪಪತಿ-ಮಿಂಡ
ಉಪಬರ್ಹಾ-ತಲೆಗಿಂಬು
ಉಪಭೋಗಿಸು-ತಿನ್ನು
ಉಪಮಾರ್ಗ-ಉತ್ತರಣೆ
ಉಪಯಾಮಃ, ಉದ್ವಾಹ-ಮದುವೆ
ಉಪರಕ್ತ-ಶರೀರ ಪೀಡೆಯುಳ್ಳವ
ಉಪರಕ್ಷಣಂ-ಬಾವುಟ, ಕಂಬ, ಕಾವಲು
ಉಪರಾಗ-ಗ್ರಹಣ
ಉಪರಿಸ್ಥಿತಂ-ಪೂಜಾಯೋಗ್ಯ ಹೊಸ್ತಿಲು
ಉಪಲಃ-ಕಲ್ಲು
ಉಪವನಂ-ಹಿಂಗಾರವೃಕ್ಷದಾಟಿವನ
ಉಪಶಲ್ಯ-ಸಮೀಪ ಪ್ರದೇಶ
ಉಪಶ್ರುತಂ-ಪ್ರತಿಜ್ಞೆ ಮಾಡುವದೂ
ಉಪಸರ್ಗಂ, ಉತ್ಪಾತ-ಪರರ ಹಾಗೆ ಮಾಡುವಿಕೆ, ಪೀಡೆ
ಉಪಸರ್ಜನಂ-ಪ್ರಧಾನವಲ್ಲದಿರುವುದು
ಉಪಸವ್ಯಾನಂ-ಶೀರೆ (ಸೀರೆ)
ಉಪಸ್ಪರ್ಶ-ಆಚಮನ
ಉಪಾಂಶು-ರಹಸ್ಯ ಸ್ಥಳ
ಉಪಾತ್ಯಯಃ-ಕ್ರಮತಪ್ಪುವದು
ಉಪಾಸಂಗಃ-ಬತ್ತಳಿಕೆ
ಉಪಾಸನಂ-ಧನುರ್ವಿದ್ಯಾ ಕಲಿವಿಕೆ
ಉಪಾಸನಂ-ಶೂಶ್ರುಷೆ
ಉಪಾಸಿತಂ-ಸೇವಿಸಲ್ಪಟ್ಟದ್ದು
ಉಪಾಹಾರ, ಉಪದ-ನಜೀರು, ತಿಂಡಿ
ಉಪಾಹಿತ-ಧೂಮಕೇತು, ಬೆಂಕಿಯ ಉತ್ಪಾತ
ಉಬ್ಬೆಗ-ಚಿಂತೆ
ಉಮಾಃ-ಕರಿಅಗಸೆ
ಉಮೆ-ಪಾರ್ವತಿ
ಉಮ್ಮಳಿಸ್ವದು-ಚಿಂತಿಸುವದು
ಉರಭ, ಉರಣ-ಕುರಿ
ಉರವಣೆ-ತ್ವರಿತಹೋಗುವಿಕೆ
ಉರಸೂತ್ರಿಕ-ಮುತ್ತಿನಕಂಠಿಸರ
ಉರಸ್ವಾರಿ-ಘನಎದೆ ಉಳ್ಳವ
ಉರೆ-ಚೆನ್ನಾಗಿ

ಉರ್ವರ-ಪೈರುಗಳಿಂದ ಕೂಡಿದ ಭೂಮಿ
ಉಲಪಃ-ಲತೆಗುಂಪು
ಉಲಿ-ಧ್ವನಿ
ಉಲೂಕ-ಗೂಗೆ
ಉಲೂಪಿನ್-ಚಪಲತ್ವಉಳ್ಳಮೀನು
ಉಲೂಬಲಂ-ಹರಳು ಕಲ್ಲು
ಉಲ್ಕಾಪಾತ-ವಾಯುಮಂಡಲ ಬೆಂಕಿ
ಉಲ್ಕಾಭೂತ-ಕೊಳ್ಳಿ
ಉಲ್ಬಣಂ-ಪ್ರಕಟವಾದದ್ದು
ಉಲ್ಮುಖಂ-ಕೊಳ್ಳಿ
ಉಲ್ಲಂಘುನಾ-ದಾಟಿ ಹೋಗುವಿಕೆ
ಉಲ್ಲಾಘು-ಆರೋಗ್ಯಪಡುವನು
ಉಲ್ಲೋಭ-ಮೇಲ್ಕಾಪು
ಉಲ್ಲೋಲ-ತೆರೆ
ಉಶತಿ-ಲವಂಗ
ಉಶಿತಃ-ಸುಡಲ್ಪಟ್ಟದ್ದು
ಉಷ್ಟ್ರ-ಒಂಟೆ
ಉಸ್ರ-ಕರೆಯುವ ಹಸು
ಉಳಲು-ಬಿಚ್ಚಿಹೋಗು

-ಊ-

ಊಟಜಃ-ಯಜ್ಞಶಾಲೆ
ಊರ್ಣಾಯುಃ-ಕುರಿಯ ತುಪ್ಪಟದಿಂದ ನೇಯ್ದ ಕಂಬಳಿ
ಊರವ್ಯಃ, ಊರುಜಃ-ವೈಶ್ಯ
ಊರ್ಣನಾಭ-ನೈಗೆಹುಳ [ಜೇಡ]
ಊರ್ದ್ವಕಃ-ಮದ್ದಳೆ ಬೇಧ
ಊರ್ಮಿ-ತೆರೆ
ಊರ್ವಜ್ಞು-ಉದ್ದಕಾಲುಳ್ಳವನು
ಊರ್ವಿನಂ-ದೊಡ್ಡದು
ಊಷರ-ಚವುಳಿಮಣ್ಣು
ಊಷ್ಮಾಯಗಮಃ-ಗ್ರೀಷ್ಮಋತು
ಋಗ್ವೇದ-ಕೊಂಡಾಟದ ತಿಳುವಳಿಕೆ

-ಐ-

ಐಕಿಲು-ಹಿಮ
ಐಕಿಲು ವೆಟ್ಟಣುಗಿ-ಪಾರ್ವತಿ
ಐಕಿಲುವೆಟ್ಟಳಿಯ, ಐ ಮೊಗಂ-ಶಿವ
ಐಕಿಲುವೆಳಗನು-ಚಂದ್ರ
ಐಸರಲನು-ಕಾಮ

-ಕ-

ಕಂಕಣ-ಕರಭೂಷಣ
ಕಂಕಣಿನ್-ಗೀರುಬಳೆಮೊದಲಾದ್ದು
ಕಂಕತೀ-ಬಾಚಣಿಗೆ
ಕಂಕುಳ-ಕಕ್ಷಾ
ಕಂಚುಕ-ಕಾದಿರುವವ, ಕವಚ
ಕಂಚುಕಃ-ಹೂವಿನತೊಗಲು
ಕಂಟಕಃ-ಪಾದರಕ್ಷೆ
ಕಂಟಾ, ಕರಿಷಾಬಕ-ಮರಿಆನೆ
ಕಂಠಹಾರ-ಕಂಠಿಸರ
ಕಂಡೂ-ತುರಿಸ್ವಿಕೆ
ಕಂದರಃ-ಕಂಠ
ಕಂಪಃ-ನಡುಗವದು
ಕಂಬಳ-ಕಂಬಳಿ

ಕಂಬಿಃ-ಕೈಮೇಲುಗಡೆ, ಸೌಟು
ಕಂಬುಗ್ರೀವಾ-ಕುತ್ತಿಗೆ ಮೂರುರೇಕೆ
ಕಂರ್ಣಿಕಾ-ಕಿವಿವಾಲೆ
ಕಂರ್ಣಿರತಃ-ಹೊರುವವಿಮಾನ, ಮೇನಾ
ಕಂರ್ಮಂದ-ಸನ್ಯಾಸಿ
ಕಂಶುಕ, ಕಂದುಕ-ಆಡುವಚೆಂಡು
ಕಲುಂತಿಕಾ (ಕಬಿಂತಿಕಾ, ಕೌಂತಿಕಾ)-ಸಬಳಿಗಾ
ಕಲುಟ-ಕೋವಿ ಮಾಡುವವ
ಕಕುಚ-ದಿಕ್ಕು
ಕಕುಭಃ-ವೀಣೆಯೆರಳು
ಕಕುಭಃ-ಸಂಗೀತ ಹಕ್ಕಿ
ಕಕೇಶವಾ-ತುರುಬು
ಕಕ್ಕಸದೊಳು-ಕ್ರೂರತ್ವ
ಕಕ್ಷಾ-ಆನೆಸೊಂಟ
ಕಚರಃ-ಪರದಿಗಾಡಾ ಬಟ್ಟೆ
ಕಚ-ಕೂದಲು, ಕುಚ್ಚು
ಕಚ್ಚಃ-ಸಮುದ್ರದ ತೀರ
ಕಚ್ಚಪ-ನವನಿದಿ, ಕೂರ್ಮೆ
ಕಚ್ಚಳಿ-ಕಡಗ
ಕಚ್ಚ್ಯೋ-ಕಜ್ಜಿ
ಕಟವಾಯಿ-ಕಣ್ಣು, ತಲೆ
ಕಟಹಾ-ಚಾಪೆ, ಹುರಿಯುವ ಬಾಣಲಿ
ಕಟಾಕ್ಷ-ಕಡೆಗಂಣುನೋಟ
ಕಟಿಃ-ಸೊಂಟ
ಕಟಿತಿ-ಆನೆಯಕೆನ್ನೆ
ಕಟಿಪ್ರೋತ-ಲಂಡು ಎತ್ತರದ ಸ್ಥಳ
ಕಟೀರಥಾ-ಹೊರುವವಿಮಾನ
ಕಟುಕ-ಖಾರ, ಕಟುರಸ
ಕಟುಕಾ-ಸುಳ್ಳು
ಕಟ್ವೇಕಾಂತ-ಬಹುರಹಸ್ಯ
ಕಡಂಗು-ಗಟ್ಟಿಗತನತೋರಿಸುವುದು
ಕಡಂಗೊಡ್ಲ ಸಣ್ಣಕೃಷ್ಣಭಟ್ಟ ಮಗ ಸುಬ್ಬಣ್ಣನ ಶಬ್ದಬೋಧೆ ಪುಸ್ತಕ
ಕಡಂಮರುತೆ-ಕಣಜದಹುಳ
ಕಡವ-ಇಚಿಲುಮರ
ಕಡಾರ, ಕಪಿಲ-ಪಿಂಗಳ ವರ್ಣ
ಕಡುಕು-ತಲೆಯಿಲ್ಲದ ಕಬಂಧ
ಕಡೆಯಂ-ರಂಗವಲಿ
ಕಣ-ಧಾನ್ಯದ ಒಂದು ಅಂಶ
ಕಣಾ-ಯಲಾ
ಕಣಿಶಂ-ಧಾನ್ಯತೆನೆ
ಕಣೀಯ-ಕೊಂಚ
ಕದಧ್ವನ್-ಕೆಟ್ಟದಾರಿ
ಕದಳಿ-ಬೆಳಿಜಿಂಕೆ, ಬಾಳೆಗಿಡ
ಕದಿಪು-ಬಹಳ
ಕದಿರು-ಕಿರಣಾ
ಕನಕಃ-ಬಂಗಾರ
ಕನಕಾಧ್ಯಕ್ಷ-ಖಜಾನೆಅಧಿಕಾರಿ
ಕನಕಾಲುಕಾ-ಚಿನ್ನದ ಬಟ್ಟಲು
ಕನಿಷ್ಠ-ತಮ್ಮ
ಕನೀನಿಕಾ-ಕಣ್ಣಿನ ಗುಡ್ಡೆ
ಕಪಾಲಃ-ತಲೆಬುರುಡೆ
ಕಪಿ-ಶ್ಲೇಶ್ಮವ್ಯಾಧಿ

ಕಪಿ–ಕೋತಿ
ಕಪಿಮುಖ–ನಂದಿಮೊದಲಾದವರು
ಕಪಿಶ–ಕೋತಿಬಣ್ಣದ್ದು, ಮದ್ಯ
ಕಪೀತನಃ–ಅಂಬಟೆಗಿಡ, ಬಾಗೆಮರ
ಕಪೋಣಿ–ಮೊಳಕೈ
ಕಪೋತಪಾಲಿಕ–ಹಕ್ಕಿಗೂಡು
ಕಪೋಲ–ಕೆನ್ನೆ
ಕಬರಿ–ತುರುಬು(ಹೆಂಗಸರ)
ಕಬಿ–ಕವಿ, ಕೂಡಿರುವದು, ಗಟ್ಟಿಗ
ಕಬ್ಬಾ–ಕಾವ್ಯ
ಕಬ್ಬಿಲ–ಬೇಡನು
ಕಮಠಿ–ಸ್ತ್ರೀ ಕೂರ್ಮ
ಕಮನಾ,–ಕದ್ವಾ–ನಿಂದ್ಯೆಗಾರ
ಕಮನೀಯ–ಮನೋಹರ ವಾದ್ಯ
ಕಮ್ರಃ–ಕಾಮುಖ
ಕರಂ–ಚೆನ್ನಾಗಿ
ಕರಂ–ಸಂತೋಷಾತಿಶಯ
ಕರಂಬಾ–ಮೊಸ್ರುಕಲಿಸಿದ ಹಿಟ್ಟು
ಕರಜಾತಾ–ಉಗುರು
ಕರಟ–ಕಾಗೆ
ಕರಣಾಸ–ಕೊಕ್ಕೆಮೂಗಿನವ
ಕರತಾಳ–ಚಪ್ಪಾಳೆ
ಕರದಂಡ–ತಾವರೆ ಹೂ
ಕರಭ–ಒಂಟೆಯ ಮರಿ
ಕರರುಹ–ಉಗುರು
ಕರವಾಳಿಕಾ–ಕೂಚಕತ್ತಿ
ಕರಶಾಖಾ–ಎಲ್ಲಾ ಬೆರಳು

ಕರಶೀಕರ–ಆನೆಸೊಂಡಿಲಹನಿ
ಕರಹಾ–ಕೆರ್ಪೂ
ಕರಹಾಟ–ತಾವರೆಗೆಡ್ಡೆ
ಕರಿ–ಆನೆ
ಕರಿಣಿ–ಹೆಣ್ಣಾನೆ
ಕರಿಣ್ಯ–ಹೆಣ್ಣಾನೆ
ಕರೀಷ–ಬೆರಣಿ
ಕರಿಮೊಗಂ–ಗಣಪತಿ
ಕರುಣ–ನವರಸಗಳಲ್ಲೊಂದು
ಕರುಬು–ಹೊಟ್ಟೆಕಿಚ್ಚು
ಕರೆ–ಕಳಂಕ
ಕರೇಣಿ–ಹೆಣ್ಣಾನೆ–ಗಂಡಾನೆ
ಕರೋಟ–ಕಮಂಡಲ
ಕರೋಟ–ಪಕ್ಕದೆಲುಬು
ಕರ್ಕಂ–ಬಿಳಿಕುದುರೆ
ಕರ್ಕಟಂ–ಕಠಿಣ
ಕರ್ಕರಿ–ಗಡಿಗೆ
ಕರ್ಜೂಕಲ್ಯಾ–ಆರೋಗ್ಯ ಪಡದವ
ಕರ್ಣ–ಕಿವಿ
ಕರ್ಣೆಜಪ–ಚಾಡಿಹೇಳುವವ
ಕರ್ತಃ–ದೊಡ್ಡವನು
ಕರ್ತಲೆವಣಿಯ–ಚಂದ್ರ
ಕರ್ದಮಾ–ಕೆಸರು
ಕರ್ಪಟಃ–ಜೀರ್ಣಬಟ್ಟೆ
ಕರ್ಪೂರಃ–ಕಪಾಲ
ಕರ್ಪೆ–ಮೋಡಿಸುವವ
ಕರ್ಬರಾ–ಕುಬೇರ

ಕರ್ಬುರಾ–ಕನಕಾ
ಕರ್ಮಕ್ಷಮಾ–ಕಾರ್ಯಾಸಮರ್ಥ
ಕರ್ಮಠಾ–ಕಾರ್ಯಮಾಡುವವ
ಕರ್ಮಣ್ಯಂ–ಕೂಲಿಕಾ
ಕರ್ಮಸಚಿವಾ–ಆಲೋಚನಾಧಿಕಾರಿ
ಕಲಂಬಾ–ಬಾಣ
ಕಲರವಾ–ಪಾರಿವಾಳಹಕ್ಕಿ
ಕಲಲಃ–ಶುಕ್ಲಶ್ರೋಣಿತ ಬೆರತಪಿಂಡ
ಕಲವಿಂಕ–ಗುಬ್ಬಿ
ಕಲಾ–ಜ್ಞಾನ
ಕಲಾದ–ಅಕ್ಕಸಾಲೆಯವ
ಕಲಾನಿಧಿ–ಚಂದ್ರ
ಕಲಾಪ–ತೀರಿಸುವಿಕೆ, ರಾಶಿ
ಕಲಾಯ–ನೆಲಕಡ್ಲೆ
ಕಲಿ–ಚತುರ್ಯುಗಗಳಲ್ಲಿ ನಾಲ್ಕನೆಯ ಯುಗ
ಕಲಿಕಲ–ದೊಡ್ಡಶಬ್ದ
ಕಲಿಕಾ–ಮೊಗ್ಗೆ
ಕಲಿಪು–ಕಸಗುಡಿಸುವವ
ಕಲಿಮಾದ್ಯಃ–ರಾಜಾಂನಭಕ್ತ
ಕಲಿಲಂ–ಹೋಗುವದು, ಅರಿವದು
ಕಲ್ಪಃ, ಕಲ್ಪಂತಃ–ಪ್ರಳಯಕಾಲ
ಕಲ್ಪಕ–ರಚಿಸುವವನು
ಕಲ್ಪನಾ–ಆನೆಶೃಂಗಾರ
ಕಲ್ಪವಿಧಾನ–ಸನ್ಯಾಸಿ
ಕಲ್ಮಶಃ, ಕರ್ಬುರ–ಚಿತ್ರಬಣ್ಣ
ಕಲ್ಯಂಕ, ಕಬ್ಬಡ–ತೂಗುಮಂಚ

ಕಲ್ಯಾಣ–ಶುಭ
ಕಲ್ಹಾಹಾರಂ–ಕೆಂಪುನೈದಿಲೆ
ಕಲ್ಲುಃ–ಬೆಟ್ಟದ ತುದಿ
ಕಲ್ಲೋಲ–ತೆರೆ
ಕವಚಾ–ಅಂಗಿ
ಕವಳ–ವಂದುತುತ್ತು
ಕವಾಟ, ಕದಾ–ಬಾಗಿಲು
ಕವಿಃ–ವಿದ್ವಾಂಸ
ಕವಿಕಾ–ಕಾಲುಗೊರಸು, ಲಗಾಮು
ಕವ್ಯಂ–ವಿಪ್ರಯೋಗ್ಯವಾದನ್ನ
ಕವ್ವರೆ–ಸಂಭ್ರಮ
ಕಶಕಿ–ವರೆಗಲ್ಲು
ಕಷಾಯಃ–ವಗರಾಗಿರುವರಸ
ಕಶ್ಮಲಂ–ಮೂರ್ಛೆ, ಕೊಳೆ
ಕಶ್ಯಂ–ಕುದ್ರೆಗುಂಪಿನ ಮದ ಪ್ರದೇಶ
ಕಷ–ಉಜ್ಜುವುದು
ಕಸವರ–ಚಿನ್ನ
ಕಷಿ–ಹಿಂಸಿಸುವ
ಕಳಂಕ–ಗುರ್ತು
ಕಳಾ–ನೃತ್ಯಗೀತಾದಿ ಕ್ರಿಯೆ
ಕಳಿಂಗ–ಕುಕ್ಕುಟಿಹಕ್ಕಿ
ಕಳಿಂಗ–ದುಷ್ಟ
ಕಳುಕ್ಕು–ಆಕಸ್ಮಿಕ
ಕಳೆ–ಕಾಂತಿ
ಕಳೆಬರಂ–ಕಾಯ
ಕಳ್ಯಾ–ಜೇನು
ಕಾಂಚಿ–ಮೂಕಾಭರಣ

ಕಾಂಡದಾನ-ಕೋಲೆಸೆಯುವವನು
ಕಾಂಡಪ್ರ್ರಷ್ಠಿ-ಆಂಯುಧ ಹಿಡಿದು ಜೀವಿಸುವವ
ಕಾಕಪಕ್ಷ-ಜುಲ್ಫಿಕೂದಲು
ಕಾಕಲಿ:-ಸೂಕ್ಷ್ಮಮಧುರಧ್ವನಿ
ಕಾಕು-ದೇಶಭಾಷೆ
ಕಾಕು:-ಧ್ವನಿವಿಕಾರ
ಕಾಕುದಂ-ದೌಡೆ
ಕಾಕೋದರ-ಸರ್ಪ
ಕಾಕೋಲ, ಕಾಳಕೂಟ-ವಿಷಬೇಧವು
ಕಾಕೋಲ:-ಮುದಿಕಾಗೆ
ಕಾಗೆನೆ-ನೀಲಿ
ಕಾಚ-ಗಾಜಿನ ಮಣ್ಣು
ಕಾಟ್ಯ-ಬಾವಿಯಲ್ಲಿರುವ
ಕಾಡುಬಕ:-ಕೋಗಿಲೆ
ಕಾತಿಯಕಂ, ಕಾಲಾನುಸಾರಿಕ-ಗಂಧ ಪರಿಮಳದ್ರವ್ಯ
ಕಾತ್ಯಾಯನಿ-ಕೆಂಪುಶೀರೆಅಜ್ಜಿ, ದುರ್ಗಾ ದೇವಿ
ಕಾದಂಬ-ಹಂಸಪಕ್ಷಿ
ಕಾದಂಬರೀ-ಹೆಂಡ
ಕಾದಲೆ-ಪ್ರಿಯಪತ್ನಿ
ಕಾದಲ್ಮೆ-ಸ್ನೇಹ
ಕಾದ್ರವೆಯಾ-ನಾಗಗಳೂ
ಕಾನಿನ:-ಮದುವೆಂಯಾಗುವವ, ಮೊದಲು ಹುಟ್ಟಿದವ
ಕಾಪಥ:-ಕೆಟ್ಟದಾರಿ
ಕಾಪಳ:-ಕತ್ತಲೆ
ಕಾಪುರ-ಕೋಟೆ
ಕಾಮ-ಇಛ್ಛೆ
ಕಾಮಂ-ಬಹಳವಾದ್ದು
ಕಾಮಕರ-ಹಂಕಾರ
ಕಾಮುಖಿ:ಕಾಮಿತಾ-ಕಾಮುಖಿನೂ
ಕಾಮುಖಿ-ಭೋಗಬಯಸುವಳು
ಕಾಯ-ಮೈ
ಕಾಯುವ-ಕಿಸುಗಂಣು
ಕಾರಂಡವ:-ನೀರುಹಕ್ಕಿ
ಕಾರ-ಕಿರಣ, ಕೆಲಸ
ಕಾರಾಗಾರ-ಬಂಧಿಖಾನೆ
ಕಾರಗಿ-ಬೆದರಿಸುವದು
ಕಾರಣ-ಕಷ್ಟ, ಕಾಯಸ್ಥ
ಕಾರಣಿಕ-ಗುಣಪರೀಕ್ಷಿಸುವವ
ಕಾರು-ಕಪ್ಪಾದಮೋಡ, ಶಿಲ್ಪಿ
ಕಾರುಣಿ-ದಯೆಉಳ್ಳವ
ಕಾರ್ಕಾಂತಿಕ-ಜೋಯಿಸನು
ಕಾರ್ತಸ್ವರಂ-ಬೆಳ್ಳಿ
ಕಾರ್ಪಣ್ಯ-ಹಣಕ್ಕೆ ಸೋತಮನಸು
ಕಾರ್ಬೂನು-ಕಬ್ಬಿಣ, ಜಿಮಣತನ
ಕಾರ್ಷಕಾ-ಬೇಸಾಯಗಾರ
ಕಾಲಕಂಠಕ:-ನೀರುಕೋಳಿ
ಕಾಲಕಾ:-ಕರಿಮಚ್ಚೆ
ಕಾಲಕ್ಷೇಪ-ಹೊತ್ತುಕಳೆಯುವದು
ಕಾಲಖಂಡ:-ಕಪ್ಪಾದ ಮಾಂಸ
ಕಾಲಪ್ರುಷ್ಠ-ಕರ್ಣನಬಿಲ್ಲು
ಕಾಲವ್ಯಾಪಿ-ಒಂದೇಯಾದಾತ್ಮಾದಿ

ಕಾಲಾಗರು–ಕೃಷ್ಣಾಗರು
ಕಾಲಾಯಸ–ಉಕ್ಕು
ಕಾಲುಶಿಲ್ಪಿ–ಸಮಕಾರನೂ
ಕಾವಣ–ರಂಗವಲಿ
ಕಾವನ್ನಯ್ಯನು–ವಿಷ್ಣು
ಕಾವ್ಯ–ಶುಕ್ರಾಚಾರ್ಯ
ಕಾಶ್ಮೀರ ಜನ್ಮ–ಕುಂಕುಮ
ಕಾಶ್ಯಪಿ–ಭೂಮಿ
ಕಾಷ್ಟಕುದ್ದಲಿ–ಮರದಗುದ್ದಲಿ
ಕಾಷ್ಟತಟು–ಕಬ್ಬಿಣದ ಕೆಲ್ಸದವ
ಕಾಷ್ಟಾಂಬುವಾಹಿನಿ–ದೋಣಿ
ಕಾಸಃ–ಕೆಮ್ಮು
ಕಾಸರಃ–ಕಾಟುಕೋಣ
ಕಾಳಂಜಿ–ಪೀತತಾಣೆ
ಕಾಳಿ–ಪಾರ್ವತಿ
ಕಾಳಿಂದಿ–ಯಮುನಾನದಿ
ಕಾಳ್ಗೆಯಿತ–ದುಶ್ಶ್ಕ್ರತ್ಯೆ
ಕಿಂಕಿಣಿ–ಕಿರುಗೆಜ್ಜೆ
ಕಿಂಜಲ್ಕ–ಹೂವಿನ ಕುಸುರು
ಕಿಂಶಾರು–ಭತ್ತದಸುಂಗು
ಕಿಕ್ಕಿರ್ರಿ–ಎತ್ತರವಾಗಿರುವುದು
ಕಿಟ್ಟಳಂ–ಪರಿಮಳ
ಕಿಟ್ಟಂ–ಸಮಸಮಲ
ಕಿಣ್ವಂ–ಹೆಂಡದೋಣಿ
ಕಿತ್ತಡಿ–ತಪಸ್ವಿ
ಕಿರಿಃ, ಕಿಟಃ–ಹಂದಿ
ಕಿರಿದು–ಅಲ್ಪವು
ಕಿರುಕುಳರು–ಸಾಮಾನ್ಯರು
ಕಿರೋ–ಮುಚ್ಚು
ಕಿಲಾನಿ–ಚರ್ಮರೋಗಉಳ್ಳವ
ಕಿಲಾಸ–ಸಿಬ್ಬು, ತುರಿಗಜ್ಜಿ
ಕಿಲುಬು–ಕಲ್ಮಷ, ಕಾಳಗ
ಕಿಲ್ಬಿಷ–ಅಪರಾಧ
ಕಿಮ್ಮಿರಃ–ಚಿತ್ರಬಣ್ಣ
ಕಿಶವಾ–ಜೂಜು ಆಡುವವಾ
ಕಿಷ್ಟ ಚತುಶ್ಯತಂ–೪೦ ಹಸ್ತ ಪರಿಮಾಣ ದಾರಿ
ಕಿಸಲಯ–ತಳಿರು
ಕಿಸುಗಟ್ಟಿದಾ–ಕೋಪಿಸಿದನೂ
ಕಿಸುಗಲ್ಲು–ಕೆಂಪುಗಲ್ಲು
ಕಿಸುರು–ಕೋಪ
ಕಿಸುವಣ್ಣ–ಕೆಂಬಣ್ಣ
ಕೀಕಾ–ಅಸ್ತಿ
ಕೀಚಕಃ–ಗಾಳಿಯಿಂದ ಒಡೆದ ಬಿದಿರು
ಕೀಟ–ಹುಳ
ಕೀಣಾ–ಆಲೋಚನೆ
ಕೀನಾಶಃ–ಯಮ
ಕೀಲಿಕಾ–ಕಟ್ಟಿಸಿಕೊಂಡವ
ಕೀಲಿಸು–ಬಿಗಿ
ಕೀಶಃ–ಕೋಡಿ, ಮಂಗ
ಕುಂಜಃ–ಲತಾಗ್ರ
ಕುಂಜರ–ಕರಿಆನೆಗುಂಪು
ಕುಂಠಃ–ಆಲಸ್ಯಉಳ್ಳವ
ಕುಂಡಿ–ಕಮಂಡಲು

ಕುಂಡೆ–ಕೊಳ

ಕುಂತಲಃ–ಕೂದಲು

ಕುಂಭಃ–ಕುಂಭಸ್ಥಳ

ಕುಂಭಃ–ನಮಸ್ಕಾರ

ಕುಂಭಃ–ಯಜ್ಞಶಾಲೆ, ಭದ್ರಬೇಲಿ

ಕುಃ–ಭೂಮಿ

ಕುಕುಂದರಂ–ಆಡಿನ ಮೇಲುಕುಳಿ

ಕುಕ್ಕುರಾ–ನಾಯಿ

ಕುಚಂದನಂ–ಕೆಂಪುಚಂದನ

ಕುಚರ, ಕುವಾದ–ಪರರಿಗೆ ದೋಷ ನುಡಿವವ

ಕುಚಿತಂ, ಕುಟಿಲಂ–ಸೊಟೆಯಾಗಿ ರುವದು

ಕುಟಜಃ–ಕಳ್ಳಿಮರ

ಕುಟ್ಟನಿ–ತಲೆಹಿಡಿಕಿ

ಕುಠ–ವೃಕ್ಷವು

ಕುಠಃ–ಬಿಂದಿಗೆ

ಕುಡರಃ–ಕಡೆಯುವಕಂಬ.

ಕುಸರಿ–ಮಡಿಗಳು

ಕುಡುಃ–ಕೊಂಕುವದು

ಕುಡ್ಯ–ಗೋಡೆ

ಕುಣಪಃ–ಶವ

ಕುತಪಃ–೧೭ ರ ಮೇಲೆ ೨೦ ರ ವಳಗೆ

ಕುತ್ಸನ–ನಿಂದೆ

ಕುತ್ಸಿಕಾ–ಜಾತ್ಯಾಚಾರವಿಲ್ಲದವ

ಕುನೀದ–ಹಣವಿನಬಿಡಿ

ಕುಪಾಣಿ–ಕತ್ತರಿ

ಕುಪ್ಯ–ತಾಮ್ರ, ಹಿತ್ತಾಳಿ, ಕಂಚು

ಕುಬ್ಜ–ಮುದುಕಿ, ಗೂನು

ಕುಬ್ಲಂಬಿರಿ–ಹೊಟ್ಟೆಹೊರಕೊಂಬವ

ಕುಮಾರಿಕ–ಕರ್ನಿಕೆ

ಕುಮುದ–ದಿಗ್ಗಜ

ಕುಮುದಬಾಂಧವ–ಚಂದ್ರ

ಕುಮುದ್ವಿತಿ, ಕುಮುದಿನೀ–ಬಿಳಿ ನೈದಿಲೆ

ಕುರಂಗ–ಜಿಂಕೆ

ಕುರುಪು, ಕೂನು–ಗುರ್ತು

ಕುರುಬಾ–ಕಪಟಿ, ಮೂಢ

ಕುರುವಾ–ದ್ವೀಪ

ಕುರ್ಪರ–ಮೊಳಕೈ

ಕುರ್ಪಾಸಕಃ–ಸ್ತ್ರೀಪುರುಷರ ಅಂಗಿಕುಪ್ಪಸ

ಕುರ್ವನಂ, ಕುರ್ದನಂ–ಚೆಂಡು, ಕ್ರೀಡೆ

ಕುಲ–ಪ್ರಾಣಿಗಳ ಗುಂಪು

ಕುಲಟಾ–ಹಾದ್ರಿಗೆತ್ತಿ

ಕುಲಪಾಲಿಕಾ–ಕುಲಸ್ತ್ರೀ

ಕುಲಾಯ–ಹಕ್ಕಿಗೂಡು

ಕುಲಾಲಃ–ಕುಂಬಾರ

ಕುಲಿ–ಮೀನುಗಳು, ಹಸ್ತ

ಕುಲಿ–ವಂಶ

ಕುಲಿನಾಹ–ಉತ್ತಮಾಶ್ವ

ಕುಲಿಶಂ–ವಜ್ರ

ಕುಲೀನಃ–ಒಳ್ಳೆಕುಲದವನು

ಕುವಲಯ–ನೈದಿಲೆ

ಕುಶಲ–ಶುಭ

ಕುಶಿಃ–ಕಬ್ಬಿಣದ ಸಾಮಾನು

ಕುಶೀಲದಾ–ಆಟಗಾರ
ಕುಶೇಶಯಂ–ಕಮಲ
ಕುಸುಂಬ–ಬಣ್ಣವುಳ್ಳವು
ಕುಸುಮ–ಹೂವು
ಕುಸುರಿ–ಕತ್ತರಿಸಿ
ಕುಸ್ರುತಿ–ಕಪಟ
ಕುಹಕ–ಮೋಸಗಾರ
ಕುಹನಾ–ತಿರಿದುಂಬುವವ, ಇಲಿ
ಕುಹರ–ನೆಲಮಾಳಿಗೆ
ಕುಹೂ–ಅಮಾವಾಸ್ಯೆ
ಕೂಕರಃ, ಕೂಣಿಕಃ–ಕೈಯಿಲ್ಲದವ
ಕೂಕುದಃ–ಕನ್ಯಾದಾನಮಾಡುವವ
ಕೂಟಕಂ–ನೇಗಿಲು
ಕೂಟಯಂತ್ರಂ–ಗಾಳ
ಕೂಪಕ–ಚಿಲುಮೆ, ಹಳ್ಳ
ಕೂಬರ–ಅಂಗಿ, ಒಬ್ಬಅರಸ
ಕೂರು–ಹದವಾದದ್ದು
ಕೂರ್ಗಣೆ–ಕೂರಂಬು
ಕೂರ್ಚ–ಭ್ರೂಮಧ್ಯ, ಕುಂಚ
ಕೂರ್ತನು–ಪ್ರೀತಿಯಿಂದೊಲಿದವ
ಕೂಲಂ–ನೀರತಡಿ
ಕೂಷ್ಮಲ–ಮೊಗ್ಗೆ
ಕೂಳ್ಮದಃ–ಕಾಡುದ್ದು, ಅಲಸಂಡೆ
ಕೃತಜ್ಞತೆ–ಉಪಕಾರದ ನೆನಪು
ಕೃತವ–ಕಪಟ
ಕೆಂಗಂಣು–ಕೋಗಿಲೆ
ಕೆಂಗದಿರಾ–ಸೂರ್ಯ
ಕೆಂಪಚಾನ–ಮನೋಹರವಾದ್ದು
ಕೆಕಃ–ನವಿಲುಧ್ವನಿ
ಕೆಕ್ಕಳಿಸಿತು–ಅತ್ಯಂತಭಯ
ಕೆಕ್ಕೆ–ಕೆನ್ನೆ, ಕಪಾಲಿ
ಕೆನೆತಟ್ಟಿ–ಶ್ರೇಷ್ಠಾರ್ತ
ಕೆರಊ–ಜೋಡು, ಮೆಟ್ಟು
ಕೆರಳ್ಚಿ– ರೇಗಿಸಿ, ತಲ್ಲಣಿಸಿ
ಕೆಲಂ–ಸಮೀಪ
ಕೆಲಚು–ಸಹಾಯ
ಕೆಸಮಲ್ಲಿಗೆ–ತಾವರೆ
ಕೆಳಿ–ಕ್ರೀಡೆ
ಕೇಣ–ಕೋಪ
ಕೇರು–ಗೋಡೆ
ಕೇಶಪಾಶಿ–ಜುಟ್ಟು
ಕೇಶಿ–ತಲೆಕೂದಲು
ಕೇಸರಃ–ಸುರಗೀಮರ
ಕೈಯೂರಂ–ಬಾಹುಪುರಿ
ಕೊಂಕು–ಗುರುತ್ವ
ಕೊಂಚೆವೆಟ್ಟಂ–ದಳೆದ, ಗುಹ
ಕೊಂಚೆ–ಸಂಕೇತಸ್ಥಳ
ಕೊಕಃ–ಚಕ್ರವಾಕಂ
ಕೊಟ–ಸುತ್ತನೀರುಸಿಕ್ತಕಂದ
ಕೊಟ್ಟಿಜ, ಕಪ್ಪ–ತೆರಿಗೆ
ಕೊಟ್ಟಿವಿ–ಬತ್ತಲೆಯುಳ್ಳವಳು
ಕೊಡಂಕೆ–ಕಿವಿ
ಕೊಡಃ–ಕಾಲಿಲ್ಲದ ಕುಂಟ
ಕೊಣಕಿಟ್ಟುದು–ದಾಟಿದ್ದು

ಕೊತ್ತಳೆ-ಕಾಗಿಯನೆರವಿ
ಕೊರಕಃ-ಮೊಗ್ಗೆ
ಕೊರಚಾಟ-ಕುತ್ಸಿತಾ
ಕೊಲಂಬ-ತುಂಬಿ
ಕೊಲಾಹಲ-ದೊಡ್ಡಶಬ್ದ
ಕೊಲ್ಲಣಿಗೆ-ಆಟವಾಡವುದು
ಕೊಲ್ಲಾರ-ಮಾರಾಮುಗಂಟು
ಕೊವಟರು-ಕುರುಬರು
ಕೊಸಗು-ಬೆಟ್ಟತಾವರೆ
ಕೊಳವೇರು-ಲಾವಂಛ
ಕೋಕನದಂ-ಕೆಂಪುತಾವರೆ
ಕೋಟರಃ-ತೂತು
ಕೋಟಲೆ-ಕಷ್ಟ
ಕೋಟಶಃ-ಡೊಂಣೆ
ಕೋಟಿ-ಬಿಲ್ಲಿನಕೊನೆ
ಕೋಟಲೆ-ನೋವು
ಕೋತಃ-ಕೊಳ, ಜಿಂಕೆ
ಕೋಮಲಂ-ಸುಕುಮಾರ
ಕೋಲಃ-ತೆಪ್ಪಹರಿಕೋಲು
ಕೋಶ-ಪೆಟ್ಟಿಗೆ
ಕೋಷಾಃ-ಹಕ್ಕಿಮೊಟ್ಟೆ
ಕೌಕ್ಷೆಯತ-ಖಡ್ಗ
ಕೌಟಲೇಯ-ಪತಿವ್ರತೆಮಗ
ಕೌಮುದಿ-ಬೆಳದಿಂಗಳು
ಕೌರಿಚ-ತಾಳವಾರ
ಕೌಶಲ್ಯ-ಚುರುಕಾದ ಬುದ್ಧಿ
ಕೌಶಿಕೆ-ಪಾರ್ವತಿ

ಕೌಶೇಯಂ-ಕ್ರಿಮಿಕೋಶದ ಪಟ್ಟೆ
ಕೌಹ-ದೊಡ್ಡಮೂಗು
ಕ್ರಂದನ-ಯುದ್ಧಭಟರ ಧ್ವನಿ
ಕ್ರುಂದ-ನೈಗೆಯವ
ಕ್ರುಕವಾಕ, ಕುಕ್ಕುಟ-ಕೋಳಿ
ಕ್ರುಛ್ರಂ-ಛಾಂದ್ರಾಯಣ ಮೊದಲಾದ ವ್ರತ
ಕ್ರುಜುಕ್ರೌಂಚ-ನೀರುಗೊಳಿ
ಕ್ರುತಂ-ಕತ್ತರಿಸಲ್ಪಟ್ಟದ್ದು
ಕ್ರುತಜ್ಞ-ಉಪಕಾರ ಮರೆಯದವ
ಕ್ರುತಿ-ಉಪಾಯಕಾರ
ಕ್ರುತಿಃ-ಚರ್ಮ
ಕ್ರುಪಣ-ಲೋಭಿ
ಕ್ರುಪಾ-ಕತ್ತರಿ
ಕ್ರುಪೀಠಯೋನಿ-ಅಗ್ನಿ
ಕ್ರುಶ-ಸಣ್ಣದು
ಕ್ರುಷ್ಣ-ರೋದನಂ
ಕ್ರುಷ್ಟಿಕಾ-ಕರಿಸಾಸಿಮೆ
ಕ್ರುಷ್ಣೆ-ಕಪ್ಪು
ಕ್ರೋಡ, ಕೊಲ-ಹಂದಿ
ಕ್ರೋಫಯಾಗಂ-ಹಸ್ತಪರಿಮಾಣಂ
ಕ್ರೋಷ್ಟಿ-ನರಿ
ಕ್ಲಿಷ್ಮ-ಪರಸ್ಪರಾಹತೆ ದುಃಖಪೀಡೆ
ಕ್ಷಣ-ಉತ್ಸವ
ಕ್ಷಣದಾ, ಕ್ಷಪಾ-ರಾತ್ರಿ
ಕ್ಷತ್ರಿಯಾಣಿ-ಕ್ಷತ್ರಿಸ್ತ್ರೀ
ಕ್ಷಪಾ-ಕರಿಸಾಸಿವೆ

ಕ್ಷಮೆ-ಭೂಮಿ, ತಾಳ್ಮೆ, ಮನ್ನಣೆ
ಕ್ಷಯ-ಪ್ರಳಯಕಾಲ
ಕ್ಷಯ-ಹಾಳು
ಕ್ಷಯ, ಕ್ಷೀಯಃ-ಕೆಟ್ಟು ಹೋಗುವಿಕೆ
ಕ್ಷವ-ಶೀನು
ಕ್ಷಾ-ಹೊಟ್ಟು ಸಿಪ್ಪೆ
ಕ್ಷಾಂತ-ಸೈರಿಸುವದಕ್ಕೂ, ಸಹನೆ
ಕ್ಷಾಭೃತು-ಬೆಟ್ಟ
ಕ್ಷಾಮಂ, ಕ್ಷೋಮತೆ-ಕೋಟೆಹಿಂದಿರುವ ಮನೆ
ಕ್ಷಾರಕ-ಶೋಧಿಸಿಕರಗಿದ ಮಣ್ಣು, ಪಕ್ಷಿಗಳ ಬೋನು
ಕ್ಷಾರಕ-ಹೆಸ್ರುಕ್ಯಾಮೊಗ್ಗೆ
ಕ್ಷಾರಮೃತ್ತಿಕಾ-ಚೌಳುಮಣ್ಣು,
ಕ್ಷೀಣಾದ್ವಾಂತೆ-ಕಿರುಗತ್ತಲೆ
ಕ್ಷೀರಂ-ಉದಕ
ಕ್ಷುತ್, ಕ್ಷುತಂ-ಶೀನುಗಳ ಹೆಸ್ರು
ಕ್ಷುದ್ರಾ-ಲೋಭಿ, ನೀಚ
ಕ್ಷುಧೆ-ಹಸಿವೆ, ಆಹಾರದ ಆಶೆ ಹುಟ್ಟಿಸುವಂಥಾದ್ದು
ಕ್ಷುಪ-ಕೊಂಬೆ, ಬೀಣುತುಂಬಿರುವ ಮರ
ಕ್ಷುರಕಾ-ತಿಲಕವೃಕ್ಷಾ
ಕ್ಷುರಿ-ನಾಯಿಂದ ಕ್ಷೌರಿಕ
ಕ್ಷುಲ್ಲಕ-ಸಣ್ಣದು
ಕ್ಷೋಮಂ-ಬಿಳಿ ವಸ್ತ್ರ
ಕ್ಷೇತ್ರ-ಶರೀರ, ಹೊಲ, ದೇಶ
ಕ್ಷೇತ್ರಜೀ- ಬೇಸಾಯಗಾರ
ಕ್ಷೇಮ-ದುಃಖಪರಿಹಾರವಾದ ಸ್ಥಿತಿ
ಕ್ಷೇಮಂಕರಃ-ಶುಭಮಾಡುವವ
ಕ್ಷೇಳಾ-ವಿಷ
ಕ್ಷೇಳಾ, ಕ್ಷೇಡಾ-ಸಿಂಹನಾದ
ಕ್ಷೌಮಂ-ನಾರಸೀರೆ
ಕ್ಷ್ಮಾ-ಧರಿತ್ರಿ

-ಖ-

ಖ-ಆಕಾಶ
ಖಂಡನರತ-ಕತ್ತರಿಸಲಿಕ್ಕೆ ಪ್ರೀತಿ ಮಾಡುವವ
ಖಂಡುಗಃ-ನೆಲಕಡ್ಲೆ
ಖಂಡೆಯ-ನಿಶ್ಚಯ, ಕತ್ತಿ
ಖಗಃ-ಪಕ್ಷಿ
ಖಚರಃ-ಪಕ್ಷಿ, ಗಂಧರ್ವ
ಖಡ್ಗ-ಕತ್ತಿ
ಖಡ್ಡತನ-ಜಿಡ್ಡುತನ
ಖದ್ಯೋತ-ಮಿಣುಕುಹುಳ
ಖದ್ಯೋತ-ಸೂರ್ಯ
ಖನತಿ-ನೇಗಿಲು ಹೋರುವವ
ಖನಿ, ಖಾನಿ-ಲೋಹರತ್ನಾದಿಗಳು
ಖನಿತ್ರ-ಕೈಗುದ್ದಲಿ
ಖರ-ಕುದುರೆಕಾಲಿನ ಆಡು, ಕತ್ತೆ
ಖರಂ-ಬಿಸಿ
ಖರ್ಜೂರ-ಬೆಳ್ಳಿ
ಖರ್ವರಿ-ಮೈಲತುತ್ತು
ಖರ್ವ, ಖಣಾ-ಗಿಡ್ಡ
ಖಲಿನ-ಕಾಲುಗೊರಸು

ಖಲಿನೀ-ಕಣಗಳ ಗುಂಪು
ಖಳ, ಖಳಲೆ-ಕಳ್ಳ, ಬಿರುಸಾಗಿರುವವ
ಖಾಡಾಖಾಡಿ-ಮೂಲಯುದ್ಧ
ಖಾದಿತ-ಭುಂಜಿಸಲ್ಪಟ್ಟದ್ದು
ಖಾರೀ-ಒಂದು ಖಂಡಗ, ೧೮೦ ಸೇರು
ಖೀಲಂ-ಸಾಲಾಗಿಲ್ಲದ ಭೂಮಿ
ಖುರಾ-ಕಾಲುಗೊರಸು
ಖುಲ್ಲಕಃ-ನೀಚ
ಖೇಟಃ-ಆಚಾರವಿಲ್ಲದವನು
ಖೇಣ-ಮತ್ಸರ
ಖೇಯ-ಸ್ತ್ರೀಕೂರ್ಮಮ, ಕಂದಕ
ಖೇಲಿ-ಬಯಸುವಿಕೆ, ಕ್ರೀಡೆ
ಖೋಡಿ-ಕೊರತೆ
ಖ್ಯಾತಗರ್ಹಣ-ನಿಂದೆ

-ಗ-

ಗಂಜಾ-ಹೆಂಡ ಮಾಡುವ ಸ್ಥಳ
ಗಂಡ-ಆನೆಕೆನ್ನೆ
ಗಂಡಶೈಲ-ಬೆಟ್ಟದಿಂದುರುಳುವಕಲ್ಲು
ಗಂದಮೂಶಿ-ಚುಂಚಿಲಿ
ಗಂದರಗಿನಿಯ-ಪರಮೇಶ್ವರಾ
ಗಂದರ್ವಾ-ಕತ್ತೆಕಿರುಬ
ಗಂಧವಹಾ-ನಾಸಿಕಾ, ವಾಯು
ಗಂಧಸಾರಃ-ಚಂದನ
ಗಂದಾ-ಕಣಿತಲೆಕೆಳದಾಡೆಗೂ
ಗಂಧಾಶ್ಮಾ, ಗಂಧಿಕಾ-ಗಂಧ
ಗಂಭೀರ-ಮಾನ, ಆಳವಾದ
ಗಂಹರಂ-ಬೆಟ್ಟದಗುಹೆ
ಗಗನಮಣಿ-ವೀರ
ಗಜತಾ-ಆನೆಗುಂಪು
ಗಜರು-ಧ್ವನಿಕೊಡು
ಗಟಸಿತು-ವಾದ್ಯನಾಮ
ಗಡಾವಣಿ-ವಾದ್ಯರಭಸಾ, ಘರ್ಜನೆ
ಗಡುಲಃ-ಏಳುಬಗ್ಗಿದಗುಜಾರಿ
ಗಣ-ಗುಂಪು
ಗಣಕಃ-ಜೋಯಿಸರು
ಗಣಿ-ಹೆಂಣು ಕುದುರೆಗುಂಪು, ಎಣಿಕೆ
ಗಣೆಯಂ, ಗಣಿತಂ-ಎಣಿಕೆಯಾದದ್ದು
ಗತಂ-ಮನಸ್ಸಿಗೊಪ್ಪಿದ ಮಾತು
ಗದಾತ್-ಆರೋಗ್ಯಪಡದವನು
ಗದಿರು-ಪ್ರತಾಪ
ಗಬಾ- ಹಂಕಾರ
ಗಯ್ಯಾತಿ-ಹಸ್ತಪರಿಮಾಣದಾರಿ
ಗರಿಸು-ಗಾಸಿ
ಗರಿಹ-ಕೇದಗೆ
ಗರುಡಾಗ್ರಜ-ಅರುಣ
ಗರುಡಿ-ವಾಸಸ್ಥಾನ
ಗರುತು-ರೆಪ್ಪೆ
ಗರ್ಗರೀ-ಮೊಸರುಕಡೆಯುವಗಡಿಗೆ
ಗರ್ತಾ-ನೆಲಮಾಳಿಗೆ
ಗರ್ಧನಃ-ಆಶೆಯುಳ್ಳವ
ಗರ್ಭಕ-ಕೇಶಮಧ್ಯಯಿರುವ ಹೂ
ಗರ್ಭಾಗಾರ-ಮಲಗುವಮನೆ
ಗರ್ಹ್ಯ-ಜಾತ್ಯಾಚಾರವಿಲ್ಲದ ಧರ್ಮ

ಗರ್ಹ್ಯವಾದಿ–ನಿಂದೆ ಆಡುವವ
ಗವಲ–ಎಮ್ಮೆಕೊಂಬು
ಗವಾಂ–ಗೋವಿನಹಾಲು, ಗೋಮೂತ್ರ
ಗವಾಕ್ಷ–ಗಾಳಿಕಿಟಕಿ
ಗವಾರ, ಗಾವಳಿ–ಧ್ವನಿ
ಗವಿ–ಗೊತ್ತು
ಗವೀನಂ–ಗೋಮೇಯುವ ಸ್ಥಳ
ಗವೇಷಿತಂ–ಹುಡುಕಲ್ಪಟ್ಟಿರುವುದು
ಗಶಕಃ–ನಡಿವಹಾದಿ
ಗಹಗಟೀಕೆ–ತೋಶ
ಗಹನ–ಕಾಮ
ಗಹನ–ಕೊರತೆಯನುಡಿ
ಗಹನ–ಹೋಗವದು
ಗಹನರೂ–ಬ್ರಾಹ್ಮಣರು
ಗಳಃ–ಕಂಡ
ಗಳಗಳನೆ–ತ್ವರಿಯಹತ್ತು
ಗಳಿತಂ–ಭುಂಜಿಸಿದ್ದು, ಜಾರಿಸಿದ್ದು
ಗಾಂಗೇಯ–ಚಿನ್ನ, ಬೀಷ್ಮಾಚಾರಿ
ಗಾಂದಾರಃ–ತಂತಿ, ಕೊಳಲುಧ್ವನಿ
ಗಾಡಿ–ಸೊಬಗು
ಗಾಡಿಸು– ತುಳಿದಾಡು
ಗಾಢ– ಬಹಳ
ಗಾಢಂ–ಅತಿಶಯ
ಗಾಣಿಕ್ಯಂ–ಗಣಿಕಾದಿಸಮೂಹ
ಗಾತ್ರ–ಶರೀರ
ಗಾತ್ರಾನುಲೇಪನಿ–ಗಂಧದಬಿಲ್ಲೆ
ಗಾರಣಾ–ದೂರು
ಗಾರುಕ್ಮತಂ–ಪಚ್ಚೆರತ್ನ
ಗಾವ–ಕಲ್ಲು
ಗಾಹ–ಗಂಭೀರ, ನೀರಲ್ಲಿ ಮುಳುಗುವ
ಗಿಚಲ್ಲ–ಕೂಸುಬ್ರಿ
ಗಿರಿಕಾ–ಚಿಟ್ಟೆಲಿ
ಗಿರಿಜ–ಅಭ್ರಕ
ಗಿರೆಚ್ಯತಾ–ಬೆಟ್ಟದಿಂದುರುಳುವಕಲ್ಲು
ಗಿರ್ಣೆ, ಗಿರಿ–ನುಂಗುವಿಕೆ
ಗಿರ್ರೆನಿ–ತ್ವರಿಯ ಹತ್ತುವದು
ಗಿಳಿತಂ–ಭುಂಜಿಸಲ್ಪಟ್ಟದ್ದು
ಗಿಳಿದೇರ–ಕಾಮ
ಗೀತ–ಹಾಡುಕಾರಿಕೆ
ಗೀರು–ವಚನಾ
ಗುಂಡಿಗೆ–ಜಲಪಾತ್ರೆ
ಗುಂಡು–ನೆರವಿ
ಗುಚ್ಚಕಾ–ಗೊಂಚಲು
ಗುಜಗುಂದು–ತಿರಸ್ಕಾರ
ಗುಜ್ಯು–ಕಿರಿದು
ಗುಣಃ–ಲಕ್ಷಣ
ಗುಣಕರುಗೊಂಡವನು–ಪ್ರೀತಿಯಿಂದೊಲಿದವ
ಗುಣ್ಪುಃ–ಗಾಂಭೀರ್ಯ
ಗುತ್ಸಃ, ಗುತ್ಸಾರ್ದ–ಸರಭೇದಗಳು
ಗುದಃ–ಗುದಸ್ಥಾನ
ಗುರುಃ–ಗುರುತ್ವ
ಗುಲ್ಫಃ, ಘುಟಿಕಾ–ಪಾದದ ಮೇಲಿನ ಮೊಳೆ

ಗುಲ್ಮಂ-ಪೊದೆ
ಗುಲ್ಮ:-ಎದೆಯೊಳಗಿರುವ ಕಪ್ಪು ಮಾಂಸ
ಗುಲ್ಮ:-ಹೊಗೆ
ಗುಲ್ಮಿನಿ-ಬಳ್ಳಿಗಳಗುಂಪು
ಗುಷ್ಟಿ-ವಂದನೆ, ಕಪಿವದನ
ಗುವಾಕ-ಅಡಿಕೆಮರ
ಗುಳ:- ಗಜಗಳ ಪಕ್ಕರಿಕೆ.
ಗೂಡಪಾರಿ-ಸರ್ಪ
ಗೂಡು-ದೇಹ
ಗೂದಂ-ಅಮೇಧ್ಯ:
ಗೆಂಟು-ಅತಿದೂರ
ಗೆಳತಿ-ಸಖಿ
ಗೊಟಕ:-ಕುದುರೆ
ಗೊಟು-ದೇಶ
ಗೊದಿ:-ಹಣೆ
ಗೊನ್ಮರಿ-ಹಂಸೆ
ಗೊರಣಂ-ಉದ್ಯೋಗ
ಗೊರವಾ, ಗೊಂದೆವಳಯಿಗೆಯಾ-ಈಶ್ವರಾ
ಗೊರಸೆ, ಖುರಪುಟ-ಕುದ್ರೆ ಆಡು
ಗೊರೆ-ಶಬ್ದಮಾತು
ಗೊಲಿಕಲ್ಲು-ಬಾಲಕರಾಡುವಕಲ್ಲು
ಗೊಲೆ, ಗೊಪ್ಪು-ಬಿಲ್ಲಿನ ಕಿವಿ
ಗೊಳಸು-ಸಂಕಲೆ
ಗೊಳಾಯ-ರೌತ
ಗೊಳ್ಮರಿ-ಹಂಸೆ
ಗೋ-ಆಕಳು, ಕಂಣು
ಗೋಣ-ಕಂಠ
ಗೋತ್ರ-ಗಿರಿಪರ್ವತ
ಗೋತ್ರ-ಗೋವುಗಳ ಕೊಯ್ಯುವವ
ಗೋತ್ರ-ಗೋಸಮೂಹ
ಗೋನಸ-ದೊಡ್ಡಹೆಬ್ಬಾವು
ಗೋಪ-ಗ್ರಾಮಾಧಿಕಾರಿ, ಗೊಲ್ಲ
ಗೋಪ: ಗೋಸಹ-ಗಂಧರಸ
ಗೋಪುರ-ಊರಬಾಗಿಲು
ಗೋಮಾಯು-ನರಿ
ಗೋಮಿನಿಂ, ಗೋವಸಾನಿ, ಗೋಮಯಿ-ಸ್ವಸ್ಥಳ
ಗೋಳ-ಗುಲ್ಮಿ
ಗೌ-ಎತ್ತು, ಬಸವ
ಗೌದೆಯ-ಉಡು
ಗೌರ:-ಬಿಳುಪು
ಗೌರಗಿ-ಸ್ವರಬಿಡು
ಗೌರವ-ಮಾನದ್ಯು, ಭಾರ
ಗೌರೀ-ನೆರೆಯದವಳು
ಗ್ರಥಿತ-ಕಟ್ಟಿದಮಾಲಿಕೆ
ಗ್ರಹ-ನವಗ್ರಹರು ಮುಂತಾದ
ಗ್ರಹ: ಗ್ರಹ-ಹಿಡುಕೊಳ್ಳುವದು, ತೆಕ್ಕೊಳ್ಳುವದು
ಗ್ರಹಣ-ಪೀಡಿಸುವಿಕೆ, ನಕ್ಷತ್ರಗಳಕೂಟ
ಗ್ರಹರಾಮ-ಮನೆಬಳಿಯ ಹಿತ್ತಲು
ಗ್ರಾಮ್ಯ-ಕೆಟ್ಟಮಾತು
ಗ್ರಾಮ್ಯಧರ್ಮ-ಸ್ತ್ರೀಸಂಗ
ಗ್ರೀಷ್ಮ-ಬೇಸಿಗೆ ಕಾಲ
ಗ್ರುತಯೋನಿ-ಅಗ್ನಿ

ಗ್ರುದ್ನು-ಆಶೆಯುಳ್ಳವ
ಗ್ರುಹಾ-ಸ್ತ್ರೀ
ಗ್ರುಹಾಕಃ-ಪರಾಧೀನನು
ಗ್ರುಹಾಪತಿ-ಸದಾದಾನ ಮಾಡುವವ
ಗ್ರುಹ್ಯಕಾ-ಸಾಕ್ಷಮೃಗ, ಪಕ್ಷಿಗಳು
ಗ್ಲಸ್ತ-ಅಶಕ್ತಿಸ್ವರ, ತಿನ್ನಲ್ಪಟ್ಟ
ಗ್ಲಾನಃ ಗ್ಲಾಸು-ದುರ್ಲಬನು
ಗ್ಲೌ-ಗ್ಲಾನಂ-ಚಂದ್ರ

-ಘ-

ಘಂಟಾಪಥಃ-ರಾಜಮಾರ್ಗ
ಘಟಿಃ-ಪಾತ್ರೆ
ಘಟೀಯಂತ್ರ-ನೀರಲಾಟೆ
ಘಟ್ಟಿಡೆ-ಘಾಯ
ಘನಃ-ಮೇಘಾ
ಕೊಲ್ಲುವದು
ಘಾಸ-ಪಶುತಿನ್ನುವಹಣ್ಣು
ಘೂರ್ಣಿಕಾ-ತಿರುಗಿಬೀಳುವವ;
ಘಾಸಿ-ತಾಪ
ಘೋಷಣಃ-ಗಟ್ಟ್ಯಾಗಿ ಕೂಗುವಿಕೆ
ಘ್ರಾಣಃ -ನಾಸಿಕ

-ಚ-

ಚಂಗಳವೆಯಾಲ-ಕಂನ್ಯೆದಿಲೆ
ಚಂಗುಡಿ-ಹವಳ
ಚಂಚಲಾ-ಚಪಲಾ, ಮಿಂಚು
ಚಂಚಿ-ಕೊರಡೆ
ಚಂಡಾತಕಂ-ಸೂಳೆಯಚಲ್ಲಣ
ಚಂದ್ರ-ತಿಂಗಳು, ನಕ್ಷತ್ರಗಳ ಅಧಿಪತಿ
ಚಂಬೂಂನು-ಸುವರ್ಣ
ಚಕಿತಾ-ನಡುಗುವದು
ಚಕ್ಕಂದೊಳಲಿದೆರ-ಯಮ
ಚಕ್ಕನೆ-ಬೇಗ
ಚಕ್ರಂ-ಗಜಾದಿ ಸೇನೆ
ಚಕ್ರಾಂಗಃ-ಸಾಮಾನ್ಯಹಂಸೆ
ಚಕ್ರಿವತ್-ಗಾರ್ದಭ
ಚಕ್ಷು-ಕಣ್ಣು
ಚಕ್ಷು-ದೃಷ್ಟಿ
ಚಕ್ಷುಶ್ರವಾ-ಸರ್ಪಾ
ಚಚಲಿಕಾ-ತುಂಬಿ
ಚಚ್ಚರಂ, ಚಕ್ಕನೆ-ಬೇಗ
ಚಟಕಃ-ಹೆಣ್ಣುಗುಬ್ಬಿ
ಚಟುಲಾ-ಸಮರ್ಥ
ಚತುರಃ-ಆಲಸ್ಯವಿಲ್ಲದವ
ಚತುರ್ಬದ್ಧಂ-ಧರ್ಮಾರ್ಥ ಕಾಮ ಮೋಕ್ಷಂ
ಚತ್ರಾಣ-ಒಂದುಕಾವ್ಯ
ಚತ್ವರಂ-ಶುದ್ಧಸ್ಥಳ
ಚದಿಕಾ-ಮನೆ ಮೇಲುಹೋದಿಕೆ
ಚಪಲ-ಶೀಘ್ರ
ಚಪ್ಪರಣೆ-ಧ್ವನಿ
ಚಮೂ-ಸೇನೆಗಳು
ಚಮೂರು-ದೊಡ್ಡ ಮೃಗ
ಚಯ್ಯಾ-ಮೃಗಚಲ್ಲಾಟವು
ಚರಮ-ತುದಿಯಾದದ್ದು
ಚರಾಚರ-ನಡಿಯುವುದು ನಡೆಯದ್ದು

ಚರಿತಾ-ನಡತೆ
ಚರಿಷ್ಣು-ಜಂಗಮದ್ರವ್ಯ
ಚರ್ಚಾ-ಚಿಂತೆ, ವಿಚಾರ
ಚರ್ಮಿ-ಯುದ್ಧಹಲಿಗೆಯುಳ್ಳ
ಚರ್ವಣಾ-ನೀಲಿನೊಣ
ಚರ್ಷಿಣೆ-ಹಾದ್ರಿಗತ್ತಿ
ಚಲನಂ, ಚಲಂ-ಕದಲಾಡುವಸ್ವಭಾವ
ಚಲ್ಲವರ್ತರು-ನಂಬಿಸಿತಿನ್ನುವರು
ಚಲ್ಲವರ್ತಾ-ನಟ್ಟಿಸಿತಿಂಬವ
ಚಲ್ಲಿ-ನಿಶ್ಚಯ
ಚವಲಂಬ-ಕಣ್ಣಿನ ರೆಪ್ಪೆ
ಚಷಕಃ-ಹೆಂಡಕುಡಿವಬಟ್ಲು
ಚಷಾಲ-ಯೂಪಸ್ತಂಭದ ಬಳೆ
ಚಳೆಯಾಂ-ಚಲ್ವಿಕೆ
ಚಾಂತ-ಕತ್ತರಿಸಲ್ಪಟ್ಟದ್ದು
ಚಾಗು-ಲೇಸು
ಚಾತಕಃ-ಕೋಗಿಲೆ
ಚಾತೂರ್ಯಾ-ಸಮವಾದ ಬುದ್ಧಿಯದು
ಚಾಪಟರು-ಚಾಲರು
ಚಾಮೀಕರಂ-ಸುವರ್ಣ
ಚಾರಂ-ಸರಿನೋಡು
ಚಾರಣ-ಲೂಟಿಗಾರ, ಗೂಢಚಾರ
ಚಾರಿಕಾಃ-ಚೋರ
ಚಾಲನಾ-ಅಗಲಾಡಿಸುವಿಕೆ
ಚಾಳಿಸಿತು-ಸೋಲಿಪುದು
ಚಿಕಿತ್ಸಾ, ಚಿಕಿತ್ಸಿಕಾ-ಔಷಧಿಕ್ರಿಯೆ
ಚಿಕುರ-ಕುಂತಲು, ಕೂದಲು, ಬೆಟ

ಚಿಕ್ಕಣಂ-ನಯವಾದ್ಯ
ಚಿತಾ, ಚಿತಿ-ಹೆಣ ಸುಡುವ ಕಟ್ಟಿಗೆ
ಚಿತ್ರ-ಚಿತ್ರಗುಪ್ತ, ಚಿತ್ರಾ ನಕ್ಷತ್ರ
ಚಿತ್ರ ವಿಹಗಂ-ಭ್ರಮರಾ
ಚಿತ್ರಕ-ಬೊಟ್ಟು
ಚಿತ್ರಕಾ-ಒಂದು ಜಾತಿ ಫಲ
ಚಿತ್ರಭಾನು-ಸೂರ್ಯ
ಚಿತ್ರಭೋಗಾ-ಇಚ್ಛೆ
ಚಿದ್ರಿಕಾ-ಕೂತುಕೊರೆಯಲ್ಪಟ್ಟದ್ದು
ಚಿಪುಟಕಾ-ಅವಲಕ್ಕಿ
ಚಿಬುಕ-ಗಡ್ಡ
ಚಿರಂತನಾ, ಚಿರಂ-ಬಹುಕಾಲದ್ದು
ಚಿರಂಭೀ-ಮುತ್ತೈದೆ ಸ್ತ್ರೀ
ಚಿರಕಾಲ-ಬಹಳ ಕಾಲ
ಚಿರ್ಮಾರುದ-ತಿಳುವಳಿಕೆಯುಳ್ಳ
ಚಿಲಿ ಚಿವು-ಹುಲು ಮೀನು (ಜಂಬೂಮೀನು)
ಚಿಲ್ಲಾಃ-ಕಣ್ಣುಕೊಳತು ನೀರಿಳಿವವ
ಚೀನಾ-ದೊಡ್ಡದುಷ್ಟ ಮೃಗ
ಚುಂನ ವಾಡುವದು-ಹಾಸ್ಯ
ಚುಕ-ಚಾರಿಬಿದ್ದದ್ದು
ಚುಕ್ಕಿ ಕುವರರೂ-ಶುಕ್ರಶಿಷ್ಯದೃತ್ಯರು
ಚುಕ್ಕಿಗಳು-ತಾರೆಗಳು
ಚುಚುಂದರಿ-ಇಲಿ
ಚುಚ್ಚಿ-ಕುತ್ತಿ
ಚುಚ್ಚು-ಕಿರಿದು
ಚೂಚುಕ-ಮೊಲೆತುದಿ

ಚೂಡಾ–ನವಿಲುಜುಟ್ಟು
ಚೂಲಿಕಾ–ಆನೆಯ ಕಿವಿಬುಡಾ
ಚೇಟಕಃ–ಚಾಕರಿಯವ
ಚೆಟೀ–ಸಖೀ
ಚೆತಃ–ಮನಸ್ಸು
ಚೆಯ–ಚೆನ್ನಾಗಿ, ರಾಶಿ ಹಾಕಲ್ಪಡುವ
ಚೈತ್ಯ–ಯಜ್ಞಶಾಲೆ
ಚೈತ್ರರಥಂ–ಕುಬೇರನಉದ್ಯಾನವನ
ಚೊಕ್ಕಳಿಕೆ–ಶ್ರೇಷ್ಠವಾದ್ದು
ಚೊಲ್ಲೆಯ–ಕುರುಬುಗಂಟು
ಚೊಳ–ಕುಪ್ಯ

–ಛ–

ಛಂದಃ, ಛದಃ–ಅಭಿಪ್ರಾಯ
ಛಂಸಃ–ರಹಸ್ಯದಲ್ಲಿನಡದ್ದು
ಛತ್ರ–ಶಿಷ್ಯ
ಛತ್ರಂ–ಕೊಡೆ
ಛದಾ–ರೆಕ್ಕೆ
ಛಲ–ಗಟ್ಟಿಗತನ, ಮೋಸ
ಛಾಂದಸಾ–ವೇದಓದಿದವ
ಛಾಗಃ, ಛಗಲಿಕ–ಗಂಡುಆಡು
ಛಾದನಂ–ಹೊದಿಕೆ
ಛಾಯಾ–ಸೂರ್ಯನಹೆಂಡ್ತಿ, ನೆರಳು
ಛಾಯೆ–ಬೆಳಕು
ಛಾಲಿಷ್ಯ–ಬಯಸುವಿಕೆ
ಛಿನ್ನ–ಕತ್ತರಿಸಲ್ಪಟ್ಟದ್ದು
ಛಿದ್ರಿಸೂ–ಕೆಡಿಸು
ಛೆದಾ–ಕಡಿಯುವಿಕೆ

–ಜ–

ಜಂಗಮ–ತಿರುಗಾಡುವ
ಜಂಗುಳಿ–ಸಮೂಹ
ಜಂಘಾ–ಕಣಕಾಲು
ಜಂಠಿ–ಜೊತೆ–ಕ್ರುತಾದಿಯುಗಕ್ಕೂ
ಜಂತು–ಜೀವಿ
ಜಂತುಫಲ–ಅತ್ತಿಕ್ಯಾ
ಜಂನುತನೆಯ–ಗಂಗಾನದಿ
ಜಂಪತಿ–ವಧುವರರು
ಜಂಘಾಲ–ಬೇಗನೆ ನಡಿಸುವವನು
ಜಂಬಾಲಿ–ಪಂಕ
ಜಂಬು–ನೇರಳೆಹಣ್ಣು
ಜಂಭಭೇದಿ–ದೇವೇಂದ್ರ
ಜಂಭೀರ–ನಿಂಬೆ
ಜಕ್ಕಳಿಸು–ಆಟಮಾಡು
ಜಗಳಾ–ಜಾಕಟೆ
ಜಗ್ಧಿ–ಭೋಜನಾ
ಜಘನ್ಯಂ–ಕಡೆಯದದು
ಜಟ್ಟುಲಿ–ಕರಿಮಚ್ಚೆ
ಜಠರ–ಬಿರುಸಾಗಿರುವದು, ಹೊಟ್ಟೆ
ಜಡ–ಸ್ಥಳ ತಪ್ಪಲು ಇರುವಂತವು
ಜಡಃ–ಮೂಢ
ಜಡಃ–ಹಿಮ
ಜಡಿ–ಗದರಿಸು
ಜತ್ತುಳ–ನೊರೆ
ಜನಯಿ–ತಾಯಿ
ಜನಿ–ಸೊಸೆ

ಜಪಾಟೀರ-ಶಿವನು
ಜರದ್ಗವಾ-ಮುದಿಯ
ಜರಾಯು-ಜೀವಿಗಳ ಹೊಟ್ಟೆ
ಜರು-ಝೋಲಿರೆಸುವುದು
ಜರುಹಿದಾ-ಜಗ್ಗಿದಾ
ಜಲಗ್ರಹಂ-ಮೊಸಳೆ
ಜಲಧರಃ-ಮೇಘ
ಜಲನೀಲಿ-ಹಾಮಾಸು
ಜಲಶಿಕ್ತಯ-ಕಪ್ಪೆಚಿಪ್ಪು
ಜಲುಕ್ಕುಂ-ನಿರ್ಮಲ
ಜಲೂಕ-ಜಿಗಿಣಿ
ಜಲ್ಮ-ಕ್ರತುಉ
ಜಲ್ಮ ಪಗೆಯಂ-ವೀರಭದ್ರಾ
ಜಲ್ಪಾಕ-ದೋಷಯುಕ್ತವಾದ ಬಹು ಮಾತನಾಡುವವ
ಜವನಃ-ಬೇಗಹೊಗುವಿಕೆ
ಜವಳಾ-ಜೂಡಾದದ್ದು
ಜ್ಯವಾತ್ರುಕ-ಚಂದ್ರಾ
ಜವಾಧಿಕಃ-ವೇಗನ್ನಿಕವಾದಕುದ್ರೆ
ಜಷಾ-ಕೀರ್ತಿ
ಜಳಾ-ನೀರು
ಜಳ್ಳು, ಜರಡು-ನಿಷ್ಪ್ರಯೋಜನವಾದ
ಜಾಂಗಿಕ-ವರ್ತಮಾನ ಹೇಳಲಿರುವವ
ಜಾಂಬವ-ನೇರಳೆಹಣ್ಣು
ಜಾಂಬೂನದ-ಬಂಗಾರ
ಜಾಗವರಲು-ಮರಕತರತ್ನ
ಜಾಗರೂಕ-ಎಚ್ಚರಿಕೆಉಳ್ಳವ
ಜಾಣಃ-ಜ್ಞಾನಉಳ್ಳವ
ಜಾತಪತ್ಯ-ಮಕ್ಕಳಹೇರುವವಳು
ಜಾತರೂಪಃ-ಬೆಳ್ಳಿ, ಬಂಗಾರ
ಜಾತಿಃ-ಜಾಜಿಗಿಡ
ಜಾತಿಫಲಂ-ಜಾಯಿಕ್ಯಾ
ಜಾನಿ-ಮುಪ್ಪು, ಪತ್ನಿ
ಜಾನು-ಉದ್ದಮೊಳಕಾಲು
ಜಾಬಾಲ-ಕುರುಬ
ಜಾಮಕ-ಅಗರು, ಶ್ರೀಗಂಧ
ಜಾಮಾತೃ-ಮಗಳಗಂಡ
ಜಾಯಾ-ಹೆಂಡ್ತಿ
ಜಾಯಾಪತೀ-ಗಂಡಹೆಂಡರು
ಜಾರಜ-ಹಾದ್ರಕ್ಕೆಹುಟ್ಟಿದವ
ಜಾಲ-ಬಲೆ
ಜಾಲಾಂಧ್ರ-ಬಲೆಯಕಣ್ಣು
ಜಾಲಿಕ-ಮೃಗದ ಬಲೆಗಾರ
ಜಾಲೆಗೂ, ಜರಗೂ-ಹೊಂಬಿಸಿಲು
ಜಾಲ್ಮ-ವಿಚಾರಿಸಿದೆ ಕಾರ್ಯ ಮಾಡುವವ
ಜಾವಾಳ-ಸಾಧಾರಣ
ಜಿನ-ಬೌದ್ಧದೇವರು, ಜಿನದೇವ
ಜಿನಕಡಿದಾ-ತುಂಡಾಗಿ, ಕತ್ತರಿಸಿದಾ
ಜಿನುಗು-ಜಡಿಮಳೆ
ಜಿನ್ಯು-ಮನುಷ್ಯಮೊದಲಾದ ಪ್ರಾಣಿಗಳು
ಜಿವನಃ ಜವಃ-ಕರಿಉಳ್ಳವನು
ಜಿಷ್ಮ-ದೊಡ್ಡದಾಗಿರವದು
ಜೀನ-ಮುದುಕ
ಜೇಮನಂ-ಭೋಜನ

ಜೀರಣೆಂ-ಜೀರಿಗೆ
ಜೀರ್ಣ-ಕರಗುವದು
ಜೀರ್ಣೆ-ಮುಪ್ಪು
ಜೀವಣ-ವಂದುತುತ್ತು
ಜೀವನಂ-ಉದಕ
ಜೀವಾಂತಕ-ಬೇಟೆಗಾರ
ಜೀವಿಕಾ-ಸಂಬಳಾ
ಜುಗ-ಕೂಡಿಸಿದ್ದು, ಎರಡು
ಜುಗಾ-ಜೋಡಾದದ್ದು
ಜುಗುಪ್ಸಾ-ನಿಂದೆ
ಜುತಿ-ಬೇಗಹೊಗುವಿಕೆ
ಜುರ್ದ್ದಂ-ಯುದ್ಧ
ಜೂಂಪಂ-ಗೊಂಚಲು
ಜೂಡನು-ಜಾರ
ಜೂಡು, ಜೋಳಿ-ಸಮ
ಜೂಡೆ-ಜಾರೆ
ಜೋತ್ಸ್ನಾ-ಬೆಳದಿಂಗಳು
ಜೂರ್ತಿ-ಜ್ವರ
ಜೂಹಾ-ವೇಶಾ
ಜೆಶ-ಜಯಶಾಲಿ
ಜೊಂನವಕ್ಕಿ-ಚಕೋರ
ಜೊಂನೊಡಲಾ-ಚಂದ್ರಬಿಂಬಾ
ಜೋಡು-ಕವಚ
ಜೋಡುವದು-ಕೈಗೂಡುವದು
ಜೋಡ್ವಕ್ಕಿ-ಚಕ್ರವಾಕ
ಜೋದರು-ಆನೆಹತ್ತುವವರು
ಜ್ಞಾತಸಿದ್ಧಾಂತ-ಶಾಸ್ತ್ರತಿಳಿದವ
ಜ್ಞಾತೆಯಂ-ಜಾತಿತನ
ಜ್ಞಾನ-ಮೋಕ್ಷಶಾಸ್ತ್ರವು
ಜ್ಞಾನಿ-ಜ್ಯೋತಿಷ್ಯಗಾರ
ಜ್ರುಂಭಾ, ಜ್ರುಂಭಣಂ-ಆವಳಿಗೆ

ಝ

ಝರಿ-ವಾರಿ, ಪ್ರವಾಹ
ಝಂಕಿಸು-ಬೆದರಿಸು
ಝಡಿದು-ತಿರಸ್ಕರಿಸುವಿಕೆ
ಝರುಕಾ, ಝಲ್ಲಿಕಾ-ರೆಕ್ಕೆಉಳ್ಳ ಇರುವೆ, ಬೆಳಕು
ಝಷಃ-ಮೀನು
ಝಳಂಬಲ-ಮೇಲ್ಮುಸುಕು
ಝಳಂಬ್ಯಾತ-ಸಖಿಯನಿವಾರಣೆ ಮಾಡುವವ
ಝಿರುಚಿಂಬೆ-ಕಚ್ಚುವತುಂಬಿ
ಝಡಿಸು-ಬೇಗನಡಿಸು
ಝೋದಕ-ಯುದ್ಧದವ

-ಟ-

ಟಕ್ಕರಿ-ಹೊಳ್ಳಗಳದು
ಟಕ್ಕು-ಟೌಳಿ
ಟಪ್ಪಣಾ-ಬರಹಉಳ್ಳಸಪೆಸರು
ಟಾಕು-ತಗ್ಗುಸ್ಥಳ

-ಠ-

ಠವಣ-ಲೇಖ
ಠಿಕ್ಕಿ-ಸುಳ್ಳಹೇಳಿ ವಂಚಿಸುವಿಕೆ
ಠೀಕು-ಚಲೋದು ಅರ್ಥ

ಠೆಕ್ಕೆ-ಧ್ವಜ
ಠೊಂಕಾ-ಉಳಿ

-ಡ-

ಡಂಕೆ-ಮೃಗಹೋಡಿವಕೋಲು
ಡಕ್ಕರಾ-ಗುದ್ದು
ಡಮರ-ಲೂಟಿರಾಜಿಕದಕಷ್ಟ
ಡಮರುಗ-ಹಲಗೆ, ಬುಡುಬುಡಿಕೆ
ಡವಕೆ-ತ್ವರಿತ
ಡಾಪುರ-ಅಪೇಕ್ಷೆ
ಡಾಲು-ಅಡ್ಡಣ
ಡಾಳ, ಡಾವಣೆ-ಪ್ರಕಾಶ
ಡಿಂಗರಿಕಗಾ (ಡಿಂಗರಿಗಾ)-ಸೇವಕರು
ಡಿಂಡಿಮ-ವಾದ್ಯಭೇದ
ಡಿಂಡಿವಾಲ-ಮಾರುದ್ದಗುದಿಗೆ
ಡಿಂಬ-ಬೊಂಬೆ, ಭಯ
ಡಿಂಬ-ಸಕಲಪ್ರಾಣಿಗಳ ಪಿಳ್ಳೆ, ಗರ್ಭ
ಡಿಕ್ಕಿ, ಡಿಮಕಿ-ಗೋಮುಖಾದಿ ವಾದ್ಯ
ಡುರಕು-ಕೆಳಗೆಪಡು
ಡೂಣೆ-ಬತ್ತಳಿಕೆ
ಡೊಳ್ಳಾಸ-ಕಪಟ, ಮಾಯೆ
ಡೆಂಕಣಿ-ದೊಟಿ

-ತ-

ತಂಗದಿರಾ-ಚಂದ್ರ
ತಂಗದಿರ್ವಕ್ಕಿ-ಚಕೋರ
ತಂಡ-ಗುಂಪು
ತಂಡು-ಕೈಬಿಲ್ಲು ನಂದಿಕೇಶ್ವರ
ತಂತ್ರ-ಹಂಚಿಗೆ
ತಂನಿ-ಹೆಂಡ್ತಿ
ತಂಮಟ-ಹಲಿಗೆ
ತಗದು-ಶೋಧಿಸಿ
ತಗರು-ಹರಿಣ
ತಗುಸಿ-ಕುಂದು
ತಗುಳ್ದು-ನೊಕಿ, ತಳ್ಳಿ
ತಟಃ-ಪ್ರಾಣಬಾಧೆ
ತಟಕುತಟ-ಉಪಹತಿ
ತತಿ-ಗುಂಪು
ತತ್ಕಾಲ, ತದಾತ್ವಂನ-ವರ್ತಮಾನಕಾಲ
ತತ್ಪರ-ವಂದರಲ್ಲಿ ತಗಲಿದ ಮನಸ್ಸುಳ್ಳವ
ತತ್ತ್ಯ-ಸತ್ಯಕ್ಕೆ, ಉದ್ದವಾದಕ್ಕು
ತತ್ವರ-ಕೆಂನೆಗಳ ಹಿಂಭಾಗ, ಮೇಲ್ಭಾಗ
ತದನು-ಆದಬಳಿಕ
ತದರ್ಪಣಂ-ಮರಳಿ ಕೊಡುವಿಕೆ
ತದೀಯ-ನಿನ್ನದಾದ
ತನಿ-ರುಚಿಉಳ್ಳ
ತಪಸು-ಮೈದಂತಿಸುವಿಕೆ
ತರಂಗ-ಅಲೆ, ತೆರೆ
ತರಪಂಣ್ಯ-ಹೆಂಗುಸು
ತರಪಾ-ಬೋಳ
ತರಸ-ಮಾಂಸ
ತರಹರಿಸಿ-ತಲ್ಲಣಿಸಿ
ತರು-ಮರ
ತರುವ-ತರಳ
ತರುವನೆ-ಅಪ್ರಮಾಣ

ತರ್ಜನಿ–ಹೆಬ್ಬೆರಳೊತ್ತಿನದು
ತರ್ನಕ–ಆಗ್ಗೆಹುಟ್ಟಿದ ಕರು
ತರ್ಪಣಂ–ತೃಪ್ತಿ
ತರ್ಮ–ತಪಸಿ
ತರ್ಿಸಲುವಾ–ನಿರ್ಣಯ
ತಲ್ಲಣ, ತಳಪಟ–ಭಯ, ವಿಸ್ಮಯ
ತವರಾಜ–ಒಳ್ಳೆಸಕ್ಕರೆ
ತಸರ–ನೈಗೆನೂಲುಸುತ್ತುವಲಾಟೆ
ತಸಿ–ಅವನ
ತಳ–ತಗ್ಗು, ಅಂಗೈ
ತಳಪಟ–ಬೈಲು
ತಳವು–ಹೊರಟುಹೋಗಿ
ತಳವೆಳಗು–ವಿಸ್ಮಯ
ತಳಿಕು–ಕಟ್ಟಿ
ತಳಿಗೆ–ಹರಿವಾಣ
ತಳಿರು–ಚಿಗುಳೆ
ತಳಿರ್ಪಟ–ಸತ್ತಿಗೆ
ತಳೆ–ಧರಿಯು
ತಳ್ತು–ಹತ್ತಿರಸೇರಿ
ತಳ್ಳಂಕ–ಭಯ, ಭೇರಿ
ತಾಂಕಲು–ನಾಶ
ತಾಂತ್ರಿಕ–ಸಿದ್ಧಾಂತಶಾಸ್ತ್ರಿ
ತಾಟಂಕ–ಕರ್ಣದೋಲೆ
ತಾಣಂ–ವಾಸಸ್ಥಾನ
ತಾಪಸ–ತಪಸಿ
ತಾಮಸ –ಕತ್ತಲೆ ಅಗುವವೇಳೆ
ತಾರಸ್ವಿನ್–ತ್ವರಿತಉಳ್ಳವ
ತಾರಾ–ನಕ್ಷತ್ರ
ತಾರೆಗೆವೆಷ್ಠಿ–ಆಕಾಶ
ತಾರ್ಕ್ಷ್ಯ–ಗರುಡ
ತಾಲ–ಹೆಬ್ಬೆಟ್ಟು, ಹಸ್ತ
ತಾವರೆಗಂಡ–ಬ್ರಹ್ಮ
ತಾವರೆಗಂಣ–ವಿಷ್ಣು
ತಾಳಿ–ದಳ
ತಾಳಿಗೆ–ಉಂಗುಷ್ಠ
ತಿಂತ್ರಿಡಿ, ತಿಂತ್ರಿಣಿ–ಹುಣಸೆಮರ
ತಿಂಥಿಣಿ–ಸಾಲು
ತಿಲು–ತುಂಬು
ತಿಗಡು–ತಿಕ್ಕಿಆಡು
ತಿಣಕಿದಾ–ಬಗ್ಗಿಹೋದ
ತಿಬ್ದ–ತೀವ್ರ
ತಿಮಿಂಗಿಲ–ಒಂದು ಜಾತಿ ಮೀನು
ತಿರು–ತಿರ್ಮ, ಬಿಲ್ಲನಾರಿ
ತಿರೆ–ಭೂಮಿ
ತಿಲಪೇಜು–ಕಾತೆಳ್ಳು ಜಳ್ಳು
ತಿಸುಳಿ–ತ್ರಿಶೂಲ
ತೀಟೆ–ತುರಿಸುವದು
ತೀವ್ರಂ–ಅತಿಶಯ
ತುಂಗವಾಯ–ಚಿಪ್ಪಿಗನಹೆಸರು
ತುಂಡ–ಬಾಯಿ
ತುಂದಪರಿಮೃಜ–ಆಲಸ್ಯಗಾರ, ಸೋಮಾರಿ
ತುಂದಿಲ, ತುಂದಿಕ–ದೊಡ್ಡೆಹೊಟ್ಟೆಯವ
ತುಂಬಿದ–ಸಮೂಹ

ತುಡುಕು–ನೂಕು
ತುತ್ತಿದ–ಪ್ರೌಢ
ತುಪ್ಪಳು–ಖಗದರೋಮ
ತುರಂಗ–ಕುದುರೆ
ತುರುಂಬು–ತಲೆಗಂಟು
ತುರುಗಿದವು–ತುಂಬಿದವು
ತುರುಗಿಪ–ವ್ಯಾಪಿಸಿತು
ತುರುಗುರು–ತಲೆದೋರುವ
ತುಲ್ಯಪಾನಂ–ಕುಡಿಯುವರು
ತುಷಃ–ಹೊಟ್ಟು, ಸಿಪ್ಪೆ
ತುಷಾರ, ತುಹಿನ–ಹಿಮ
ತುಳಿಲಾಳು–ಬಂಟ
ತುಳಿಲು–ನಮಸ್ಕಾರ, ಪರಾಕ್ರಮ
ತುಳುಕು–ತುಂಬಿಹೆಚ್ಚಾಗಿ ಬೀಳು
ತೂಡರಿಕ್ಕು–ಅಡವಾಗು
ತೂಣ–ಸರಳ ಬತ್ತಳಿಕೆ
ತೂಣಿ–ಸ್ಥಡಿಲಂ ಪರಿಶುದ್ಧ ಸ್ಥಳ
ತೂಲಿಕಾ–ಚಿತ್ರ ಬರಿಯುವಕಡ್ಡಿ
ತೆಂಗು–ಸದ್ಯಶಾರ್ತತೆ
ತೆಗಳು–ನಿಂದೆ
ತೆನ ತೆನಂ–ಮೇಲೆ ಮೇಲೆ
ತೇಮನ್–ನೀರಿನಲ್ಲಿ ನೆನೆವಿಕೆ
ತೇಮನ–ಮಜ್ಜಿಗೆ, ಪಳದ್ಯೆ
ತೆಮಳ್ದು–ಬಲಗೊಳ್ಳು
ತೆರಂಬೊಳೆದದು–ಕಾಂತಿ
ತೆರನು–ಉಪಾಯ
ತೆವರು–ಎತ್ತರ
ತೆಳ್ಪೆಳಗು–ಚಂದ್ರ
ತೇತಿ–ಮಡಿದು
ತೈಜಸಾವರ್ತನಿ–ಚಿನ್ನಕರಗಿಸುವ ಕೋವೆ
ತೊಂಗಲು, ತೊಂಬೆ–ತೋಡುಂಬೆ
ತೊಡಕು, ತೋಟ, ಪಂಥ, ಯುದ್ಧ
ತೊಡರು–ವೀರರುದ್ಧರಿಸುವ ಬಿರುದು
ತೊದಲು–ಕೊಂಞಮಾತು
ತೊದಳು–ಸುಳ್ಳು
ತೊರಹತ್ತಾ–ರಣಧೀರ
ತೊಹಡಿಕೆ–ವಗಡಿಗೆ
ತೊಳಗು–ಪ್ರಕಾಶಿಸು
ತೋಕಂ–ಗಂಡುಮಗು
ತೋದನಂ, ತೋತ್ರಂ–ಹೋಡಿಯುವ ಕೋಲು
ತೋಮರ–ಆಯುಧ
ತೋಹಾ–ವಂಚನೆ
ತ್ರಿದಿವ–ತ್ರಿದಶಾಲಯ, ದೇವಲೋಕ
ತ್ರಿವಿಕ್ರಮ–ವಿಷ್ಣು
ತ್ರಿವಿಷ್ಟಪಾ–ಸ್ವರ್ಗ
ತ್ರಿಶೆ–ನೀರಡಿಕೆ
ತೃಪ್ತಃ–ಸಂತೋಷಪಟ್ಟವನು
ತ್ವಕ್–ಚರ್ಮ
ತ್ವಕ್–ತೊಗಲು, ಚರ್ಮ

–ಥ–

ಥಟ್ಟು–ದೋಹರ
ಥರಾ–ಸಾಲು

-ದ-

ದಂದುಗ-ಡಂಬ
ದಕ್ಕಡಃ-ಗರ್ವಿಷ್ಟ
ದಕ್ಷಃ-ಆಲಸ್ಯವಿಲ್ಲದವ
ದಕ್ಷಿಣ-ಬಲಗೈಯ್ಯ ದಿಕ್ಕು
ದಕ್ಷಿಣಃ-ನೆಟ್ಟಗಾದ ಮನಸ್ಸುಳ್ಳವ
ದಕ್ಷಿಣಾಧೀಶಾ-ಯಮ
ದಕ್ಷಿಣೇಯುಃ, ದಕ್ಷಿಣಾರ್ಕ-ದಕ್ಷಿಣೆ ಕೊಡುವವ
ದಡ್ಡಸಾ-ಧೂಳು
ದಡ್ರಂಚೆ-ಚಾರೆಯರು
ದದಿಫಲ-ಬೇಲದ ಮರ
ದದ್ರುಣ-ದದ್ರು ರೋಗವುಳ್ಳವನು
ದನಿಗಾಂದಾಸಾ-ಸಾಹುಕಾರಿಮನೆ
ದನುಪಾಃ ದನುಸ್ಪ್ರಕಾರ-ತಂಬಟ್ಟೆ ಮೊದಲಾದ ವಾದ್ಯ
ದನೂಶ್ಯಾ-ನೆರೆಆಕಳು
ದಫಾ-ಹೊದಿಕೆ
ದರ-ಅಂಜಿಕೆ
ಧರಿತ್ರೀ-ಭೂಮಿ
ದರಿದ್ರ-ಬಡವನು
ದರ್ಪಕ-ಮನ್ಮಥ
ಧರ್ಮರಾಜಃ-ಚಿತ್ರಗುಪ್ತರು
ದರೀ-ಬೆಟ್ಟದಲಿರುವ ತೂತು
ದರ್ವಿ-ಸಕ್ಕಣ
ದರ್ಶಣಿ-ಹಾದ್ರಿಗೆತ್ತಿ
ದರ್ಶನ-ನಿರೀಕ್ಷಿಸುವಿಕೆ
ದಲ್-ನಿಶ್ಚಯ, ಪತ್ರ
ದವಿಯ, ದವಿಷ್ಟಃ-ದೂರವಾದ್ದು
ದವೀತ್ರಂ-ಹುಲ್ಲೆಚರ್ಮದಬೀಸಣಿಗೆ
ದಶಃ ದಾಸಃ -ದೀವರ, ಸೇವಕ
ದಶರಥ-ಹತ್ತುಶರೀರ
ದಶರೂಪಭ್ರುಶು-ಗರುಡ
ದಷಃ-ಗಂಡ
ದಾಡಿಮ-ದಾಳಿಂಬ ವೃಕ್ಷ
ದಾತ್ರಂ-ಕತ್ತಿ
ದಾದಿ-ಚಾಕ್ರಿಯವಳು
ದಾನ-ಮದ, ಕೊಡುಗೆ
ದಾನ್ಯಾಪ್ಲಂ-ಬಾಗಿದಗಂಜಿ
ದಾರಣ-ಭೇದನ
ದಾರದ-ವಿಷಗಳು
ದಾರಾ-ಅಶ್ವಗತಿವಿಶೇಷ
ದಾರಾಸಂಪಾತಂ-ಜಡಿಮಳೆ
ದಾರಿತ-ಕಡಿಯಲ್ಪಟ್ಟದ್ದು
ದಾರು-ಕಟ್ಟಿಗೆ
ದಾರೆ-ಹೊನಲು
ದಾರ್ತ್ವರಾಷ್ಟ್ರ-ಕಪ್ಪುಕಾಲಿನ ಬಿಳಿಹಂಸ
ದಾರ್ಷಾಹಾ-ಗರುಡ
ದಾವಿತಃ-ತೆರಿಗೆಕೊಡಿಸಲ್ಪಟ್ಟ
ದಾಹಿಸು-ಉರಿಹುಟ್ಟಿಸು
ದಾಳಿಯನಟ್ಟು-ಸುಲಿಗೆಮಾಡುವದು
ದಿಂಹಳಾ-ದುಗುಡಾ
ದಿಗಂಬರ-ಬತ್ತಲೆಯಾಗಿರುವವ
ದಿಗ್ದಂ-ಇಳಿಯಲ್ಪಟ್ಟದ್ದು

ದಿಧಿಷು-ಎರಡುಗಂಡನಾದವ
ದಿಪ್ತಿ-ಸೂರ್ಯ
ದಿವಾಕೀರ್ತಿ-ಕ್ಷೌರಕ
ದಿಳಾ-ಭೀತಿಯು
ದೀದಿತಿ-ಸೂರ್ಯಕಿರಣ
ದೀನ-ದರಿದ್ರ
ದೀಮದರು-ಗಟ್ಟಿಗರು
ದೀರ್ಘಃ-ಉದ್ದವಾದದ್ದು
ದೀರ್ಘಸೂತ್ರ-ವಿಚಾರಿಸಿ ಕಾರ್ಯಾ ಮಾಡುವವ
ದುಗ್ಧ-ಕ್ಷೀರ
ದುಗಿ-ನದಿ
ದುದ್ರುಮ-ನೀರುಳ್ಳಿ
ದುರಂಧರಃ-ಚಾರಯೆಳಿನಎತ್ತು
ದುರದ್ವಾ-ಕೆಟ್ಟದಾರಿ
ದುರಿಪುದು-ಚಿಂತೆ
ದುರ್ಗಮ-ಕಾಡುದಾರಿ
ದುರ್ಮನಃ-ದುಃಖಕೂಡಿದ ಮನಸ್ಸುಳ್ಳವ
ದುರ್ವಿದಃ-ದರಿದ್ರ
ದುಷ್ಕೃತಂ, ದುರಿತಂ-ಪಾಪ
ದೂಕೂಲಂ-ಬಿಳಿಪಟ್ಟೆ
ದೂತ-ಕದಲಿಸಲ್ಪಟ್ಟದ್ದು, ರಾಯಭಾರಿ
ದೂದೂನಃ, ದೂಪಾಯಿತ-ಕಾಯಿಸ ಲ್ಪಟ್ಟದ್ದು
ದೂಮಧ್ವಜ-ಬೆಂಕಿ
ದೂವ್ರ, ದೂಮುಲ-ಕಪ್ಪು ಕೆಂಪು ಬೆರೆತದ್ದು
ದೂರ್ತಃ-ಮೋಸಗಾರ
ದೂರ್ತಃ, ದ್ಯೂತಕ್ರುತುಃ-ಜುಜಾಡುವವಾ
ದೂರ್ನಾಮಕ-ಮೂಲವ್ಯಾಧಿ
ದೂರ್ವ-ಕರಿಕ್ಕೆ ಹುಲ್ಲು
ದೂಶ್ಯ-ಆನೆಯಸೊಂಟದಪಟ್ಟಿ
ದೃಷ್ಟಿವಾಳ-ನೋಟಗಾರ
ದೊಹದವತಿ-ಬಸುರಾದ ಬಯಕೆ ಉಳ್ಳವಳು
ದ್ಯುತಿ-ಸೂರ್ಯ
ದ್ರುಕ-ಕಣ್ಣು
ದ್ರುಗಣ-ಕಬ್ಬಿಣಹೊರೆಸಾಮಾನು
ದ್ರುವಃ-ನಾಶವಿಲ್ಲದವ
ದ್ರುಷ್ವರಜ-ಋತುವಾದ ಹುಡುಗಿ
ದ್ರುಷ್ಟಾಂತಃ-ಸಾಲು
ದ್ರುಷ್ಕ-ಶತ್ರುಗಳಿಂದಾದಂಜಿಕೆ
ದ್ವಯಿದಧ-ಶತ್ರುಗಳ ವೈರ

-ಧ-

ಧಟ್ಟು-ಮೋಹರ
ಧರ್ಮರಾಜ-ಚಾಪಶ್ರೇಷ್ಠ ಯಜ್ಞ ಶ್ರೇಷ್ಠಕ, ಯುಧಿಷ್ಠಿರ
ಧವಳಾ-ಬಿಳಿ
ಧಾತು-ಮೂಲ
ಧಾನುಷ್ಕ-ಬಿಲ್ಲುಗಾರ
ಧಾನ್ಯಕ-ಕೊತ್ತಂಬರಿಬೀಜ
ಧಾರಣ-ಘಟ್ಟಗತನ, ಧರಿಸುವುದು
ಧಾರಣ-ಮಾರ್ರ್ಯಾದೆ
ಧಾರಾಧರಃ-ಧೂಮಯೋಗಿ

ಧಾವ್ವಾಳಿಸಿತು-ಹರವದು
ಧಿಃ, ದಿಶಣ-ಬುದ್ಧಿ
ಧಿಪ್ಯಾ-ಧೀರ
ಧೀಮತ್-ಬುದ್ಧಿವಂತ
ಧೀಕ್ಷಾಂತ-ಅವಭೃದಿಷ್ಟಿಸ್ನಾನ
ಧೀಮಾನ್-ವಿದ್ವಾಂಸ
ಧುತಿ-ಸಂತೋಷ
ಧ್ರುವ-ಸತ್ಯವಾದದ್ದು
ಧ್ರುವ-ಸ್ರುಕುಸ್ರುವೆಮೊದಲಾದದ್ದು
ಧ್ವನಿ ದೀನತ್ವ-ನಂಬಿಸಿತಿನ್ನುವವರು

-ನ-

ನಕ್ತಕ-ಹರ್ಕ್ಕುಬಟ್ಟೆ
ನಕ್ತ- ಮೊಸಳೆ
ನಕ್ರಮಾಲ-ಹೊಂಗೆಮರಗಳು
ನಕ್ಷತ್ರ ಮೂಲ, ನಿಷ್ಪ್ರವಾಣಿ-ಹೊಸಬಟ್ಟೆಗಳು
ನಗ-ಮುಗುಳು, ಪರ್ವತ
ನಗೌಕಃ, ನಗೋದ್ಭವ-ನಾನಾ ಬಗೆ ಪಕ್ಷಿಗಳು
ನಗ್ಗಡಲು-ರಕ್ತಜಲದಿ
ನಗ್ನ-ಬತ್ತಲೆಯಾಗಿರುವವ
ನಗ್ನಿಕಾ-ಬತ್ತಲೆಯಾಗಿರುವವಳು
ನಚ್ಚು-ನಂಬಿಕೆ
ನಟ್ಟವನೆ-ನಡುಪನೆ
ನಡಾ-ಹುಲ್ಲುಸಮೂಹ
ನಡುಕಗೊಂಡು-ಅಂಜಿಕೆಹೊಂದಿದವ
ನಡೆತರು-ಹತ್ತಿರೆಬರು
ನತ-ಸುಟಿಯಾಗಿರುವದು, ನಮಸ್ಕಾರ
ನದಿಷ್ಮ-ಬಹುಸಮೀಪ
ನದೀಸರ್ಜಃ-ಮತ್ತಿಗಿಡ
ನದ್ಧೀ-ತೊಗಲಹಗ್ಗ
ನದ್ರುತೆ-ನಯ
ನಮಸ್ಕಿತಂ-ಪೂಜಿಸಲ್ಪಟ್ಟದ್ದು
ನರಕ-ಸತ್ತವರ ಸ್ಥಳ
ನರು-ಬಹಳವಾಸನೆಯುಳ್ಳದ್ದು
ನರು-ವಾಸನೆ
ನರ್ತಕಃ-ಕುಣಿಯುವಗಂಡಸು
ನಲಮೀನ-ತಿರುಗಾಡುವ ಮೀನು
ನಲಿವು-ಸಂತೋಷ
ನಲ್ವ-ಹಸ್ತಪರಿಮಾಣದಾರಿ
ನವಿರು-ಕೂದಲು
ನವ್ಯಃ ನವೀನ-ಹೊಸ ನೂತನ
ನಷ್ಮ-ಸೋತುಅಡಗಿದವ
ನಸವಳಂ-ಯೆಳೆರೇಖೆಗಳು
ನಸ್ತಿಕ, ನಸ್ಯೋತ-ಮೂಗುದಾರದೆತ್ತು
ನಳಿನಿ-ತಾಮರೆಬಳ್ಳಿ
ನಾಂದೀಕರು-ಹೊಗಳ್ವಪಾಠಕರು
ನಾಕಃ-ಸ್ವರ್ಗ
ನಾಗಬಲ-ಹೀರೆಕ್ಯಾ, ಭೀಮಸೇನ
ನಾಗರ-ವಣಶುಂಟಿ, ನಾಗರಲಿಪಿ
ನಾಗವಲ್ಲಿ-ವೀಳ್ಯದೆಲೆ
ನಾಗಾಂತಕ-ಗರುಡ
ನಾಟಿಕಃ-ಕ್ಷೌರಿಕ, ದೃಶ್ಯಕಾವ್ಯ
ನಾಟ್ಯೋಕ್ತೌ-ನಾಟ್ಯಪರಿಭಾಷೆ

ನಾಡಿ-ಹೊಡೆಯುವಿಕೆ
ನಾಡಿಂಧಮ-ಅಕ್ಕಸಾಲೆ
ನಾದ-ಕೂಗುಧ್ವನಿ
ನಾಭೆ-ಭಂಡಿಯತೂತು
ನಾಭೇರತ-ಕಿರುಹೊಟ್ಟೆ
ನಾಯ-ಠೀವಿ, ಸಾಗಿಸುವುದು
ನಾಯಕಃ-ಆಳುವವ, ಪ್ರಮುಖ
ನಾರಕ-ನರಕ
ನಾರಾಯಣೀ-ಶತಾವರಿ
ನಾರಿಕೇಳ-ಖರ್ಜೂರ, ತೆಂಗಿನಕಾಯಿ
ನಾರ್ಣ-ನಾಚಿಕೆ
ನಾವುತ-ಅಂಗೀಕರಿಸಲ್ಪಟ್ಟವ
ನಾವೆ-ಹಡಗು
ನಾವ್ಯ-ದೋಣಿ
ನಾಸತ್ಯಾ-ಅಶ್ವಿನಿ ದೇವತೆಯರು
ನಾಸ್ತಿಕ-ದೇವರು ಇರುವದಿಲ್ಲವೆಂತ ಹೇಳುವವ
ನಾಸ್ತಿಕರು-ದೈವವೂ, ಪರಲೋಕವೂ ವಿಲ್ಲವೆಂಬವರು,
ನಾಳ-ತಾವರೆದಂಡು
ನಿಂಬಃ-ಬೇವಿನಗಿಡ
ನಿಂಮಗಾ-ನದಿಗಳು
ನಿಕಟ-ಹತ್ತಿರವಾದದ್ದು
ನಿಕಷಃ-ವರೆಕಲ್ಲು
ನಿಕಾಯ-ಸಮೂಹ
ನಿಕಾಯಃ-ಒಳ್ಳೆ ಜನರ ಗುಂಪು
ನಿಕಾರಃ-ಧಾನ್ಯರಾಶಿ ಮಾಡುವಿಕೆ
ನಿಕುಂಜ-ಬಳ್ಳಿಗಳಗುಂಪು
ನಿಕುಬ್ಜ-ಬಗ್ಗಿದಅಂಗೈ
ನಿಕ್ರುತಾ-ಪೀಡಿಸಲ್ಪಟ್ಟವ, ಕುತ್ಸಿತನು
ನಿಕ್ವಣ-ಸಕಲವಾದ್ಯಧ್ವನಿ
ನಿಗಪ-ಭೋಜನ
ನಿಗಳ, ನಿಗಡ-ಆನೆಕಟ್ಟುವ ಸರಪಣಿ
ನಿಗಾದ ನಿಗದಃ-ಸ್ಪಷ್ಟವಾಗಿನಡೆವಿಕೆ
ನಿಗಾರ-ನುಂಗುವಿಕೆ
ನಿಗೋದ್ಭವಃ-ನಾನಾ ಪಕ್ಷಿಗಳು.
ನಿಘಃ-ಎಲ್ಲಾದಿಕ್ಕು ಸರಿಯಾಗುವಿಕೆ
ನಿಷ್ಕುಟಃ-ಹಿತ್ತಲುತೋಟ
ನಿಚಾಂಚೆಟೀರಿ-ನೀಚಳಾದ ದಾಸಿ
ನಿಚೋಳ-ನಾರುಬಟ್ಟೆ
ನಿಟ್ಟಿಸಿ-ನೋಡಿ
ನಿಡು-ಉದ್ದ
ನಿಡುವನಂ-ಸ್ತ್ರೀಸಂಗ
ನಿತಂಬಿನಿ-ದೊಡ್ಡಎದೆಯುಳ್ಳವಳು
ನಿತ್ಯಃ-ನಾಶವಿಲ್ಲದ್ದು
ನಿದ್ರೆ-ತನ್ನೊಳಗೆ ಸೇರಿಕೊಂಡು ಇರುವದು
ನಿಧನ-ಸಾವು
ನಿಧಾನ-ಹೂಳಿಟ್ಟದ್ರವ್ಯ
ನಿಧಿಗ್ಧ-ವೃದ್ಧಿಯಾದದ್ದು
ನಿನತೂ-ನಿನ್ನದು
ನಿನಾದ, ನಿನದ
ನಿರ್ಘೋಶಾ, ನಿಸ್ವನ-ಕೂಗುಧ್ವನಿ
ನಿಭಾ, ನಿಕಾಶ-ತುದಿ ಪದವಾದ ಪ್ರಕಾಶ
ನಿಯನ್, ನಿಗಮ, ನಿಶದ್ಯ-ಅಂಗಡಿ, ವೇದ

ನಿಯಮ-ಅಂಗೀಕಾರ ; ಆಚರಣೆ
ನಿಶ್ರೇಯಸಂ-ಮೋಕ್ಷ
ನಿಯುತ-ಬಂಡಿಹೊಡೆಯುವವ
ನಿಯೋಜ-ಚಾಕ್ರಿಯವ
ನಿಯೋಗಿ-ಕಾರ್ಯಸ್ಥ
ನಿರಂತರ-ಯೆಡೆಬಿಡದ್ದು
ನಿರತೆ-ಶೃಂಗಾರ ಟೀವಿ
ನಿರರ್ಗಳ-ತಡೆಯಿಲ್ಲದ್ದು
ನಿರಸ-ಯೆಸೆದಬಾಣ
ನಿರಸ್ತಾ:, ನಿರಾಕ್ರುತಾ:-ನ್ಯಾಯದಿಂದ ಹರಿಯಲ್ಪಟ್ಟವ
ನಿರಾಸನಂ, ನಿರಾಕ್ರುತಿ-ತಿರಸ್ಕರಿಸುವಿಕೆ
ನಿರುತಿ-ನಿರ್ಭಾಗ್ಯ
ನಿರೋಧ-ಮುಚ್ಚುವಿಕೆ
ನಿರ್ಜವಾಚರ-ಜೀವವಿಲ್ಲದೆ ಚಲಿಸದೆ ಇರುವುದು
ನಿರ್ಣಿತ-ನಿಶ್ಚಯ
ನಿರ್ದಣನಂ, ನಿದ್ಯಾನಂ-ನಿರೀಕ್ಷಿಸುವಿಕೆ
ನಿರ್ದೇಶ-ಉಪದೇಶಿಸು
ನಿರ್ಧಾರ-ಒಡಂಬಡಿಕೆ
ನಿರ್ಭರ-ಅತಿಶಯ;
ನಿಧಿ:-ಪದ್ಮಶಂಖಮೊದಲಾದ್ದು
ನಿರ್ಮಾಣ-ಅಳತೆಮೇಲೆ ಉಂಟು ಮಾಡುವಿಕೆ
ನಿರ್ಮುಕುತ, ನಿರ್ಮುಕ್ತ-ಬಿಡಿಸಿದ್ದು
ನಿರ್ರಿಷ-ಕಬ್ಬಿಣದ ನೇಗಿಲು
ನಿರ್ವಾತ-ನಿತ್ತುಹೋದಗಾಳಿ
ನಿರ್ವಿಣ್ಯ-ನಿರಾಪೇಕ್ಷೆ
ನಿರ್ವೆಶ:-ಮಜೂರಿ
ನಿರ್ವೇಷ-ಭೋಗಿಸುವಿಕೆ
ನಿರ್ಹಾರಿ-ವ್ಯಾಪಿಸುವ ಗಂಧ ದ್ರವ್ಯ
ನಿವಾಕ-ವ್ಯವಹಾರಗಳ ನುಡಿವಿಕೆ
ನಿವಾಘ-ಬೆವರು
ನಿವೀತಂ-ಕಂಠಸೂತ್ರ
ನಿವೃತ್-ಗ್ರಾಮಸಮೂಹ
ನಿವೃತ್ತಂ-ಸುತ್ತಿಕೊಳ್ಳಲ್ಪಟ್ಟದ್ದು
ನಿವೃತ್ತ: ನಿಷ್ಪನ್ನ-ನೆರವೇರಿಸಲ್ಪಟ್ಟದ್ದು
ನಿಶಂಗ-ಬತ್ತಳಿಕೆ
ನಿಶದ:-ಪರ್ವತ
ನಿಶಾದ:-ಸರಿಗಮ ಸ್ವರ
ನಿಶಾದಿ-ಆನೆಮಾವಟಿಗ, ಸಂಧ್ಯಾಕಾಲ
ನಿಶಾನ-ಸಾಣೆ ಹಿಡಿಯುವುದು
ನಿಶೂದನ, ನಿಬರ್ಹಣಂ, ನಿಕಾರಣಂ, ನಿಷಾರಣಂ, ನಿರ್ವಾಪನಂ, ನಿಗ್ರಂತನಂ, ನಿಸ್ತರ್ಹಣಂ, ನಿಹನನಂ, ನಿರ್ವಾಸನಂ-ಇವೆಲ್ಲಾ ಕೊಲ್ಲುವುದಕ್ಕೆ
ನಿಶಿತ-ಹದವಿಡಲ್ಪಟ್ಟದ್ದು, ಹರಿತವಾದ
ನಿಶೆಟ:-ಯಾದವವೀರರು
ನಿಶ್ಯೇಶಂ-ಸಂಪೂರ್ಣವಾದದ್ದು
ನಿಶ್ವನಂ, ನಿಶುಧಿ:-ಕೇಕರಿಸಿಉಗುಳುವಿಕೆ
ನಿಷಾದ-ಚಾಂಡಾಲ
ನಿಷಾರ-ಹಬ್ಬದ ವಿಶೇಷ
ನಿಷ್ಕುರಂ-ಬಿರುಸಾಗಿರುವದು
ನಿಷ್ಪ್ರಭ-ಕಾಂತಿಯಿಲ್ಲದಿರುವದು
ನಿಷ್ಣಾತ: ನಿಪುಣ-ಚತುರ
ನಿಷ್ಫಲ-ಉರುಟಾದ್ದು, ಫಲವಿಲ್ಲದ

ನಿಸಂಚಕ-ಸೂಲಿಗೆ
ನಿಸ್ರಾಹ-ತೆನೆಗಂಜಿ
ನಿಸ್ರುಷ್ಟಂ-ಇರಿಸಲ್ಪಟ್ಟದ್ದು
ನಿಸ್ವಾ, ನಿರ್ಣಿತು-ಶುದ್ಧಗೊಳಿಸಲ್ಪಟ್ಟವ
ನಿಸ್ಸಂಕೆ-ಅಡಿ
ನಿಹೀನ-ನೀಚ
ನಿಳಿಲು, ನಿಟಲು-ಶಬ್ದ
ನೀರದ-ಮೇಘ
ನೀರುಗೆ-ಶೀಮಾವು
ನೀರೂಷ್ಮಿಲಾಣ್ಮಂ-ವರುಣ
ನೀರ್ಪೂವು-ತಾವರೆ
ನೀಲ-ಕಪ್ಪು ಛಾಯೆ ಕೂಡಿದ್ದು
ನೀಲಂಗು-ಕ್ರಿಮಿಗಳು
ನಿಶಾ, ನಿಶಿ-ರಾತ್ರಿ
ನೀಲಃ, ನಿಯಂತಃ-ಚಿತ್ರಗುಪ್ತರು
ನೀಳಾ-ಉದ್ದವಾದದ್ದು
ನೀಳಾ, ನೀಟೇಂ-ನಿಸ್ಸಾಳಭೇರಿ
ನುತಿ-ಸ್ತುತಿ
ನುಸುಳು-ಹುಸಿ
ನೂತಃ-ನೂತನ
ನೂನವಕ್ಷ-ಅಗ್ನಿ, ವಿಷ್ಣು
ನೂಪುರ-ಕಾಲತೊಡಿಗೆ
ನೃಯ್ಯಗ್ರೋದಂ-ಅಶ್ವತ್ಥಫಲ
ನೆಗಪು-ಯೆತ್ತು
ನೆಗಳ್ದ-ಉದ್ಯೋಗ, ವ್ಯಾಪಿಸಿ
ನೆಗಳ್ದಿದರು-ದೂಡಿದರು
ನೆಗಳ್ದು-ಪ್ರಚುರಗೊಂಡು
ನೆಗೆ-ಏರು
ನೆಗ್ಗಿದರು-ಅಲ್ಲಿಯೆ ಅಡಗಿ ಹೋದರು
ನೆಣವಸೆಯಂ-ನೆನೆಯುವದು
ನೇತ್ರ ವಸ್ತ್ರ-ಕಣ್ಣಿನ ರೆಪ್ಪೆ
ನೆರವಿ-ಗುಂಪು
ನೆರವಿ-ಮೊತ್ತ
ನೆರಿದರು-ಬ್ರಾಹ್ಮರು
ನೆರ್ದ್ವನು-ಅರಿದವನು
ನೆರ್ನೆರಾ-ಅಕಾರಣ
ನೆರ್ಹಾರ-ನೆಳದೆತ್ತಿ ಬೀಸಾಡುವಿಕೆ
ನೇತ್ರ-ಕಣ್ಣು
ನೇಸರು-ಸೂರ್ಯ
ನೈರುತ್ಯ-ನೈರುತಿಯನ್ನುಕುರಿತ ದಿಕ್ಕು
ನೌತರಣೆ-ಹಡಗು
ನ್ಯಾಸ-ಬಚ್ಚಿಡುವಿಕೆ
ನ್ಯುಬ್ಜಃ-ರೋಗದಿಂದ ದುರ್ಬಲನಾದವ
ನ್ರುತಂ, ನ್ರುತ್ಯಂ-ನಾಟ್ಯ
ನ್ರುಶಂಸೆ-ಕೊಲ್ಲುವುದು

-ಪ-

ಪಂಕ-ನೀರುನಿತ್ತ ಕೆಸರು
ಪಂಕಜ-ಕಮಲ
ಪಂಕಿಲಿ-ಕೇಸರುಳ್ಳ ದೇಶ
ಪಂಕ್ತಿ-ಸಾಲು
ಪಂಗತಿಕೆ-ಪರಾಕ್ರಮ
ಪಂಚ-ನೂತನ
ಪಂಚತಾ-ಪ್ರಳಯ, ಮರಣ
ಪಂಚಪಲ್ಲವ-ರಾಜವಾಹನ

ಪಂಚಮ-ತಂತಿಯಿಂದ ಹುಟ್ಟಿದ ಧ್ವನಿ
ಪಂಚಶಾಖ-ಪಾಣಿ
ಪಂಚಾ-ನೀರು, ಮೇಘ, ಹರವಾದ್ದು
ಪಂಚಿಪುರುಷರ-ವಸ್ತ್ರವಿಶೇಷ
ಪಂಚಾಯಿತ, ಪಣಿತಂ-ಹ್ಯೊವಿಕೆ
ಪಂತಿ-ಸಾಲು
ಪಂದರಲಿ-ರಂಗವಲಿ
ಪಂದಲೆವಚ್ಚ-ಪರಮೇಶ್ವರ
ಪಂದೆ-ಸೋಮಾರಿತಿರುಗುವ
ಪಂದೆ-ಹೇಡಿ
ಪಂನಗಾಶನ-ಗರುಡ
ಪಂನತಿಕೆ-ಸಾಹಸ
ಪಕ್ಕ-ಸಮೀಪ
ಪಕ್ಕಣ-ಬೇಟೆಗಾರ ಇರುವಸ್ಥಳ
ಪಕ್ಕಲೆ-ಪಾತ್ರ
ಪಕ್ಕಿಗಳಾಣ್ಮ-ಗರುಡ
ಪಕ್ಷ, ಪರಃ-ಶತ್ರುಗಳು, ಮಗ್ಗಲು
ಪಕ್ಷತಿ-ಪಕ್ಷಮೂಲ, ರೆಕ್ಕೆಬುಡ
ಪಕ್ಷತಿ-ಪಾಡ್ಯ
ಪಕ್ಷಾ-ಪಕ್ಕಾ
ಪಕ್ಷಿ-ರೆಕ್ಕೆಯುಳ್ಳದ್ದು
ಪಕ್ಷಿಣಿ-ರಾತ್ರಿ
ಪಕ್ಷ್ಮನ್-ಅಕ್ಷಿ ರೋಮ
ಪಗಲಭುಜಂಗ-ಸೂರ್ಯ
ಪಗಸಃ-ಹಲಸು
ಪಗಿಲ್ತುದು-ಅರಳಿದ್ದು
ಪಚಾ-ಅಡಿಗೆಮಾಡುವಿಕೆ
ಪಚ್ಚಡಿಪ, ಪಚ್ಚಾಯ್ಲು-ರೌತ
ಪಚ್ಚಡಿಸಿದರು-ಪಟ್ಟೆಮೊದಲಾಗಿ ಸುತ್ತುವಿಕೆ
ಪಚ್ಚವಣಂ-ಪರೀಕ್ಷಿಸುವದು
ಪಚ್ಚಿಗಾರಂ, ಪಚ್ಚಾಯ್ಲು-ಆಚರಣಉಳ್ಳವ
ಪಜ್ವಳಾ-ಪ್ರಕಾಶ
ಪಟಲ-ಮನೆಹೊದಿಕೆ
ಪಟಲಾ-ಗುಂಪು
ಪಟಿ-ವಸ್ತ್ರ
ಪಟ್ಟಣೆ-ಸಿಂಹಾಸನ
ಪಡವಿಟ್ಟದು-ಬಿಳುವಂಥಾದ್ದು
ಪಡವಿದೂ-ಬೀಳು
ಪಡಿನೆಳಲು-ಪ್ರತಿಬಿಂಬಛಾಯ
ಪಡಿಯಚ್ಚೆ-ವರೆಕಲ್ಲು
ಪಡಿಸಣಾ-ಪರೀಕ್ಷೆ
ಪಡಿಸವತಿ-ಹೆಂಣುಗಜ
ಪಡ್ಡಳಿ-ಕಣಗಿಲು
ಪಣ-ಕರಾರು
ಪಣಾ-ಗುರುಗುಂಜಿತೂಕ
ಪಣಾಯಿತ-ಕೊಂಡಾಡಲ್ಪಟ್ಟ
ಪಣಿಜ್ಜಕ-ಮರುಗಪತ್ರ
ಪಣಿತವ್ಯಂ ಪಣ್ಯಂ-ಮಾರಾಟದ ವಸ್ತು
ಪಣೆ-ಮರದಕೊಂಬೆ
ಪಣ್ಣೆಕಾ-ಸವರಿಕೊಳ್ಳುವದು
ಪತಂಗ-ಒಂದು ಜಾತಿಹುಳ
ಪತಂಗಿಕಾ-ದೊಡ್ಡಗೋಣ, ಹೆಣ್ಣು ಪತಂಗ

ಪತತ್ರಿ, ಪತ್ರಿ, ಪತಗಾ-ಸಾಮಾನ್ಯವಾದ ಪಕ್ಷಿಗಳು
ಪತನ-ಬೀಳುವಿಕೆ
ಪತಿಃ, ಪರಿವ್ರಡಃ-ಪ್ರಭು
ಪತ್ತಗ, ಪಟ್ಟಣ-ನಗರ
ಪತ್ರ-ವಾಹನ, ಎಲೆ
ಪತ್ರಾಂಗ-ರಕ್ತಚಂದನ
ಪಥ-ದಾರಿ
ಪಥನ, ಪ್ರವಿಧಾರಣಂ-ಯುದ್ಧಂ
ಪದ-ಸ್ಥಿತಿ, ಗತಿ
ಪದಗಃ, ಪದ್ಗುಃ, ಪದಿಕಃ-ಕಾಲು ನಡಿಕೆ ಶಿಪಾಯಿ
ಪದಟ-ಶೀವಿಯಿ
ಪದವಿ, ಪದ್ಧತಿಃ,-ಪದ್ಯ-ದಾರಿ
ಪದಾರ್ಥ-ಒಂದು ಮಾತಿನ ನಿಜವಾದ ಅರ್ಥ
ಪದಿನಿ-ಕಮಲದ ಬಳ್ಳಿ
ಪದ್ಮ, ಪನ್ನಗಾಶನ-ಲಕ್ಷ್ಮೀದೇವಿ
ಪದ್ಮರಾಗ-ಕೆಂಪುಕಲ್ಲು
ಪದ್ಮಾಕರ-ತಾವರೆಯುಳ್ಳ ಕೆರೆ
ಪದ್ಯ-ನಡೆಯತಕ್ಕದಾರಿ, ರೀತಿ
ಪನಾ-ಸಂಕೇತಸ್ಥಳ
ಪಪ್ಪರಾ-ಕಣ್ಣಮೊಟ್ಟೆ
ಪಮರಾ-ಅಳಿ
ಪರಕಾ, ಪರೋಕ್ಷಾ-ಮರೆಯಾದ್ದು
ಪರಜಾ-ವಜ್ರ
ಪರಡಿ-ಶ್ಯಾವಗೆ
ಪರಬ್ರುತ-ವಾಯಸ, ಕಾಗೆ
ಪರಭೃತಃ-ಕೋಗಿಲೆಪಕ್ಷಿ
ಪರಮಟ್ಟಿ, ಪಡಿಯರವಕ್ಕಿ-ಕೋಗಿಲೆ
ಪರಮ-ತುಂಬಿ, ಪ್ರಧಾನ
ಪರರು-ಕಬ್ಬಿಣ, ಸುವರ್ಣಮಾಡತಕ್ಕದು
ಪರಶು, ಪರಶ್ವದ ಕೊಡಲಿ
ಪರಸ್ಪರ-ಒಬ್ಬನ ಸಂಗಕೊಬ್ಬಳು
ಪರಸ್ತ್ರುತ್-ಹೆಂಡ
ಪರಾಕ್ರಮ ಪ್ರಾಣ-ಸಾಮಾರ್ಥ್ಯ
ಪರಾಚೀನ-ಸೋತುಹೋಗುವಿಕೆ
ಪರಾಜಿತ, ಪರಿಶ್ಕಂದ, ಪರಜಾತ-ಹೇಡಿಯಾಳು
ಪರಾಚೀನಃ-ಹಿಂಮೆಟ್ಟಿಹೋದವ
ಪರಾಶರಿ, ಪರಿವ್ರಾಟು-ಸಂನ್ಯಾಸಿ
ಪರಾಸನ, ಪರಿವರ್ಜನಂ-ಕೊಲ್ಲುವಿಕೆ
ಪರಾಸರಯೋಗ-ಮತ್ತೊಂದಕ್ಕೆ ಕೂಡದ್ದು
ಪರಾಸುಃ ಪರೇತಃ-ಸತ್ತಮನುಷ್ಯ
ಪರಿ-ಸುತ್ತಲೂ, ಭಾಗ
ಪರಿಂಬ, ಪರಿಶ್ವಂಗ-ಅಪ್ಪಿಕೊಳ್ಳುವಿಕೆ
ಪರಿಕರ-ಚಾಕರಿಯವ, ಗುಂಪು
ಪರಿಕಾಂಕ್ಷಿ-ತಪಸ್ಸುಳ್ಳವ
ಪರಿಕ್ರಮ-ಸುಖದಿಂತಿರುಗ್ವಿಕೆ, ನಡೆಯುವುದು
ಪರಿಕ್ರಿಯಾ-ಸುತ್ತಿಬರುವಿಕೆ
ಪರಿಕ್ಷಿಪ್ತ-ಸುತ್ತಿಕೊಳ್ಳಲ್ಪಡ್ಡದು
ಪರಿಖಾ-ಕೋಟೆಸುತ್ತಿರುವ ನೀರಿನ ಕಂದಕ
ಪರಿಘಾ-ಕಬ್ಬಿಣದ ಕೋಲು

ಪರಿಚರ್ಯಾ-ಶುಶ್ರೂಷೆ
ಪರಿಣಾಮ-ವಿಕಾರ, ವಿಶೇಷ
ಪರಿಣಾಹ-ಅಡ್ಡಗಲ, ವಿಶಾಲತೆ
ಪರಿದಿಷ್ಟ-ದಂಡಿನಸುತ್ತಕಾವಜನ
ಪರಿದೇವನಂ-ದುಃಖದಿಂದ ಹೇಳುವ ಮಾತು
ಪರಿಧಿ-ಮಂಡಲದ ಸುತ್ತು
ಪರಿಭವ-ಕಷ್ಟ, ಅವಮಾನ
ಪರಿಭಾವ-ತಿರಸ್ಕಾರವು
ಪರಿಮುತ್ತಯನೆ-ಸೆಳಕೊಳ್ಳುವದು
ಪರಿಯಂಕಾ-ಪಟ್ಟೆಮಂಚ
ಪರಿಯಟನು-ಬಿಕ್ಷಾರ್ಥವಾಗಿ ತಿರುಗಿವಿಕೆ
ಪರಿಯಾಪ್ತಿ, ಪರಿತ್ರಾಣಂ-ಸಾಯುವವನ ರಕ್ಷಿಸುವಿಕೆ
ಪರಿಯುಕಾ-ರೆಕ್ಕೆಗಳ ಯೆಲುಬು
ಪರಿಯುದಂಚನ-ಸಾಲ
ಪರಿವಡದದು-ಒಪ್ಪಿಕೊಳ್ಳುವುದು
ಪರಿವಡಿಸು-ಬೇಗನೆ ನಡೆದಾಡು
ಪರಿವರ್ತ-ಬದಲಾಯಿಸುವ ವ್ಯಾಪಾರ
ಪರಿವಾಟಿತಂ-ಬಾಳಿಸಲ್ಪಟ್ಟದ್ದು
ಪರಿವಾದಿನಿ-ಸಪ್ತತಂತಿವೀಣೆ
ಪರಿವಾಹ-ನೀರುತುಳುಗಾಡುವಿಕೆ
ಪರಿವಿತ್ತ-ಅಣ್ಣನಿಂದ ಮೊದಲು ಮದುವೆ ಆದವನು
ಪರಿವೇಶ, ಪರಿಧಿ-ಆಕಾಶ
ಪರಿವ್ಯಾದಾ-ಬೆಟ್ಟತಾವರೆ
ಪರಿಸರಾ-ವ್ಯವಹಾರದಲ್ಲಿ ಉಂಟಾದ್ದನ್ನು ನುಡಿವಿಕೆ

ಪರಿಸ್ಕೃತ-ಅಲಂಕಾರ
ಪರೀಕ್ಷೆ-ಶೋಧನೆ
ಪರುಠವಣೆ-ಸಿದ್ಧಮಾಡುವಿಕೆ
ಪರುಠವಾ-ವಿಸ್ತಾರ
ಪರುವಶಕೆ-ಕರ್ಕಶಕೆ
ಪರೇತರಾಟ-ಯಮ
ಪರ್ಗಾಸ-ಕಾಮಕಸ್ತೂರಿ
ಪರ್ಣ-ಎಲೆ, ರೆಕ್ಕೆ
ಪರ್ದುದೇರ, ಪಾರುಬಳಿಕೈಯ್ಯ-ವಿಷ್ಣು
ಪರಿಭೂಷಣ-ದುರ್ವಾದ
ಪರಿಯವಸ್ತಾ-ಹಗೆಗೊಳಿವಿಕೆ
ಪರಿತಾವಾದ-ನಿಂಬೆಯು
ಪರ್ವತ-ಬೆಟ್ಟ
ಪಲಂಶಿ-ವೃಕ್ಷಗಳು
ಪಲಕ-ಗಂಡುಮೃಗದ ಚರ್ಮದ ಹಲಿಗೆ
ಪಲಕವಾಣಿ-ಹಲಿಗೆಉಳ್ಳವನು
ಪಲಗುಣನು-ಇಂದ್ರ
ಪಲಮಾರಃ-ಮಾದಳಿಗಿಡ
ಪಲಲ-ಸರೋವರ, ಮಾಂಸ
ಪಲಾಶ-ಎಲೆಗಳು
ಪಲಾಶಃ-ಪಚ್ಚೆವರ್ಣ
ಪಲಿತ-ನರತಕೂದಲು
ಪಲಿತಿ-ಮುದಿಮುಂಡೆ
ಪಲ್ಲವ-ತಳಿರು
ಪಲ್ಲಶಾಬಕ-ಆನೆಮರಿ
ಪವಣೆ-ಪರಿಮಾಣ
ಪವಿತ್ರ-ಶುದ್ಧವಾದವ, ವಿಷ್ಣು

ಪವಿತ್ರಾ-ಕಿವಿಯಾಭರಣ
ಪವ್ವನೆ-ಆಕಸ್ಮಿಕ
ಪಶಿಕಃ-ದಾರಿನಡಿವವ
ಪಶು-ಕಟ್ಟತಕ್ಕ ಜೀವಿಗಳು
ಪಶ್ಚಾತ್ತಾಪ-ಅಜಾಗ್ರತೆ
ಪಷ್ಟಾಂಶು-ಎತ್ತರವಾದ್ದು
ಪಸದನಂ, ಪಸ-ವೀನತ್ವ, ದರಿದ್ರ
ಪಸರಾ, ಪಶ್ರಂಯಾ-ಪ್ರೀತಿಂಯು ಪ್ರಾರ್ಥಿಸುವಿಕೆ
ಪಸಾಯ-ಯಿನಾಮು, ಅಪ್ಪಣೆ
ಪಸುರ್ವಣಿ-ಮರಕತರತ್ನ
ಪಳಹರಾ-ಧ್ವಜಸ್ತಂಭದ ಹಲಿಗೆ
ಪಳಿಕು-ಸ್ಫಟಿಕ
ಪಾಂಗು-ಹಾನೆ
ಪಾಂಚಜನ್ಯ-ವಿಷ್ಣುರಕ್ಷೆ
ಪಾಂಶು-ಧೂಳಿ
ಪಾಂಸು-ಧೂಳಿ. ಹುಚ್ಚನು
ಪಾಕಲು-ಆಭರಣ
ಪಾಕ್ಯ-ಅಟುಪ್ಪು
ಪಾಠ-ಶಿಖಂಡಿಯು. ವೇದಾಧ್ಯಯನ
ಪಾಡೆನೆ-ಸದೃಶ
ಪಾಣ್ಪೆ-ಜಾರೆ
ಪಾತಯಾಳ್, ಪಾತುಕ-ಬೀಳುವಸ್ವಭಾವ
ಪಾತೋರುಹ-ಕಮಲ
ಪಾದುಕ-ಪಾದರಕ್ಷೆ
ಪಾದ್ಯ, ಪಾದಾಯ-ಶುದ್ಧೋದಕ
ಪಾಪ-ದೋಷ
ಪಾಮರಿ-ಪ್ರಿಯ
ಪಾಮಾ-ತುರಿಗಜ್ಜು
ಪಾರ-ನೀರಯೀಚಕರೆಪ್ರಾಂತ
ಪಾರಂಪರ್ಯಾ-ಪೂರ್ವದಿಂದ ಬಂದದ್ದು
ಪಾರಕ-ಪಾದರಸ
ಪಾರಾವತ-ಕಪೋತಪಕ್ಷಿ
ಪಾರಾವರ-ಸಮುದ್ರ
ಪಾರಿಬದ್ರ-ಪಾರಿಜಾತ
ಪಾಶ-ಬಂಧ
ಪಾಶಾಣ-ಕಲ್ಲು
ಪಾಳಿ-ಕ್ರಮ
ಪಾಳಿ-ಪಂಕ್ತಿ
ಪಿಂಚನಂ-ಜಿಡ್ಡುಳ್ಳದ್ದು
ಪಿಂಜರಃ-ಕಳವಳಗೊಳುವಸೇನೆ
ಪಿಂಜರಿ-ಬೆಳ್ಳಿ
ಪಿಂಡ-ಆನೆಕುಂಭ ಸ್ಥಳಗಳು
ಪಿಂತಿಲು, ಪೆರಗು-ಹಿಂಭಾಗ
ಪಿಚ್ಛಟಂ-ತವರ
ಪಿಟರ-ಮಡಿಕೆ
ಪಿತ್ರು, ಪ್ರಸು-ಸಂಧ್ಯಾಕಾಲ
ಪಿತ್ರುವನ-ಸುಡುಗಾಡು
ಪಿಪೀಲಿಕಾ-ಇರುವೆ
ಪಿಪ್ಪಿಲ-ಅರಳಿಮರ
ಪಿರಿತಿಸಿ-ಮರುಳುಭೂತ
ಪಿರಿಯರು-ಬ್ರಾಹ್ಮಣರು
ಪಿರುನಂ-ಕುಂಕುಮ ಕೇಸರಿ

ಪಿಳ್ಕು-ಬಾಣ
ಪೀತ-ಅರಿಶಿನ
ಪೀತಿ-ಕುದುರೆ
ಪೀನಂ, ಪೀತರಂ-ಒಳಿತಾದ್ದು
ಪುಂಥಲಿ-ಹಾದ್ರಿಗಿತ್ತಿ
ಪುಂಡರೀಕ-ಬಿಳಿತಾವರೆ
ಪುಂಡ್ರಾ-ಕಬ್ಬು
ಪುಂನಾಗಃ, ಪುರುಶಃ-ಸುರಗಿಮರ
ಪುಂಸವನಾ-ಹೆತ್ತತಂದೆ, ಸಂಸ್ಕಾರ
ಪುಗ್ಗಾಯ್ಲ-ಅಹಂಕಾರಿ
ಪುಣ್ಯಜೀವ-ವರ್ತಕನು
ಪುನರ್ಭವಾ-ಉಗುರು
ಪುಪುಣುಂಬ-ಪೆಣ್ವಡೆಯನು
ಪುಮಾನ್-ಮನುಷ್ಯ
ಪುಯ್ಯಲು-ಕಾಳಗ
ಪುರಂಧ್ರಿ-ಕುಟುಂಬ ಉಳ್ಳವಳು
ಪುರಃ-ದೂಪಗಿಡ, ನಗರ
ಪುರಾಣ-ಹಳೇದು
ಪುರೀತತಿ-ಕರುಳು
ಪುರು-ಕೊಂಡಾಟ, ದೇವಲೋಕ
ಪುರುಗಾರ್ತಿ ಪುರಃ, ಪುರೋಗಪಃ-ಊಳಿಗದವ
ಪುರುಭುಃ, ಪುರುಹ-ಹೆಚ್ಚಾದ್ದು
ಪುರುಶಃ-ಜೀವನ
ಪುರುಷ-ಮನುಜ
ಪುರುಳಿ-ಗಿಣಿಯು
ಪುರುಳು-ಅಭಿದಾನ
ಪುಲೋಮಜಾ-ಯಿಂದ್ರಾಣಿ, ಶಚೀದೇವಿ
ಪುಲೋಮಜಿತ್-ದೇವೇಂದ್ರ
ಪುಶ್ಕಲಿ-ಬಹುಶ್ರೇಷ್ಠನು
ಪುಷ್ಕರಣಿ-ಚೌಕಬಾವಿ
ಪುಷ್ಪ-ಹೂವು
ಪುಷ್ಪಂ, ಪುಶಿಕಂ-ಸಲಹುವ ಹಕ್ಕಿ
ಪುಷ್ಪದಂತೌ-ಸೂರ್ಯಚಂದ್ರರು
ಪುಷ್ಪದಂಸ್ವಾ-ಪಂಚಶರ
ಪುಷ್ಪಾಕೇತು-ಪುಷ್ಪಾಂಜನ
ಪುಷ್ಪಾವತಿ-ಮುಟ್ಟಾದವಳು
ಪುಸಿ-ಸುಳ್ಳು
ಪುಸ್ತಕ-ಕಟ್ಟಿದ್ದು, ಗ್ರಂಥ
ಪುಳಿಲು-ಮಳಲು, ಕಾಮ
ಪೂಂನೊಡೆಯ-ಕುಬೇರ
ಪೂಂಬೂಡೆಯನು-ಬ್ರಹ್ಮ
ಪೂಗ-ಅಡಿಕೆಮರ
ಪೂಗೆವಳವಿಗೆಯ-ಅಗ್ನಿ
ಪೂಚ್ಚಲಿಸಿತು-ಕಣ್ಣುಕದವ್ರುದು
ಪೂಚ್ಚಳಿ-ಬಿದಿರಿನಬಳೆ
ಪೂಜಾ-ರಾಶಿಗುಡ್ಡೆ
ಪೂಡೆ-ಹೊಟ್ಟೆ, ಮಡಿಲು
ಪೂಣ್ದು-ಜೋಡಿಸಿ
ಪೂಣ್ಮೆ-ಅಲಂಕೃತ
ಪೂತ-ಧಾನ್ಯರಾಶಿ, ಶಂಖ
ಪೂತ-ಶುದ್ಧವಾದ್ದು
ಪೂತದದಾನ-ಮೀನುಮರಿಗಳ ಗುಂಪು

ಪೂತು, ಪ್ಯಾಕು-ಲೇಸು
ಪೂಪ-ಹಿಟ್ಟು, ಬಕ್ಷ
ಪೂರಿತ-ಸಂಪೂರ್ಣ ತುಂಬಿಸುವದು
ಪೂರ್ಗಳು-ಗಾಯ
ಪೂರ್ಣ-ತುಂಬಿದ್ದು
ಪೂರ್ವದೇವ-ದೈತ್ಯರು
ಪೂಳಪು-ಮಿಂಚು
ಪೂಳಲು-ವಾಸಸ್ಥಾನ
ಪೂಳೆರೆ-ಪ್ರಾತಃಕಾಲ
ಪೂಳ್ತು-ಸೂರ್ಯ
ಪೆಂಕುಳಿ-ಹುಚ್ಚನು
ಪೆಂಡವಾಸ-ರಾಜಸ್ತ್ರೀವಾಸ ಮಾಡುವದು
ಪೆಂಣ್ವೆಂಬಾಗವಿಲಿ-ನಗರಿ
ಪೆಂಪಿಂದ-ಅಭಿವೃದ್ಧಿ
ಪೆಕ್ಕಣ-ನೋಟ ವಿಶೇಷ
ಪೆಚಕಃ-ಆನೆಬಾಲದ ಬುಡ
ಪೆಟ್ಟು, ಪೆರ್ಚು-ಗರ್ವ, ಉಬ್ಬಟ
ಪೆಡಮೆಟ್ಟಿತು-ಹಿಂಮೆಟ್ಟಿತು
ಪೆಣ್ದೊಡೆಯ-ಶಿವ
ಪೆಣ್ಬೆಡೆಯನು-ಕಾಮ
ಪೆಪ್ವಾಂಬ-ನವಿಲಿನಗರಿ
ಪೆಯ-ಯಜ್ಞ
ಪೆರು, ಪೆರವಾ-ನರಿ
ಪೆರೆ,-ಚಂದ್ರಬಿಂಬವು
ಪೆರೆಗು-ಹಿಂಭಾಗ
ಪೆರೆತೆಗದುದು-ಹಿಂತೆಗದುದು

ಪೆರೆದಲೆಯ-ಪರಮೇಶ್ವರ
ಪೆರೊಕ್ಕೊಳಂ-ಸಂತೋಷಾತಿಶಯ
ಪೆಲಾ-ಉಂಡಳು ದೆಂಜಿಲು
ಪೆಶಲ-ಆಲಸ್ಯವಿಲ್ಲದವ
ಪೆಸುಣ-ಕುತ್ಸಿತ
ಪೆಸ್ನ-ಸಾಮಾನ್ಯಪಕ್ಷಿಗಳು
ಪೆಹಿಃ-ಹಕ್ಕಿಮೊಟ್ಟೆ
ಪೇಟಃ , ಪೇಡ, ಪೆಟ್ಟಿಗೆ-ಗವಸಣಿಗೆ
ಪೈತೃಷ್ವಸೇಯ-ಸೋದರತ್ತೆಮಗ
ಪೈಲವ-ವಿರಳವಾದ್ದು
ಪೊಟ್ಟೆ-ಹಾರಿಬೀಳುವಮೀನು
ಪೊಡೆ-ಹೊಟ್ಟೆಹೊಡೆ
ಪೊದರು-ಗುಲ್ಮ
ಪೊರೆಮಾರು-ಬೆನ್ನುಕೊಡವದು
ಪೊಸೆ-ಮೊಸರುಕಡಿಯವದು
ಪೋತ-ದೋಣಿ, ಹಡಗು, ಶಿಶು
ಪೋತವಣಿಕಾ-ಹಡಗಿನ ವ್ಯಾಪಾರಿ
ಪೋತವಹಡಗಿಸೊ-ನಕಲಿ ಮರಿಗೂ
ಪೌಜು-ಕಾಲುನಡಿವದಳ
ಪೌಡ-ಉಡುಗರೆ, ಮುಂಡಾಸು
ಪೌರಸ್ತ್ಯ-ಪೂರ್ವ
ಪೌರೋಗವ-ಅಧಿಕಾರಿ
ಪ್ರಕಾರ-ಕೋಟೆ
ಪ್ರಕೋಷ್ಟ-ಮುಂಗಯಿ
ಪ್ರಕ್ರಮ-ಕೆಲಸಪ್ರಾರಂಭ
ಪ್ರಕ್ರುತ-ಆಗಿವದು, ಪ್ರಸ್ತುತವಾದ
ಪ್ರಕ್ರುತಿ-ಸ್ವಭಾವ

ಪ್ರಕ್ಷೇಡ್ವನಾ-ನಿಡುಸರಳು, ನಾರಾಚ
ಪ್ರಖ್ಯಾತಿ-ಕೀರ್ತಿ
ಪ್ರಗುಣ-ನೆಟ್ಟಗಿರುವದು
ಪ್ರಗ್ರಹ-ಕುದುರೆವಗ್ಯೆರೆ ಕಟ್ಟಿದ ಹಗ್ಗ
ಪ್ರಗ್ರಹಾ-ಸೆರೆಮನೆಯಲ್ಲಿರುವನು
ಪ್ರಚಕ್ರಂ-ದಂಡುಬಿಟ್ಟಸ್ಥಳ
ಪ್ರಚಾರ-ಮುಂದರಿಸುವಿಕೆ
ಪ್ರಚೂತ, ಪ್ರಚುರ-ಹೆಚ್ಚಾದದ್ದು
ಪ್ರಜೆ-ಮಕ್ಕಳು
ಪ್ರಡೀಗ-ಓಡುವಿಕೆ
ಪ್ರಣತ-ನಮಸ್ಕರಿಸಿದ
ಪ್ರಣಯ-ಪ್ರೀತಿ, ಸ್ನೇಹ
ಪ್ರಣಾದ-ಅನುರಾಗದಿಂದ ಹುಟ್ಟಿದ ಶಬ್ದ
ಪ್ರಣಾಳಿ-ದೋಣಿಮುಂತಾದ್ದು
ಪ್ರಣೇತ-ಅಟ್ಟಡಿಗೆ
ಪ್ರಣೆತ-ಹೊಗಳಲ್ಪಟ್ಟದ್ದು
ಪ್ರತನ ಪ್ರಶ್ನಾ-ಬಹುಕಾಲದ್ದು
ಪ್ರತಾ, ಪ್ರಸಿದ್ಧಿ, ಪುಷ್ಟಿ-ಮುಟ್ಟುವಿಕೆ
ಪ್ರತಿಕ-ಅವಯ
ಪ್ರತಿಖ್ಯಾತಿ-ಹೆಸರುವಾಸಿ
ಪ್ರತಿಘ-ಸಿಟ್ಟು
ಪ್ರತಿಚಾಯ-ಪ್ರತಿಕೃತಿ
ಪ್ರತಿಥ-ಧನಾದಿಗಳಿಂದಪ್ರಸಿದ್ಧನಾದ
ಪ್ರತಿನಿಧಿಃ-ಶಿಲಾದಿಗಳಿಗ್ಯೆದ ಪ್ರತಿಮೆ
ಪ್ರತಿಪದರ್ಶಿನಿ-ಸ್ತ್ರೀಯು
ಪ್ರತಿಪನ್ನ-ಅರಿಕೆಯಾಗವದು
ಪ್ರತಿಪ್ರಧ್ಧ, ಪ್ರಮುಖ, ಪ್ರಬರ್ಹ-ಉತ್ಸಾಹ ತಪ್ಪಿಸಿದವ, ಪ್ರಧಾನ
ಪ್ರತಿಮಾನ-ಪ್ರತಿಯಾತನಾ, ಪ್ರತಿಬಿಂಬ
ಪ್ರತಿರೋದಿನ್-ಕಳ್ಳನು
ಪ್ರತಿಹಾರ-ಬಾಗಿಲು
ಪ್ರತಿಹಾರ-ಬಾಗಿಲು ಕಾಯುವವ
ಪ್ರತಿಹಾರಕ-ಮಾಯೆಮಾಡುವವ
ಪ್ರತಿಹಾಸಕಃ-ಕಣಗಿಲುಪುಷ್ಪ
ಪ್ರತೀರ-ತಟ
ಪ್ರತ್ಯಕಾ-ಆಪ್ತನಾದವನು
ಪ್ರತ್ಯವಸಿತ-ಭುಂಜಿಸಲ್ಪಡುವದು
ಪ್ರತ್ಯಾದೋಷಃ-ತಿರಸ್ಕರಿಸುವಿಕೆ
ಪ್ರತ್ಯಾಧಿಷ್ಠ, ಪ್ರತ್ಯಾಖ್ಯಾತ-ನ್ಯಾಯತೀರಿಸಿದವ
ಪ್ರತ್ಯಾಹಾರ-ಇಂದ್ರಿಯನಿಗ್ರಹ
ಪ್ರತ್ಯುಗ್ರ-ಹೊಸತ್ತು
ಪ್ರತ್ಯೂತ್ಕ್ರಮ-ಸ್ಯೆನಿಕರು ಯುದ್ಧಕ್ಕೆ ಕೆಲಸನಡಸುವಿಕೆ
ಪ್ರತ್ಯೂಹ-ವಿಘ್ನ
ಪ್ರಥನ-ರಹಸ್ಯವಾದ ಬಾಗಿಲು
ಪ್ರದಯ-ಮುದುಕಿ
ಪ್ರದೀಪ-ದೀವಿಗೆ ಎಣ್ಣೆ
ಪ್ರದೇಶ-ಒಂದುಭೂಭಾಗ
ಪ್ರದ್ರಾವಹ-ಪಲಾಯನ
ಪ್ರಪದ-ಕಾಲಡಿಯ ತುದಿ
ಪ್ರಪಾಃ-ಯೆರವಟ್ಟಿಗೆ
ಪ್ರಪುಲ್ಲ-ಅರಳಿದ್ದು
ಪ್ರಭಾವ-ಬಲಿ

ಪ್ರಭು-ಶ್ರೇಷ್ಠ
ಪ್ರಮಾದ-ಎಚ್ಚರಿಕೆ ತಪ್ಪುವದು
ಪ್ರಮಾಪಣಂ, ಪ್ರವಾಹಸನಂ, ಪ್ರತಿಘಾತನಂ, ಪ್ರಮಥನಂ-ಇವೆಲ್ಲಾ ಕೊಲ್ಲುವಿಕೆಗೆ
ಪ್ರಮಿತಿ-ನಿಜವತಿಳಿವಿಕೆ
ಪ್ರಮೀತ-ಯಜ್ಞದಲ್ಲಿಕೊಂದ ಪಶು
ಪ್ರಯಾಣ-ಅರಮನೆ, ಉಪವನ, ಗಮನ
ಪ್ರಯಾಣ-ಮುಂದೆಹೋಗೋಣ
ಪ್ರಯಾಮ-ವ್ಯವಹಾರದಲ್ಯುಂಟಾದನ್ನು ನುಡಿವಿಕೆ, ಉದ್ದ
ಪ್ರಯೋಗ-ಕೆಲಸ, ಅಭಿನಯ
ಪ್ರಲಂಬಘ್ನ-ಬಲರಾಮ
ಪ್ರಲಂಬಿತ-ಕಟಿಸರ ಮೊದಲಾದ್ದು
ಪ್ರಲಾಪ-ಪ್ರಯೋಜನವಿಲ್ಲದ ಮಾತು
ಪ್ರವಲ್ಲಿಕಾ-ಗೂಡಾರ್ಥ
ಪ್ರವಾರ-ಉತ್ತರಿ ವಸ್ತ್ರ
ಪ್ರವಾರಣ-ಫಲಾಪೇಕ್ಷೆಯಿಂದಕೂಡವದು
ಪ್ರವಾವ-ಪ್ರವೃತ್ತಿ
ಪ್ರವಾಹ-ಹರಿವ ನೀರು
ಪ್ರವೃತ್ತಿ-ಕೆಲಸ
ಪ್ರವೇಣಿ-ಆನೆ, ಹೆಣೆದಿರುವ ಜಡೆ
ಪ್ರವೃತ್ತಿ -ವೃತ್ತಾಂತ
ಪ್ರಶಸ್ತ-ಶ್ಲಾಘನೆ
ಪ್ರಶಿಕ್ಷಾ-ಪೂಜ್ಯನು
ಪ್ರಶ್ಯಾ-ಕುಂಠ
ಪ್ರಷ್ಠೌಹೀ-ಗರ್ಭದಾಕಳು
ಪ್ರಸಭ-ಬಲಾತ್ಕಾರ
ಪ್ರಸವ್ಯಂ, ಪ್ರತಿಕೂಲಂ-ತಿರುಗಿಬಿದ್ದದ್ದು
ಪ್ರಸರಣೀ-ಸೇನೆ ವ್ಯಾಪಿಸಿಕೊಳ್ಳುವಿಕೆ
ಪ್ರಸವ-ಅತ್ಯಂತಪ್ರೀತಿ, ಹೆರುವುದು
ಪ್ರಸವಾ-ಹೂವು
ಪ್ರಸಾದ-ದಯೆ
ಪ್ರಸಾದ-ದೇವಸ್ಥಾನ, ಮನೆಗೂ
ಪ್ರಸಾಧನೀ-ಬಾಚಣಿಗೆ
ಪ್ರಸಾವ-ಮೂತ್ರ
ಪ್ರಸುತಾ-ಕಣಕಾಲು
ಪ್ರಸೂ-ತಾಯಿ
ಪ್ರಸ್ಥಾನಂ-ಜಯಾರ್ಥವಾಗಿ ಹೊರಟ ರಾಜ ಪ್ರಯಾಣ
ಪ್ರಸ್ಥಾಪುಷ್ಪ-ಮರುಗಪತ್ರ
ಪ್ರಸ್ತಾವ-ಸಮಯವಿಶೇಷ, ಪೀಠಿಕೆ
ಪ್ರಸ್ರುತಾ-ಪ್ರಗಲ್ಭ
ಪ್ರತಿಭಾನ್ವಿತಾ-ಪ್ರಕಾಶಿಸುವ ಪ್ರಜ್ಞೆಯವ
ಪ್ರಸ್ರುತ-ಜಿನುಗಿದ
ಪ್ರಹರಣ-ನಕಲಿ ಆಯುಧ
ಪ್ರಹಾರ-ಎಸೆಯವುದು, ಗಾಯಕ್ಕೂ
ಪ್ರಹುಡ-ತಿಳಿದವ
ಪ್ರಹ್ಲಾದನ, ಪ್ರಮುದಿತಾ-ಸಂತೋಷ ಪಟ್ಟವ
ಪ್ರಾಗ್ರೀಯಂ, ಪ್ರಾಗ್ರಹಾರಂ-ಶ್ರೇಷ್ಠ ವಾದುದ್ದು
ಪ್ರಾಚೀನ, ಪ್ರಾಚಿರ-ಹಾಕಿರುವಬೇಲಿ
ಪ್ರಾಜ್ಞಃ-ಪಂಡಿತ, ವಿದ್ವಾಂಸ
ಪ್ರಾಣ-ಜೀವ
ಪ್ರಾತಿಕಾಮಿಕಾ-ದೂತ

ಪ್ರಾತಿಯ–ಶೀತ, ಹಿಮ
ಪ್ರಾಪಿತಂ, ಪ್ರದೇಶನಂ–ಕಾಣಿಕೆಗೀವ
ಪ್ರಾಪ್ತ, ಪ್ರಣೆತಂ–ಹೊಂದಲ್ಪಟ್ಟದ್ದು
ಪ್ರಾಪ್ಯ–ಹೊಂದತಕ್ಕದ್ದು
ಪ್ರಾರ್ಥನೆ–ಬಹಳ ಕೇಳುವಿಕೆ
ಪ್ರಾರ್ಥಿತ–ಅಪೇಕ್ಷಿಸಲ್ಪಡುವದು
ಪ್ರಾಸ–ಈಟಿಕೋಲು, ಎಸೆ
ಪ್ರಾಹುಟುಕ್ಕಾಲ–ಮಳೆಗಾಲ
ಪ್ರೀತಿ–ಸ್ನೇಹಾ
ಪ್ರೀತಿ ಕಾಮಿಕಾ–ದೂತಾ
ಪ್ರುಕಾಮ–ಯೆತೇಷ್ಟವಾದದ್ದು
ಪ್ರುತಕಾ–ಗಂಡಾಮ್ರುಗ
ಪ್ರುತುರೋಮ–ಮೀನು
ಪ್ರುತ್ಕುಜನಾ–ನೀಚ
ಪ್ರುಥಗಾತ್ಮತಾ–ಪ್ರಕೃತಿ ಪುರುಷ
ಪ್ರುಥಾ–ಕುಂತಿದೇವಿ
ಪ್ರುಥುಃ, ಪ್ರುಥುಲಂ–ದೊಡ್ಡದು, ವಿಶಾಲ
ಪ್ರುಥುಕಾ–ಅವಲಕ್ಕಿ
ಪ್ರುದು, ಪ್ರುದುಲಂ–ದೊಡ್ಡದು
ಪ್ರುಧನ–ಚತುರಂಗಬಲವು
ಪ್ರುರ್ದುಜನಾ–ನೀಚನು
ಪ್ರುಶತ–ನೀರಹನಿ
ಪ್ರುಶದಶ್ವಾ–ವಾಯು
ಪ್ರುಶ್ಚಕ–ಬಾಣ
ಪ್ರುಷ್ಟಂ–ಹಿಂದುಗಡೆಬೆನ್ನು
ಪ್ರುಷ್ಠ–ಸುಡಲ್ಪಟ್ಟದ್ದು
ಪ್ರುಷ್ಠಾ, ಪ್ಲುಷ್ಠ–ಸುಡಲ್ಪಟ್ಟದ್ದು
ಪ್ರೇಂಕಿತಂ–ಅಲ್ಲಾಡಿಸಲ್ಪಟ್ಟದ್ದು
ಪ್ರೋಕ್ಷಿತಃ–ಯಜ್ಞದಲಿಕೊಂದಪಶು
ಪ್ರೌಢ–ಸಾಹಸ, ಧಾವಕಿ
ಪ್ರೌಢಂ–ಬೆಳದಂಥಾದ್ದು
ಪ್ರೌವ್ಯಕ್ತಂ–ಪ್ರಕಟವಾದ್ದು
ಪ್ಲಿಯಶತ್ರು–ದಾಡಿಮ ಪುಷ್ಪ
ಪ್ಲೆಡಿಕಾ–ಉಯ್ಯಲು

–ಫ–

ಫಣಾ–ಸರ್ಪನಹೆಡೆ
ಫಲಾಶ–ಎಲೆಗಳ್
ಫಲೇಗ್ರಹಿ–ಸದ್ಬಾಫಲ ಇರುವಗಿಡ

–ಬ–

ಬಗರಗೆ–ಪಾತ್ರ
ಬಗ್ಗನೆ–ವ್ಯಾಘ್ರು
ಬಗ್ಗು, ಚಪ್ಪಂಡಂ, ಚಪ್ಪರಣೆ–ಧ್ವನಿ
ಬಜ್ಯ–ವಂಶ
ಬಡಿಗೀ–ಕೆಲಸದವ
ಬತ್ತಳಿಕೆ–ಬಾಣದ ಚೀಲ
ಬದ್ದಃ–ಕಟ್ಟಿಸಿಕೊಂಡವ
ಬದ್ಧ–ಕಟ್ಟಲ್ಪಟ್ಟಾಂಥದ್ದು
ಬರಃ–ಅತಿಶಯ
ಬರಿಸದ್ಮ–ಪಾತಾಳ
ಬರೆಕಾ–ಬತ್ತಿದ್ದು
ಬರ್ದು–ಶಬ್ದ
ಬರ್ದುಗ–ಬಲ್ಲವ
ಬರ್ಹಿಶುಶ್ಮಾ–ಅಗ್ನಿ

ಬಲರಾಶಿ-ದೇವೇಂದ್ರ
ಬಲಾಹತಂ-ಮೇಘ
ಬಲೀವರ್ದ-ಎತ್ತುಗಳು
ಬಲ್ಲೂಕಃ, ಬಲ್ಲಃ-ಕರಡಿ
ಬಲ್ಸಿರಿ-ದೊಡ್ಡಮಳೆ
ಬವರಿ-ಹೆಂಣು ತುಂಬಿ
ಬವಸು-ವ್ಯವಸಾಯ
ಬಹುಪಾದ-ಆಲದಮರ
ಬಹುಳಂ, ಬಹು-ಹೆಚ್ಚಾದ್ದು
ಬಹುಳೀಕ್ರುತಂ-ಧಾನ್ಯರಾಶಿ
ಬಳಿಸಲು-ಬೆನ್ನತ್ತಿದ್ದು
ಬಳೆಯಿಸು-ಸಲಿಸು
ಬಳ್ಕಿದಂ-ಅಂಜಿಕೆಹೊಂದಿದವನು
ಬಾಕುಳಿ-ಅತ್ಯಾಶೆ
ಬಾಡಬ-ವಡಭಾಗ್ನಿ
ಬಾಡಬಂ-ಹೆಣ್ಣುಕುದುರೆಗುಂಪು
ಬಾಡಬ್ಯಂ, ಬಾಡವ್ಯ-ಬ್ರಾಹ್ಮಣರಗುಂಪು
ಬಾಡು-ಮಾಂಸ
ಬಾಣಸಿಗ-ಅಡಿಗೆಯವ
ಬಾಣಿ, ಬಾಸೆವೆಂಣು-ಸರಸ್ವತಿ
ಬಾತೆ-ಕೋಳಿ
ಬಾಧಾ-ದುಃಖ
ಬಾಲೇಯ-ಕತ್ತೆ
ಬಾಸಣೆ-ಹೊರಳುವಿಕೆ
ಬಾಹಿರ-ಅಪ್ರಬುದ್ಧ
ಬಾಹುಜ-ಕ್ಷತ್ರಿಯ
ಬಾಹುದ-ನದಿಯು
ಬಾಹುಲ-ಕಾರ್ತಿಕಮಾಸ
ಬಾಹುಲೇಯ-ಷಣ್ಮುಖ
ಬಾಹ್ಲೀಕಂ-ಹಿಂಗು, ಕುಂಕುಮ ಕೇಸರಿ
ಬಾಳವಾ-ಪೂರ್ಣವಾದುದಕ್ಕೆ
ಬಾಳಿಕೆ-ಬದುಕು
ಬಾಳ್ತಳು-ಸಂಸಾರಿಗಳಾದವೀರರು
ಬೀಜ-ಬಿತ್ತು
ಬೌರಿಕಾ-ಖಜಾನೆ ಅಧಿಕಾರಿ
ಬ್ರಾಹ್ಮಣ-ಪ್ರಾರ್ಥಿಸುವವನು

-ಭಾ-

ಭಂಡೀರೀ, ಭಾಂಡಿ-ಮಂಜಿಷ್ಠೆ
ಭಟ್ಟಿನಿ-ರಾಜಪತ್ನಿ
ಭದ್ರ-ಚಿನ್ನ, ಎತ್ತು
ಭದ್ರಶಿ-ಚಂದಣ
ಭರ-ಬೇಗ, ಅತಿಶಯ
ಭರದ್ವಾಜ-ಕುಪ್ಪುಳು
ಭರಪರ್ಣಿ-ಕುಂಬಳಗಿಡ
ಭರಿತ-ತುಂಬಿದ
ಭರ್ತುರ್ದಾರ್ತಕ-ಸರ್ವಧಿಕಾರಿ
ಭವ-ಇರುವಿಕೆ
ಭವತು-ಸ್ವಾಮಿ
ಭಸ್ಮಗರ್ಭ-ಪರಿಮಳಶೋಕ
ಭಾಂದತಿನೆಯ-ಹಾದ್ರಿಗೆತ್ತಿಮಗ
ಭಾಗಧೇಯ-ಶುಭಾಶುಭ
ಭಾಗಿನೇಯ-ಸೋದರಳಿಯ
ಭಾಗ್ಯ-ಪಾಲುಳ್ಳದ್ದು, ಅದೃಷ್ಟ
ಭಾಮಿನೀ-ಶೃಂಗಾರ ಉಳ್ಳವಳು, ಕೋಪ ವುಳ್ಳವಳು

ಭಾರವಣೆ-ಭಾರ

ಭಾವ-ಆಗುವಿಕೆಯದು, ಆಶಯ

ಭಾಷಣೆ-ಅನ್ಯೋನ್ಯ ಪ್ರೀತಿಯಿಂದಾಡಿವಿಕೆ

ಭೀತ-ಅಂಜುವ, ಹೆದರುವ

ಭೀರು-ಭಯಉಳ್ಳವಳು

ಭೀಷಣಂ, ಭೀಷ್ಮಂ, ಭೀಮಂ, ಭಯಾನಖಂ, ಭಯಂಕರಂ, ಭೀತಿಃ, ಭೀಃ, ಭಯಂ-ಇವುಗಳು ಭಯಂಕರಕ್ಕೂ ಭಯಾನಕಕ್ಕೂ ಇರುವ ಹೆಸರುಗಳು

ಭುಜಂಗ-ಹಾವು

ಭೂಜೋಖಾಸ್-ದೋಲ್‌ಹೊಟ್ಟೆಯವ

ಭೂಪಾಲ-ಅರಸು

ಭೂಮಿಜ-ಭೂಮಿಯಲ್ಲಿ ಹುಟ್ಟಿದ

ಭೂಮಿಸ್ಪೃಶ್-ವೈಶ್ಯಮೊದಲಾವರು

ಭೂರಿ ಮಾಯ-ಜಂಬುಕ

ಭೇಷಜಾ-ರೋಗಹರವಾದ್ಯು

ಭೌತಿಕ-ಯೋಜನೆಹೇಳುವನು

ಭ್ರುಂಗಾರಿ-ರೆಕ್ಕೆಉಳ್ಳ ಇರುವೆ

ಭ್ರುಂಗಿ-ನಂದಿ

ಭ್ರುಂಹಿತಾ-ಕೂಗು

ಭ್ರುಕುಂಸಾ-ಸ್ತ್ರೀವೇಷದಾರಿ

ಭ್ರುಕುಟ-ಭ್ರೂಕುಟಿ-ಹುಬ್ಬು

ಭ್ರುಗು-ಬೆಟ್ಟದಜರಿ

ಭ್ರುಣಾ-ಗರ್ಭ

ಭ್ರುತ್ಯಾ, ಭ್ರುತಿ-ಕೂಲಿ

ಭ್ರುಹತ್-ದೊಡ್ಡ

ಭ್ರುಹತಿಕಾ-ಮೇಲುಹೊದಿಕೆ

-ಮ-

ಮಂಗಲ್ಯಂ-ಅಗರುಗಂಧ

ಮಂಜರ-ಬೆಕ್ಕು, ತಿಲಕವೃಕ್ಷ

ಮಂಜುವೆಳಗನು, ಮಿಗಲಚ್ಛಗಂಣಂ-ಶಶಿ

ಮಂಜುಳಂ, ಮನೋಜ್ಞಂ-ಸೊಗಸಾದದ್ದು

ಮಂಡ-ಹರಳುಗಿಡ

ಮಂಡಂ-ತುಪ್ಪಮೊದಲಾದ ರಸ

ಮಂಡಃ-ಕುರಿ

ಮಂಡನ-ಆಭರಣ

ಮಂಡನಂ-ಬ್ರಹ್ಮಸ್ವರೂಪವಾಗುವಿಕೆ

ಮಂಡಲಾಗ್ರಃ-ಖಡ್ಗಗಳು

ಮಂಡೂಕಪರ್ಣಿ-ಮಂಜೆಟ್ಟಿ, ಹೆಮ್ಮರಪರ್ಣ

ಮಂಡೂರ-ನೊರೆ, ತುಕ್ಕು

ಮಂಡೂರಃ-ಕಬ್ಬಿಣದಗಟ್ಟ

ಮಂತು-ಅಪರಾಧ

ಮಂತ್ರಿ-ಯೋಜನೆಹೇಳುವವ

ಮಂಥಃ, ಮಂಥಾನಃ-ಕಡಗೋಲು

ಮಂದರಾ, ಮಂದಗಾಮಿನಿ-ಮೆಲ್ಲಗೆನಡಿವನು

ಮಂದಾಕಿನಿ-ಆಕಾಶಗಂಗೆ

ಮಂದಾರ-ಯೆಕ್ಕೆಗಿಡ, ಪಾರಿಜಾತ

ಮಂದ್ರಃ-ಗಂಭೀರಧ್ವನಿ

ಮಕರಃ-ಚೋರಮೀನು

ಮಕರಧ್ವಜ-ಕಾಮಚಕ್ರೇಶ್ವರ

ಮಕ್ಷಿಕಾ-ಒಂದುಜಾತಿ ಹುಳ
ಮಗುಳೆ-ಮತ್ತು
ಮಗ್ಗಿದರು-ಸಂಕೋಚಹೊಂದಿದರು
ಮಗ್ನ-ಮುಳುಗಿದ್ದು
ಮಜಗಿಜಿ-ಅರದಚೂರ್ಣ
ಮಜ್ಯ-ಯೆಲುಬಿನೊಳಗೆ ಮುಳುಗಿದ್ದು
ಮಡಲು-ಸಮೀಪ
ಮಡಲು-ಹಚ್ಚಿದ್ದು
ಮಣಿಕಾ-ಗುಡಾಣ
ಮತಃ-ಸಂತೋಷಪಟ್ಟನು, ಒಪ್ಪಿಗೆ
ಮತ್ತಕಾಶಿನಿ-ಉತ್ತಮಸ್ತ್ರೀ
ಮತ್ಸಧಾನೀ-ಮೀನುಹಾಕುವಬುಟ್ಟಿ
ಮತ್ಸಬಂಧನ-ಗಾಳ
ಮದಕಲ-ಮದ್ದಾನೆ
ಮದಮುಖರು-ದರ್ಪಮುಖರು
ಮದಸ್ಥಾನಂ-ಹೆಂಡಕುಡಿವ ಮನೆ
ಮದಿರಾಗ್ರಹ-ಸರಾಯಿಗಡಂಗು
ಮದೀರಾಕಳಿ, ಹೆಂಡ
ಮದುಃ-ಚೈತ್ರಮಾಸ
ಮದುವಾರಃ, ಮಧುಕ್ರಮ-ಮದ್ಯಪಾನ
ಮದ್ಗುರ-ಮುಳುಗಿರುವಮೀನು
ಮದ್ಯ-ಅಮಲುಪಡಿಸುವ ಸರಾಯಿ ಇತ್ಯಾದಿ
ಮಧ್ಯಮ-ನೆರೆದ ಸ್ತ್ರೀ
ಮಧುಪಕ್ಷಿಕಾ-ಜೇನುನೊಣ
ಮಧುರ-ಸವಿ
ಮಧುವ್ರತಾಃ, ಮಧುಕರಾಃ, ಮಧುವಿಟ, ಮದುಪಃ, ಮಧು-ತುಂಬಿ

ಮನಃಶಿಲಾ, ಮನೋಗುಪ್ತ-ಮಣಿಶಿಲೆ
ಮನಹಾರಿ-ಚಂಚಲಬುದ್ಧಿಯವ
ಮನಿತಂ-ತಿಳಿಯಲ್ಪಟ್ಟದ್ದು
ಮನೀಷಿನ್-ವಿದ್ವಾಂಸನು
ಮನೋಜ್ಞಂ-ಸೊಗಸಾದ್ದು
ಮಯಾ-ತುಂಬಿದಾ
ಮಯೂಖ, ಮರೀಚಿ-ಸೂರ್ಯ ಕಿರಣ
ಮಯೂರ-ಬಿಲ್ವಪತ್ರ, ನವಿಲು
ಮಯೂರಕ-ನೀಲಿಗಿಡ, ನವಿಲು
ಮರಕತ-ರತ್ನ
ಮರಗನಾಭೆ, ಮೃಗಮದಃ-ಕಸ್ತೂರಿ
ಮರೀಚಿ-ಮೆಣ್ಸುಕಾಳು, ಜಿಮಣ
ಮರೀಚಿಕಾ-ಬಿಸಿಲ್ಗುದುರೆ
ಮರುಕಾ-ಮೋಹ
ಮರುಕುಳಿ-ಹುಚ್ಚು
ಮರುಗೂಳ-ಅಗ್ನಿಯು
ಮರುತ್ವಾನ್, ಮಘವಾ-ದೇವೇಂದ್ರ
ಮರುವಕ-ಮರುಗಪತ್ರ
ಮರುಹಾಸ-ಬಹಳಾಶೆ
ಮರುಳ-ದುಶ್ಶೀಲ
ಮರುಳ್ಗಳು-ಪಿಶಾಚಿಗಳು
ಮರ್ಕಟ-ಜೇಡಹುಳ, ಕೋತಿ
ಮರ್ಬುಗಾ-ಕತ್ತಲೆ
ಮರ್ಮರಾ-ಬಟ್ಟೆ, ಎಲೆಗಳಿಂದಾದ ಧ್ವನಿ
ಮರ್‍ಯಾದೆ-ಪದ್ಧತಿ
ಮರೀಚಿಕೆ-ಕಿರಣಗಳ ಆಟ
ಮಲೀನಂ, ಮಲಿದೂಶಿತಂ-ಮಲಿನವಾದ್ದು

ಮಲೆಯಜ-ಚಂದಣ
ಮಲ್ಲರು-ಯುದ್ಧಸಮರ್ಥರು
ಮಲ್ಲಳಿ-ತುಂಬಿ
ಮಲ್ಲಳಿ-ವಿಸ್ಮಯ
ಮಸಗಿದಾ-ವಿಜೃಂಬಿಸಿದಾ
ಮಸಗಿದಾ-ಹೆಚ್ಚಿದಾ
ಮಸಗೂ-ಹೆಚ್ಚಾಗಿ ನಡೆ
ಮಸಮಸ-ತೇಜವಳಿದು ಹೀನವಾದು
ಮಸುಳಿಸೀತೂ-ಅಡಗಿತು
ಮಸ್ಕರಿ-ಸಂನ್ಯಾಸಿ
ಮಸ್ರುಣಃ-ನಯವಾದ್ದು-ಮೆತ್ತಗಾದದ್ದು
ಮಹಾಕುಲಃ-ಒಳ್ಳೆಕುಲದವ
ಮಹಾಶಯ, ಮಹೇಚ-ಘನವಾದ ಮನಸ್ಸುಳ್ಳವ
ಮಹಿ-ಮೃತ್-ಮಣ್ಣು
ಮಹಿಂದ್ರಃ-ಬೆಟ್ಟ
ಮಹಿಷ-ಕಾಡ್ಗೋಣ
ಮಹಿಶಿ-ಪಟ್ಟದರಾಣಿ
ಮಹೀರುಹ-ಹತ್ತಿಗಿಡ, ವೃಕ್ಷ
ಮಹೋಕ್ಷ-ದೊಡ್ಡಎತ್ತು
ಮಹೌಷಧಂ-ವಣಶುಂಟಿ
ಮಳಾರ-ಕುದುರೆಗಳ ಪಟ್ಟಿ
ಮಾಗದ-ಕ್ಷತ್ರಿಹೆಣ್ಣಿನಲ್ಲಿ ವೈಶ್ಯಗೆ ಹುಟ್ಟಿದವ
ಮಾಗದಿ-ಕಾಡುಮಲ್ಲಿಗೆ
ಮಾಡಾ-ಉಪ್ಪರಿಗೆ
ಮಾಣದೆ-ಬಿಡದೆ
ಮಾಣದ್ಯ-ಹುಡುಗರ ಗುಂಪು

ಮಾಣು-ಉಳಿದಿರು
ಮಾತಂಗ-ಚಂಡಾಲ, ಗಜ
ಮಾತರಿಶ್ವಾ-ವಾಯು
ಮಾತುಲ-ಸೋದರಮಾವ
ಮಾತುಲುಂಗಕ-ಮಾದಳಿಗಿಡ
ಮಾತುಲಾನಿ-ಭಂಗ
ಮಾತುಲಿಪುತ್ರಕಃ-ಉಮತ್ತಿಕೈ
ಮಾತ್ರ-ಸಂಖ್ಯೆ
ಮಾತ್ರಾ-ಕೊಂಚ
ಮಾತ್ರುಕೆ-ಅಕ್ಷರ
ಮಾತ್ರೆ-ಚಿಟ್ಕ
ಮಾದಲಿ-ಕಾಡಿರವಂತಿಗೆ
ಮಾಧವಃ-ವೈಶಾಖಮಾಸ
ಮಾನಪೌರಸಃ-ಹಂಸಪಕ್ಷಿ
ಮಾನವ-ಮನುವಿನಿಂ ನರಬಂದವ
ಮಾಯಾವರಣ-ಮಾಯೆಸುತ್ತುಸುತ್ತಿದ ಸ್ಥಿತಿ
ಮಾಯು-ಮಾಂಸ, ಪಿತ್ತ
ಮಾಯೆ-ವಿಶ್ವ
ಮಾರಜಿತ್-ಬೌದ್ಧದೇವರು, ಜಿನದೇವ
ಮಾರಾನೂ-ಎದುರಿಸು
ಮಾರ್ಗಣ-ಬೇಡುವದು
ಮಾರ್ಗಿತ-ಹುಡುಕಲ್ಪಟ್ಟಿರುವದು
ಮಾರ್ದಗಿಕಾ-ಮದ್ದಳೆ
ಮಾರ್ದ್ವನಿ-ಪ್ರತಿಧ್ವನಿ
ಮಾರ್ದ್ವಿಕಂ-ದ್ರಾಕ್ಷೆಹಣ್ಣಿನ ಹೆಂಡ
ಮಾರಾಪೋರ್ಳೆ-ಪ್ರತಿಬಿಂಬವಾಗಿ ತೋರುವದು

ಮಾರ್ಮುಗಿಲು-ಎದುರಾದ ಮೋಡ
ಮಾಲತಿ-ಜಾಜಿಗಿಡ
ಮಾಲಾಕಾರಾ-ಮಾಲಿಕಾ, ಮಾವಾಡಿಗ
ಮಾಲಿನಿ-ಪಾರ್ವತಿ
ಮಾಲ್ಯಂ, ಮಾಲಾ-ಹೂಮಾಲೆ
ಮಾವಂತರು-ಆನೆಮಾವಟಿಗರು
ಮಾಷ್ಠೆಃ-ಮಾರ್ಜನ-ಪರಿಮಳ ದ್ರವ್ಯ
ಮಾಷ್ಯಂ, ಮಾಷಂ-ಉದ್ದು
ಮಾಹಿಶ್ಯ-ವೈಶ್ಯ ಹೆಣ್ಣಿನಲ್ಲಿ ಕ್ಷತ್ರಿಯಗೆ ಹುಟ್ಟಿದವ
ಮಾಳ್ಕೆ-ರೀತಿ
ಮಿಕ್ಕಣ-ಹೊಳದು
ಮಿಗಗೈಯ್ಯನು-ಪರಮೇಶ್ವರ
ಮಿಗವಕ್ಕಿಗಂ, ಮೀಂಗಳೆರೆ-ಚಂದ್ರಬಿಂಬ
ಮಿಗಿಲು-ಹೆಚ್ಚಾದ್ದು
ಮಿಗು-ಹೆಚ್ಚಾಗು
ಮಿಗೂ-ಪ್ರಕಾಶಿಸು
ಮಿಗೆ-ಹೆಚ್ಚಾಗಿ
ಮಿಗೆದೆರ-ಅಗಿಲಿ, ಅಗ್ನಿ
ಮಿಡಿದಾ-ಘರ್ಜಿಸಿದಾ
ಮಿಡುಕು-ಪರಾಕ್ರಮ
ಮಿಣಿ-ಹರಿ
ಮಿತ-ಪ್ರೀತಿಯಿಂದಂನ್ಯೋನ್ಯವಾಡುವದು, ಅಲ್ಪವಾದ
ಮಿತ್ಯಾಭಿಯೋಗ-ಇಲ್ಲದ್ದನ್ನು ಕಲ್ಪಿಸುವದು
ಮಿತ್ಯಾಭಿಸಂಪನಾ-ಇಲ್ಲದ ತಪ್ಪು ಹೊರಿಸುವದು
ಮಿರುಗು, ಮಿನುಗು-ಪ್ರಕಾಶವು
ಮಿಷ್ಣಂ-ಅರ್ಥತಿಳಿಯದ ಮಾತು
ಮೀಂಬಟ್ಟ-ಇಂದ್ರ
ಮೀಂಬಳವಿಗೆಯ-ಮನ್ಮಥ
ಮೀಢಂ-ಮೂತ್ರಬಿಡವದು
ಮೀನು-ನಕ್ಷತ್ರ
ಮೀಸಲು-ಭದ್ರತೆ, ಬಳಸದೆ ಇರುವುದು
ಮುಂಗುಡಿ-ಮೂಗ, ಮುಂದುಕಡೆ
ಮುಂಡಃ, ಮುಂಡಿತ-ಬೋಳುತಲೆ
ಮುಂಡನಂ-ಬ್ರಹ್ಮಸ್ವರೂಪವಾಗುವಿಕೆ
ಮುಂಡಾಡು-ತಲೆಆಡಿ ಪ್ರೀತಿಮಾಡುವಿಕೆ
ಮುಂದುರು-ಮುಂದೆ ನುಗ್ಗುವದು
ಮುಂಮುಳಿ-ರೂಪಳಿದದ್ದು
ಮುಕುರಾ-ಕನ್ನಡಿ
ಮುಕ್ಕು-ಗರಿ
ಮುಕ್ಕುರು-ವ್ಯಾಪಿಸಿಕೊಳ್ಳುವದು
ಮುಕ್ಕುರುಕಿ-ಮುತ್ತಿಗೆಹಾಕಿ
ಮುಕ್ಕುರುಕೆ-ಮೂಗುಹರಿದದ್ದು ಬಂಗಪಡಿಸಿದ್ದು
ಮುಕ್ತಾ-ದ್ವೇಷಬಿಟ್ಟು, ಮುತ್ತು
ಮುಗ್ಗಿದರು, ಮುಕ್ಕುರಿಸಿದರು-ಧ್ವನಿ ಕೂಡಿಸಿದರು
ಮುತುಡು-ಮುಂಗೈ
ಮುದುಡು-ಚಿಕ್ಕ
ಮುದ್ಗರ-ಗುದ್ದಳಿ, ಹಾರೆಗಳು
ಮುದ್ರಿಸು-ಭದ್ರಮಾಡು
ಮುನಿ-ಬುದ್ಧಿಶಾಲಿ, ಯಷಿ
ಮುಪಹಾರ-ಪಸರ

ಮುಯ್ಯಿರ್ಮೊಗಂ-ಗುಹ
ಮುಯ್ಯೆರಡಡಿ-ತುಂಬಿ
ಮುರಿತ-ಕೋಪಿ
ಮುರುಹು-ಗಾಲಿಯ ದುಂಡಾಕೃತಿ
ಮುಷ್ಕ-ವೃಷಣ
ಮುಸಲಿ-ಹಲ್ಲಿ
ಮೂಗನವಟ್ಟುದು-ಮೌನ
ಮೂಡಿ-ಉತ್ಪತ್ತಿ
ಮೂತಂ-ಕಟ್ಟಲ್ಪಟ್ಟದ್ದು
ಮೂತ್ರಕೃಚ್ಛ್ರಂ-ಬಹುಮೂತ್ರ
ಮೂದಲೆ-ಬೆದರಿಸುವನುಡಿ
ಮೂರ್ಛಾ-ಮೋಹ
ಮೂರ್ತಿಮರ್, ಮೂರ್ತ-ಗಟ್ಟಿಯಾಗಿ ಇರುವದು
ಮೂರ್ದಾಭಿಶಿಕ್ತಃ-ಪಟ್ಟದರಸು
ಮೂಶಾ-ಚಿನ್ನದಕೊವೆ
ಮೂಶಿಕ-ಕಡಿಯಲ್ಪಟ್ಟದ್ದು
ಮೂಸ್ಕದೇರ-ವಿನಾಯಕ
ಮೂಳೆ-ಯೆಲುಬು
ಮೃಗಃ-ಜಿಂಕೆ
ಮೃಗದಂಶಕಾ-ನಾಯಿ
ಮೃಗಧೂರ್ತಕಃ, ಕುದುಕ್ಕ-ನರಿ
ಮೃಗಬಂದಿನಿ-ಬಲೆ
ಮೃಗರಾಜ-ಸಿಂಹ
ಮೃಗವ್ಯಂ, ಮೃಗಯಾ-ಬೇಟೆ
ಮೃಣಾಳಂಬಿಸ-ತಾವರೆದಂಡು
ಮೃತ್ತಿಕಾ-ಮಣ್ಣು
ಮೃತ್ಯು-ಮರಣ
ಮೆಂಥೇಯಂ-ವಸಂತದೂತಿಕೆ
ಮೆಣೆ-ಮೇಲೆಯು
ಮೆದಲು-ಎಲುಬಿನೊಳಗಿರುವ ಒಂದು ವಸ್ತು
ಮೆರೆ-ಪ್ರಕಾಶಿಸು
ಮೆರೆ-ವಾಸಸ್ತಾನವು
ಮೆಳಂಬಾ-ತುಂಬಿ
ಮೇಉದು, ಮೇವುದು-ಹೊದಿವಶೀರೆ
ಮೇಖಲಕನ್ಯಕಾ-ನರ್ಮದಾನದಿ
ಮೇಖಲಾ-ಅಸ್ತ್ರಜಾರದಹಾಗೆ ಕಟ್ಟಿದವು
ಮೇಖಲಾ-ಪಟ್ಟಿ, ಡಾಬು
ಮೇಘವಾಹನ-ದೇವೇಂದ್ರ
ಮೇದ್ಯಂ-ಶುದ್ಧವಾದ್ದು
ಮೇಲುಗೈ-ಪತಾಕೆ
ಮೇಶಕಂಬಳ-ಕುರಿರೋಮದಕಂಬಳಿ
ಮೈ-ಭುಜದಕೊನೆ
ಮೈಗರದೆ-ಪ್ರೌಢನು
ಮೈಗೆರೆ-ಅಡಗಿಕೊಳ್ಳು
ಮೊಗಂ-ಪ್ರಯೋಜನವಿಲ್ಲದ್ದು
ಮೊಗವಡಾ-ಲಗಾಂಮು
ಮೊಗ್ಗರ-ಬಲವು
ಮೊಡ್ಡಾವಣೆ-ಸಂನಹಾ
ಮೊಡ್ಡು-ಸೈನ್ಯ
ಮೊನೆ-ಜಗಳ, ಯುದ್ಧ
ಮೊರಡಿ-ಮಣ್ಣುಪರ್ವತ
ಮೊರಾ-ನವಿಲು

ಮೊರ್ಕಳ–ಸಂತೋಷಾತಿಶಯ

ಮೊಳ್ಗು–ಮಣಿ

ಮೋಡಾಮೋಡಿ–ಮುಂದುಗಾಣದಿರ–ವದು

ಮೋಶಕಾ–ಕಳ್ಳನು

ಮೋಹ–ಮರುಳಾಗಿವಿಕೆ, ಅಜ್ಞಾನ

ಮೌಕುಳಿ–ವಾಯಸ–ಕಾಗೆ

ಮೌರಜಿಕಃ–ಮದ್ದಳೆಬಡಿವವ

ಮೌರ್ವೀ–ಬಿಲ್ಲುಬಿಗಿವ ತೂಗಲಿನ ಹಗ್ಗ

ಮೇಚ್ಛಮುಖ–ತಾಮ್ರ

–ಯ–

ಯಜಮಾನ–ಒಳ್ಳೆಸ್ಥಿತಿಯ ಗೃಹಸ್ಥನು

ಯಜುರ್ವೇದ–ಯಜ್ಞದ ತಿಳುವಳಿಕೆ

ಯತ್ತುಂಗೊಲೆ–ಕೂರ್ಗಣೆ

ಯದ್ರಚ್ಯಾ–ಮನಸ್ಸು ಬಂದಹಾಗೆ ಹೇಳಲಾಗಿರುವದು

ಯಮುನಾಭ್ರಾತ, ಯಮರಾಟ–ಯಮ

ಯವಸಃ, ಯಾವಸಃ–ದನಗಳು ತಿನ್ನುವಹುಲ್ಲು

ಯಶಃ–ಕೀರ್ತಿ

ಯಷ್ಟ–ಯಾಗ ಮಾಡುವವನು

ಯಾಗ–ಯಜ್ಞ

ಯಾಚಕಾ–ಬೇಡುವವ

ಯಾಜ್ಞಾಂಯಾಚನಾ–ಬೇಡುವಿಕೆ

ಯಾಟವಿಕು–ಧೂರ್ತ

ಯಾದಪ್ರಾಃ, ಯಾದನಾಥ–ಮುಖ್ಯವಾದಾನೆ

ಯಾದಃಪತಿ–ಸಮುದ್ರ

ಯಾಪ್ಯಯಾನ–ಅಣ್ಣ, ಮೇನಾ

ಯಾಪ್ಯಾ–ಜಾತ್ಯಾಚಾರವಿಲ್ಲದಧಮ

ಯಾಮಾ–ಝೂಮ

ಯಾಮಿನೀ–ರಾತ್ರಿ

ಯಾಮುದಾ–ಸಾವೀರಾಂಜನ

ಯಾಸಡಿ–ಆಶಾಡಮಾಸ

ಯುಗ–ಕಾಲದ ಕೂಡುವಿಕೆ

ಯುಗ್ಮಂ, ಯುಗಂ, ಯುಗಳಂ–ಜೊತೆಯಾದದ್ದು

ಯುಯು–ಅಶ್ವಮೇಧ ಲಕ್ಷಣದ ಕುದುರೆ

ಯುರಿ–ಯುದ್ಧ

ಯುವತಿ–ಪ್ರಾಯಸ್ಥಳು

ಯೂದಂ–ಎಲ್ಲಾ ಜಂತುಗಳಿಗೂ

ಯೆಂಟಡಿವರಿಜಾ–ವೀರಭದ್ರಾ

ಯೆಕ್ಕತುಳ–ಬಹಳಭರ–ಭಾರ

ಯೆಗ–ಹೆಡ್ಡ

ಯೆಡರ್ಗಡಿ, ಯೆಲರುಣಿವೆಸೆಯ–ವಿನಾಯಕ

ಯೆಣೆವಕ್ಕಿ–ಚಕ್ರವಾಕ

ಯೆತ್ತಾ–ಯಾವಕಡೆ, ಹ್ಯಾಗೆ

ಯೆನತು–ಯೆಂಮದು

ಯೆರಕಾ–ಪ್ರೀತಿ

ಯೆರಕೆ–ರೆಕ್ಕೆ

ಯೆರಗ್ದು–ನಮಸ್ಕಾರ

ಯೆರೆ–ಮಾಂಸದತುಂಡು

ಯೆರ್ಗಳು–ಪೆಟ್ಟುಗಳು

ಯೆಲರಣೆವೆದೆಯ, ಯೇಣ್ಮಯ್ಯವಂ, ಯೆಳೆದೇರ–ಶಿವನು

ಯೆಲರಿಚಂ–ಬ್ರಹ್ಮ

ಯೆಲರು, ಯೆರಲು–ವಾಯು

ಯೆಲರುಣಿವಕ್ಕೆಗಂ, ಇಂಗಡಲಳಿಯ–ವಿಷ್ಣು

ಯೆಲರುಣಿವಗೆಯ–ಗರುಡ

ಯೆಲರ್ಗೆಳೆಯ–ಅಗ್ನಿ

ಯೇಕದಂತಾ–ವಿನಾಯಕ

ಯೇಕಾಯನಃ–ಏಕಾಗ್ರಚಿತ್ತನು

ಯೈಕರು–ಬರೂದು

ಯೊಷಿತ್, ಯೋಷಿತಾ–ಸ್ತ್ರೀಯರು

ಯೋಧಃ–ಯುದ್ಧಮಾಡುವವರು

–ರ–

ರಂಗವರಲು–ಪದ್ಮರಾಗರತ್ನ

ರಂಜನ–ರಕ್ತಚಂದನ

ರಂಜಿತೆ–ಅಲಂಕ್ರುತಿ ವಸ್ತ್ರ

ರಂಹಃ, ರಯಃ–ತ್ವರಿತ

ರಕ್ತ–ನೆತ್ತರು

ರಕ್ತಪಃ–ಜಿಗಿಣಿ

ರಕ್ತಸರೋರುಹಂ, ರಕ್ತೋತ್ಪಲ–ಕೆಂಪು ಕಮಲ

ರಕ್ಷಃ–ಅರಗು

ರಕ್ಷಣಃ–ಪಾಲಿಸುವದು

ರಕ್ಷಣೆ–ಕಾಪಾಡುವಿಕೆ

ರಕ್ಷಿತ–ಬರೆಯಲ್ಪಟ್ಟದ್ದು, ಕಾಯಲ್ಪಟ್ಟ

ರಜಃ–ಪ್ರಕೃತಿಗುಣ, ಧೂಳಿ

ರಜನಿ–ರಾತ್ರಿ

ರಜ್ಜು–ಬಳ್ಳಿ

ರಣಃ–ಮೊರೆಯುವಿಕೆ

ರಣಕಃ–ಮರಿಗಳು

ರತ–ರತಿಕ್ರೀಡೆ

ರತ್ನಸಾನು–ಮೇರುಪರ್ವತ

ರತ್ನಾಕರ–ಸಮುದ್ರ

ರಥನು–ರಥದವನು

ರದನ–ಹಲ್ಲು

ರದನಚ್ಛದಃ–ತುಟಿ

ರಪಣ–ವೊಡ್ಡ

ರಮಣೂ–ಕಾಂತಸ ರಮಿಸ್ವಾಗೆ ಮಾಡುವವಳು, ಹೆಂಗಸು

ರಲ್ಲಕಃ–ಕಂಬಳಿ

ರವಃ, ರಾವಃ–ಧ್ವನಿ

ರವಣ–ಕೂಗುವಸ್ವಭಾವುಳ್ಳ

ರಷನಾಂ ರಸನಾ–ಹೆಂಗಳ ಸೊಂಟದಾಭರಣ

ರಸಃ–ಪಾದರಸ, ಜಲ

ರಸಜ್ಞಾ, ರಸನಾ–ನಾಲಿಗೆ

ರಸಾ–ಭೂಮಿ

ರಸಾಯನ–ಬಹುಒಳ್ಳೆ ರಸ

ರಸಾಲ–ಮಾವು, ಮಜ್ಜಿಗೆ

ರಸಿತಂ–ಘರ್ಜನೆ

ರಹ–ಕೋಲಾಹಲ

ರಹತಿ–ಆಶ್ಚರ್ಯ

ರಹಿ–ಆತುರ

ರಹಿ-ಈ ಪ್ರಕಾರ
ರಹಿಣಿ-ರೋಷಕಾರರು
ರಾಂಕವ-ರಂಕು ಮೃಗ ಸಂಬಂಧ
ರಾಂಬಃ-ವ್ರತದಿಂಹಿಡಿವ ಕೋಲು
ರಾಕುನಿಕಃ-ಹಕ್ಕಿಬೇಟೆಗಾರ
ರಾಗ-ಪ್ರೀತಿ
ರಾಗ-ಬಣ್ಣ
ರಾಜನ್ಯ-ರಾಜನವಂಶದವರು
ರಾಜಿಲ-ಎರಡು ತಲೆಉಳ್ಳ ಹಾವು
ರಾಜಸ್ಥಾನ್-ಒಳ್ಳೆ ರಾಜನುಳ್ಳ ದೇಶ
ರಾಜೀವ-ತಾವರೆಹೂವು
ರಾಜೀವಃ-ರಾಜಮೀನು
ರಾಟಾ-ನೀರಯಂತ್ರ
ರಾಣುವೆ-ಸೇನೆ
ರಾತ್ರಿ-ಶಾಂತಿಸಮಯ, ಇರುಳು
ರಾದಾಂತ, ರೋಹಿತಂ-ಕೆಂಪುಬಣ್ಣ
ರಾವಸಾ-ಗೀತಾದಿ ಕಲಿತು ಪ್ರೌಢೆಯಾದಳು
ರಾಷ್ಟ್ರಿಯಃ-ರಾಷ್ಟ್ರದಲ್ಲಿ ಹುಟ್ಟಿ ವಾಮ ಮಾಡುವವನು
ರಾಸಭಃ-ಕತ್ತೆ
ರಾಳಃ-ಸರ್ವರಸಾ
ರಿಂಗಣಂ, ರಿಂಕಣಾಂ-ಹಾರಿ ಹೋಗುವುದಕ್ಕೂ, ಜಾರುವುದಕ್ಕು
ರಿಕ್ಥ-ಧನ
ರಿಣಂ-ಜರಿದುಹೋದದ್ದು
ರೀಟ-ಹಿತ್ತಾಳಿ
ರುಕ್, ರುಚಾ-ರೋಗ
ರುಕ್, ರುಚಿಃ-ಸೂರ್ಯಕಾಂತಿ
ರುಕುಮ-ಚಿನ್ನ
ರುಕ್ಷ-ಕರಡಿ
ರುಗ್ಣ-ಮುರಿದುಹೋದದ್ದು
ರುಚಕ-ಮಾಪಳಿಗಿಡ, ದಂತ
ರುಚಕಃ-ಶ್ರೇಷ್ಠವಾದ ಬಾಗಿಲು
ರುಚಿರ-ಮುತ್ತು. ಸುಂದರವಾದ
ರುಚುಕಃ, ರುಬುಕಃ-ಹರಳುಗಿಡ
ರುತ-ಸ್ವರ
ರುತಂ-ಮೃಗಧ್ವನಿ
ರುದಿರಃ-ರಕ್ತ, ಕೆಂಪುಬಣ್ಣ
ರುರು-ಉಡು, ಜಿಂಕೆ
ರುಷತಿ-ಅಶುಭವಾಕ್ಯ
ರೂಜಿಷ್ಣ-ಭೂಷಣದಲ್ಲಿ ಪ್ರಕಾಶಿಸುವವ
ರೂಟ-ನಡೆಯುವ ಕ್ರಮ
ರೂಢಿಸಿದಾ-ಪ್ರಸಿದ್ಧರಾದ
ರೂದಾ-ವೈಶಾಖ ಮಾಸ, ನಕ್ಷತ್ರ
ರೂಬೆ-ಹುಳುಕು
ರೇಕಾ, ರಾಜಿ-ಎಡೆಬಿಡದಿರುವ ಪಂಕ್ತಿ
ರೇಕೆ-ಒದಗಿಸು. ಆಯುವದು
ರೇಖೆ, ಲೇಖೆ-ಗೆರೆ
ರೇಚಕಿ-ಅಣಿಲೆಗಿಡ
ರೇಪ-ಜಾತ್ಯಾಚಾರವಿಲ್ಲದ್ದು
ರೇವತಿರಮಣ, ರೋಪಾಣೇಯು-ಬಲರಾಮ
ರೇವಾ-ನರ್ಮದಾನದಿ
ರೋಕ-ರಂಧ್ರ

ರೋಧಃ-ನೀರತಡಿ

ರೋಪ-ಬಾಣ

ರೋಮಟಂ-ಹಿಂಗು

ರೋಮಹರ್ಷಣಂ, ರೋಮಾಂಚ-ರೋಮಕೂಪಕಚ್ಚು ಕೊಳ್ಳುವಿಕೆ

ರೋಹಿಣಿ-ದನಗಳು

ರೋಹಿಣೇಯ-ಬುಧ

ರೋಹಿತಂ-ಆಕಾಶಬಿಲ್ಲು

ರೋಹಿತಃ-ಕೆಂಪುಮೀನು

ರೋಹಿತಾಶ್ವ-ಅಗ್ನಿ

-ಲ-

ಲಂಬನ-ಜೋಲುವ ಸರ

ಲಂಬೋಧರ-ವಿನಾಯಕ

ಲಕುಚವಿಕುಚ-ಗಜನಂಬೆ

ಲಕ್ಷ-ಗುರಿಯಗುರ್ತು

ಲಕ್ಷ್ಮೀವಾನ್, ಲಕ್ಮಣ-ಸಂಪತ್ತುಳ್ಳವ

ಲಗ್ನಕಃ-ಜಾಮಿನಿದಾರ

ಲಘುತ್ವರಿತ-ಶೀಘ್ರ

ಲಘು-ಹಗುರ

ಲಟಕಟಿಸಿ-ಗಜಬಿಜಗೊಂಡು

ಲಟಕುತಟಿ-ಬಳಲಿಕೆ

ಲತೆ-ಬಳ್ಳಿ

ಲನಿಟಲಾ-ಬಹಳ

ಲಪಿತಂ-ಮಾತು

ಲಬ್ಧವರ್ಣಃ-ಯಜ್ಞಮಾಡಿದೆಜಮಾನ-ವಿದ್ಯಾವಂತ

ಲಬ್ಧಂ-ಹೊಂದಲ್ಪಟ್ಟದ್ದು

ಲಮಿತ್ರಂ-ಕೈಬಾಜಿ ಕೊಡಲಿ

ಲಲಂತಿತಾ-ಕೊರಳಲ್ಲಿ ನೇಲುವಸರ

ಲಲಾಮಕಂ-ಮುಖದ ಮೇಲಿರುವ ಹೂಸರ

ಲಲಿತಾ-ಚಂದಾ

ಲವಾ-ಹನಿ

ಲವಿತ್ರ-ಕತ್ತಿ, ಕುಡಗೋಲು

ಲಸ್ತಕ-ಬಿಲ್ಲಿನ ಮಧ್ಯ ಹಿಡಿವಸ್ಥಳ

ಲಳಿ-ನೀರು

ಲಾಂಗಲಿನ್-ತೆಂಗಿನಮರ

ಲಾಂಗೂಲ-ಬಾಲ, ನೇಗಿಲು

ಲಾಕ್ಷಾ-ಅರಗು

ಲಾಜಾಃ-ಅರಳು ಅಕ್ಕಿಮೊದಲಾದ್ದು

ಲಾಭ-ಪಡಕೊಳ್ಳುವಂತಾದ್ದು

ಲಾಲಸಾ-ಬಹಳಾಶೆ

ಲಾಲಾ-ಜೂಲ್ಲು ಬಾಯಿ

ಲಾವಕರು-ಸ್ವಕಾರ್ಯಾ ಚಿಂತಕರು, ಕತ್ತರಿಸುವವನು

ಲಾವಣಿಗೆ-ಸಮೂಹ

ಲಾಸ್ಯ-ಕುಣಿಯವದು

ಲಿಂಗವೃತ್ತಿ-ವೇಶಮಾಡಿಬದುಕುವವ

ಲಿಂಪು-ಲೇಪನ ಮಾಡುವ

ಲಿಪಿಕಾರ-ಕ್ಲಾರ್ಕ್, ಗುಮಾಸ್ತ

ಲಿಪ್ತಂ, ಲೀಢ-ಉಣ್ಣಲ್ಪಟ್ಟಿದ್ದು

ಲಿಪ್ತ-ಆಚಾರವಿಲ್ಲದವ

ಲಿಪ್ತಃ-ವಿಷಬಾಣ

ಲುಟಿತಾ-ಮೇಲಕ್ಕೆ ಬೀಳುವಕುದುರೆ

ಲುಲಾಯ-ಕಾಡುಕೋಣ

ಲುಳಿ-ಚಿಲುಮೆ
ಲೂನಂ-ಕ್ರ್ಯೊಯ್ಯಲ್ಪಟ್ಟದ್ದು
ಲೂಷ್ಠ-ಬೆಟ್ಟ
ಲೂಹಿತಕಃ-ಕೆಂಪುಕಿಟಿ
ಲೆಡು-ಲೇಸು
ಲೇಖರ್ಶಬಾ-ದೇವೇಂದ್ರ
ಲೇಷಃ, ಲವಃ-ಕೊಂಚ, ಸ್ವಲ್ಪ
ಲೋಕ-ಜಗತ್
ಲೋಕಾ ಲೋಕಾ-ಭೂಮಿಗೆಸುತ್ತಿ ಕೊಂಡಿರುವ ಬೆಟ್ಟ
ಲೋಕಾಮಾತಾ-ಲಕ್ಷ್ಮೀದೇವಿ
ಲೋಡು-ಒಟ್ಟುಕೂಡಿಸಿ
ಲೋಪ್ತ್ರ-ಕಳ್ಳತನದೊಡವೆ
ಲೋಲ-ಚಂಚಲವಾದದ್ದು
ಲೋಲುಪ, ಲೋಲುಭಾ-ಅಶೆಉಳ್ಳವ
ಲೋಹ-ಕಬ್ಬಿಣವಗೈರೆ
ಲೋಹಲ-ವ್ಯಕ್ತವಾಗದ ತೂದಲು ಮಾತು ಮಾತಾಡುವವ
ಲೋಹಾಬಿಸಾರ-ಅಸ್ತ್ರಧರಿಸಿದ ರಾಜಗೆ ಆರತಿಮಾಡವದು
ಲೋಹಿತ-ಕುಂಕುಮ ಕೇಸರಿ
ಲೋಹಿತಾ-ರಕ್ತ
ಲೋಹಿತಾಂಗ-ಅಂಗಾರಕ
ಲೌಹಿಕ-ಲೋಹ ಸಂಬಂಧವಾದ

-ವ-

ವಂಚಕಾ-ನರಿ
ವನ್ಯಾ-ವನಸಮೂಹ
ವಕ್ತ್ರಂ-ಸುಟಿಯಾಗಿರುವದು
ವಕ್ತ್ರ-ವದನ
ವಕ್ರಾಣಿ-ಹರಿವಹೊಳೆ ಕುಟಿಲಗತಿ
ವಗ್ರಹಾ-ಅನಾವೃಷ್ಟಿ
ವಚನ-ನುಡಿ
ವಜ್ರ-ನಿರ್ಘೋಶ-ಸಿಡಿಲಧ್ವನಿ
ವಡಗು-ಮಾಂಸ
ವಡ್ರಿ-ವರತ್ನ-ತೂಗಲಿಹಗ್ಗ
ವಣಿಜಃ-ವ್ಯಾಪಾರಿ
ವಣಿಜಿ-ಹಡಗಿನ ವ್ಯಾಪಾರಿ
ವತ್ಮ, ವತ್ಮನಿ-ದಾರಿ
ವತ್ಸ, ವಕ್ಷ-ಯೆದೆ
ವತ್ಸನಾಭ-ವಿಷ
ವತ್ಸರ-ಸಂವತ್ಸರ
ವತ್ಸಾ-ಸ್ನೇಹಉಳ್ಳವ
ವದಾ, ವಕ್ತಾ-ಮಾತುಕತೆ
ವದುತ್ಯಾ-ಸಂಣನರ
ವನಪ್ರಿಯ-ಕೋಗಿಲೆ
ವನಮಕ್ಷಿಕಾ-ಕಾಡುನೊಣ
ವನಸ್ಪತಿ-ಹಲಸು, ಮಾವಿನಗಿಡ
ವನಾಂತರ-ನೀರಮದ್ಯಸ್ಥಳ, ಕಾಡು
ವನಿತೆ-ಸ್ತ್ರೀ
ವನೀಯಕಃ-ಬೇಡುವವನು
ವಪುಃ-ಶರೀರ
ವಮಥುಃ-ಆನೆಸೊಂಡಿಲಿನಿಂದ ಬಂದ ನೀರಹನಿ
ವಮೀ, ವಮಿತ-ವಾಂತಿ

ವಯಸ್ಯ–ಸ್ನೇಹಿತಳು
ವರಃ–ವರಿಸುವಿಕೆ
ವರಟೆ–ಹೆಣ್ಣುಅಂಚೆ ಪಕ್ಷಿ
ವರಣ–ಕೋಟೆ
ವರದ–ವರಗಳ ಕೊಡುವವ
ವರರೋಹ, ವರವರ್ಣಿನೀ–ಉತ್ತಮಸ್ತ್ರೀ
ವರವರ್ಣಿ–ಅರಿಶಿನ
ವರಾಶಿ–ದಪ್ಪಉಳ್ಳ ಕಾದಿಹಚಡ
ವರಿಪ್ಲವಂ–ಕದಲಾಡುತಿರವದು
ವರಿವಸಿತ–ಸೇವಿಸಲ್ಪಟ್ಟದ್ದು
ವರಿವಸ್ಯ–ಉಪಾಸನಂ
ವರಿಷ್ಠಂ–ತಾಮ್ರ
ವರಿಸ್ತ್ರಿ–ಹೆಂಡ
ವರುಷ–ಮಳೆ, ಸಂವತ್ಸರ
ವರ್ಗ–ಕುಲ
ವರ್ಚಸ್ಕ–ಅಮೇಧ್ಯಾ , ಮಲ
ವರ್ಣಿ–ಬ್ರಹ್ಮಚಾರಿ, ಸುವರ್ಣ
ವರ್ಣಿತ–ಹೊಗಳಲ್ಪಟ್ಟದ್ದು
ವರ್ತಿಷು, ವರ್ತನಃ–ಕಾಲಾದಿಗಳಿಗೂ ವರ್ತಿಸುವವನು
ವರ್ತುಲಂ–ಉರುಟಾದದ್ದು
ವರ್ದಿಷ್ಣಃ, ವರ್ದನ–ವೃದ್ಧಿ ಹೊರುವ ಸ್ವಭಾವಉಳ್ಳವ
ವರ್ಧನ–ಕಡಿವಿಕೆ
ವರ್ಷಾಭೂ–ಕಪ್ಪೆ
ವರ್ಶೀಯಾಸ್–ಮುದುಕ
ವರ್ಷಂ–ಮಳೆ
ವರ್ಷದರಟಾ–ಸ್ತ್ರೀಸ್ವಭಾವಉಳ್ಳವ
ವಲಜಾ–ಚೆನ್ನಾಗಿ ನೋಡವವಳು
ವಲಯ–ಹಸ್ತಾಭರಣ
ವಲಯಿತಂ–ಸುತ್ತಿಕೊಳ್ಳಲ್ಪಟ್ಟದ್ದು
ವಲವರ–ಲೋಲು
ವಲವು–ಪ್ರಸನ್ನತೆ
ವಲಿಷು–ಪ್ರಕಾಶ
ವಲೀಮುಖ–ವಾನರ
ವಲೀಕ–ಮನೆಯಹೊದಿಕೆ
ವಲೀನ, ವಲೀಭಃ–ಹೊಟ್ಟೆಯಲ್ಲಿ ತ್ರಿವಳಿರೇಖೆಉಳ್ಳವಳು
ವಲ್ಕ–ನಾರಸೀರೆ, ಕಾವಿಶ್ಯಾಟು
ವಲ್ಮಿಕಂ–ಹುತ್ತ
ವಲ್ಲಕೀ–ವೀಣೆ
ವಲ್ಲಭ–ಮನಸ್ಸಿಗಿಷ್ಟವಾದ್ದು, ಗಂಡ
ವಲ್ಲರಿ–ಹೂ–ಗೊಂಚಲು
ವಲ್ಲೂರ–ವಣಮಾಂಸ
ವಷಃ–ಮನಸ್ಸಿನಲ್ಲಿ ನೆನಹುಂಟಾಗುವಿಕೆ
ವಷಟ್ಕೃತಂ–ಹೋಮಮಾಡುವ ಹವಿಸ್ಸು
ವಷ್ಕರಶ್ರವ–ವನಮಾಲಿ, ವಿಷ್ಣು
ವಷ್ಕಾರಕ–ಹಗ್ಗ
ವೃಸಿಕ–ಕಪಟ
ವಸಿರಂ–ಉಪ್ಪು
ವಸು–ದ್ರವ್ಯ
ವಸುದೇವ–ಶ್ರೀ ಕೃಷ್ಣನ ತಂದೆ
ವಸುಧಾ, ವಸುಂಧರಾ–ಭೂಮಿ
ವಸುಮತಿ–ಭೂಮಿ
ವಸ್ತಿ–ಕಿರುಹೊಟ್ಟೆ, ಮೂತ್ರಾಶಯ

ವಸ್ಯ-ಮನೆ
ವಹಃ-ಎತ್ತಿನಹೆಗಲು
ವಾಕ್-ವಾಣಿ, ಸರಸ್ವತಿ
ವಾಗೀಶಃ, ವಾಕ್ಪತಿ-ನಿರ್ದೂರವಾಕು ಉಳ್ಳವ
ವಾಗುರ-ಬಲೆ
ವಾಗುರಿಕಃ-ಬಲೆಗಾರ, ವ್ಯಾಧ
ವಾಘೆ-ಲಗಾಮು
ವಾಚಾಲಃ ವಾಚಾಟುಃ-ದೋಷ ಕೂಡಿ ಬಹು ಆಡವವು
ವಾಚಿಕ-ಹೇಳಿ ಕಳುಹಿಸುವದು
ವಾಜಿನ್-ಬಾಣಅಶ್ವ
ವಾಜಿಶಾಲ-ಕುದ್ರೆಲಾಯ
ವಾಣಿ-ನೈಯುವುದು
ವಾತಪ್ರಮೀ, ವಾತಮ್ರುಗ-ಹುಲ್ಲೆಯೆಂಬ ವಾಯುಮೃಗ
ವಾತಾ-ವಾಯು
ವಾತಾಯನಂ-ಗಾಳಿಬರುವ ಕಿಟಕಿ
ವಾತಾಯು-ಜಿಂಕೆ
ವಾತ್ಸಕ-ಎಳೆಗರುಗಳು
ವಾನಸ್ಪತ್ಯ-ಫಲ ಕೂಡುವಂಥಾ ವೃಕ್ಷ
ವಾಪಿ-ದೊಡ್ಡಬಾವಿ
ವಾಮದೇವಾ-ಶಿವಾ
ವಾಮನ-ಕುಳ್ಳ-ಗಿಡ್ಡ
ವಾಮಲೂರು-ಹುತ್ತ
ವಾಮಲೋಚನಾ-ಒಳ್ಳೆ ಕಣ್ಣುಳ್ಳವಳು
ವಾಮಾ-ಸ್ತ್ರೀಯರು
ವಾಮಿ-ಹೆಣ್ಣು ಕುದುರೆ
ವಾಯವು-ಪುಸಿ
ವಾಯವ್ಯ-ವಾಯುಯೆಂಬ ದಿಕ್ಪಾಲಕನ ಕುರಿತದಿಕ್ಕು
ವಾಯಸಾರಾತಿ-ಗೂಬೆ
ವಾರಸ್ತ್ರೀ-ವೇಶ್ಯಸ್ತ್ರೀ
ವಾರಿ-ಆನೆ ಕಟ್ಟುವದು ಸರಪಣಿ
ವಾರಿಧರ, ವಾರಿದಃ-ಮೇಘ
ವಾರಿಧರವಾಹನ, ವಾಸವರಿ, ವಾಸೂಷ್ಪತಿ -ದೇವೇಂದ್ರ
ವಾರುಣಿ-ಹೆಂಡ, ಪಡುವಕಡೆ
ವಾಲ-ತಲೆಕೂದಲು
ವಾಲಿಪಶ್ಯಾ-ಹೆಂಗಳ ಜಡೆ ಬಿಲ್ಲೆ
ವಾಶಿತ-ಪಕ್ಷಿಗಳ ಧ್ವನಿ
ವಾಸಂತೀ-ಎರವಂತಿ ಮೊದಲಾದ್ದು
ವಾಸಃ-ಉಡುವಸೀರೆಮೊದಲಾದದ್ದು
ವಾಸಗ್ರಹ-ಮಲಗುವಮನೆ
ವಾಸಯೋಗ-ಬುಕಿಟ್ಟು, ಸುಗಂಧ ಚೂರ್ಣ
ವಾಸರ-ಹಗಲು
ವಾಸಿ-ಉಳುಕೊಂಡಿರುವದು
ವಾಸಿ-ಬಾಚಿ
ವಾಸಿಗನು-ಬಾಚಿ
ವಾಹ-ಕುದುರೆ
ವಾಹದ್ವಿಷತ್-ಕಾಡ್ಕೋಣ
ವಾಹಸ-ಹೆಬ್ಬಾವು
ವಿಂನಂ-ಹೊಂದಲ್ಪಟ್ಟದ್ದು
ವಿಂನಃ, ವಿತ್ತಃ, ವಿಚಾರಿತಃ-ವಿಚಾರಿಸಲ್ಪಟ್ಟದ್ದು

ವಿಕಚಾ–ಹೂವಾದಂಥಾದ್ದು
ವಿಕರ್ಷಣಾ–ಎಳೆಯುವಿಕೆ
ವಿಕಳಾ–ಲೇಸಲ್ಲದಾ
ವಿಕಾಸ–ಅರಳುವದು, ಉಬ್ಬುವದು
ವಿಕಾಸಿ, ವಿಕಸ್ವರ–ಅರಳುವಂಥಾದ್ದು
ವಿಕುರ್ವಾಣ–ಸಂತೋಷಮನಸ್ಸುಳ್ಳವ
ವಿಕ್ರುತಿಃ, ವಿಕ್ರೆಯಃ–ಪ್ರಕೃತಿ ವಿಕಾರ
ವಿಕ್ರುಷ್ಟಕ–ದೂರದಾದದ್ದು
ವಿಕ್ಲಭ, ವಿಂಹಲ–ಭಯದಿಂ ತನ್ನವಯ ವಧರಿಸಲು ಶಕ್ತಿಯಿಲ್ಲದವ
ವಿಕ್ಷಾವಃ–ನುಂಗುವಿಕೆ, ಶಬ್ದ
ಗಾಢ–ಭಯಂಕರಾ, ಬಹಳವಾದ
ವಿಗ್ರಹಃ, ವಿಖ್ಯ–ಮೂಗಿಲ್ಲದವ
ವಿಘುಸಾ–ದೇವಬ್ರಹ್ಮರಿಗಾಗಿ, ಉಳಿದ
ವಿಘ್ನರಾಜ–ವಿನಾಯಕ
ವಿಚಿಕಿತ್ಸಾತ್–ಸಂದೇಹ
ವಿಜ್ಞ–ಉಪಾಯಕಾರ, ಪಂಡಿತ
ವಿಜ್ಞಾತಃ, ವಿತ್ತಃ, ವಿಶ್ರುತಃ–ಧನಾದಿ ಗಳಿಂದ ಪ್ರಸಿದ್ಧನಾದವ
ವಿಜ್ಞಾನ–ಶಿಲ್ಪಿಗೂ, ಶಾಸ್ತ್ರಕ್ಕೂ
ವಿಜ್ಞಾಪಿಸಲು–ಭಿನ್ನವಿಸಲು
ವಿಜೃಂಭಿಸಿತು–ಹೊಳಕಿತು
ವಿಟಪೀ–ಫಲಾಶಮರ
ವಿಡಾಯ–ರೂಪು
ವಿಡಾಯಿ–ಗುಂಪು
ವಿಡಿಃ–ಕಳಂಕ
ವಿತಂಸ–ಹಕ್ಕಿಹಿಡಿವ ಉರುಳು
ವಿತರ್ದಿ–ಜಗುಲಿ
ವಿತಾನ–ಮೇಲ್ಕಟ್ಟುವ ವಸ್ತ್ರ
ವಿತ್ತಿ–ತಿಳುವಳಿಕೆ
ವಿದಾ–ಬುದ್ಧಿ
ವಿದಾರಕಃ–ನೀರೂರಿ ಬರುವಹಳ್ಳ, ಚಿಲುಮೆ
ವಿದಾರಿಸು–ತಿಳಿಬಿಡು
ವಿದುಂತುದಃ–ರಾಹು
ವಿದುತ–ಬಿಡಲ್ಪಟ್ಟದ್ದು
ವಿದುರಂ ವಿಯೋಗ–ಜೊತೆಬಿಡಿಸುವಿಕೆ
ವಿದುರಃ, ವಿದುಃ–ತಿಳಿವಸ್ವಭಾವಉಳ್ಳವ
ವಿದೂತರಿಪು–ಶಸ್ತ್ರರಹಿತವಾದ
ವಿದ್ಧ–ನೂಕಲ್ಪಟ್ಟದ್ದು
ವಿದ್ಯುತ್–ಮಿಂಚು
ವಿದ್ರ–ಕಲ್ಮಶವಿಲ್ಲದ ಸ್ಫಟಿಕ ಮೊದಲಾದ್ದು, ರಂಧ್ರ
ವಿದ್ವಾನ್, ವಿಪಶ್ಚಿತ್, ವಿಚಕ್ಷಣ–ವಿದ್ವಾಂಸ
ವಿದ್ವೇಷಃ–ವಿರೋಧ, ವೈರ
ವಿಧಿಃ–ಶುಭಾಶುಭ ಕರ್ಮ
ವಿಧೇಯ, ವಿನಯಗ್ರಹಿ–ನಯಉಳ್ಳವ
ವಿನಯ–ಬುದ್ಧಿಯಶಿಕ್ಷೆಪಟ್ಟಮನಸ್ಸು
ವಿನಯ–ಮಾರ್ರ್ಯಾದೆಭಾವ
ವಿನಾಶಃ–ಗೋಚರವಾಗದಿರುವಿಕೆ
ವಿನಾಶೂನ್ಮುಖಿಂ–ನಾಶಕ್ಕೆ ಆಯ್ತಪಟ್ಟದ್ದು
ವಿನೀತಃ–ಶಿಕ್ಷಿಸಲ್ಪಟ್ಟವ
ವಿನೋದ–ಸಂತೋಷ, ಲೀಲೆ
ವಿಪಣಿ–ಮಾರಾಟಕೇರಿ
ವಿಪತ್ತು–ಕೆಡುವಿಕೆ, ಕೇಡು

ವಿಪತ್ತು, ವಿಪತ್ತಿಃ-ಆಪತ್ತು, ಬಡತನ
ವಿಪಥಾಃ-ಕೆಟ್ಟದಾರಿ
ವಿಪರ್ಯಾಸ-ಕ್ರಮತಪ್ಪುವಿಕೆ
ವಿಪಾಳ-ಉಪದ್ರ
ವಿಪ್ರಕಾರ-ಅಪನಿಂದೆ-ಅಪಕಾರ ಮಾಡುವಿಕೆ
ವಿಪ್ರಕ್ರುತ-ಪೀಡಿಸಲ್ಪಟ್ಟವನು
ವಿಪ್ರತಿಸಾರ-ವ್ಯಸನ
ವಿಪ್ರಲಂಭಾ, ವಿಪ್ರಯೋಗ-ಸ್ತ್ರೀ ಪುರುಷರು ಮಾಡುವಶೋಕ, ವಂಚನೆ
ವಿಪ್ರಲಬ್ಧ-ವಂಚಿಸಿಕೊಂಡವ
ವಿಪ್ರಲಾಪ, ವಿರೋಕ್ತಿ-ಅರ್ಥವಿಲ್ಲದ ಮಾತು
ವಿಪ್ರುಷಃ-ನೀರತುಂತುರಿ
ವಿಪ್ಲವ-ಲೂಟಿ ಮಾಡುವುದು
ವಿಬಂಧಃ-ಹೊಟ್ಟೆಉಬ್ಬರ
ವಿಭವಾ-ಐಶ್ವರ್ಯ, ಶೋಭೆ
ವಿಭಾಕರ, ವಿರೋಚನಃ, ವಿಭಾವಸು-ಸೂರ್ಯ
ವಿಭಾಜ್ಯ-ಪಾಲುಮಾಡತಕ್ಕದ್ದು
ವಿಭಾವರೀ-ರಾತ್ರಿ
ವಿಭಾವಸು-ಬೆಂಕಿ
ವಿಭಾವೆ-ಸುಲಕ್ಷಣ ಉಳ್ಳವಳು
ವಿಭೂತಿ-ಐಶ್ವರ್ಯ
ವಿಭ್ರಟಃ-ಭೂಷಣಾದಿಗಳಿಂದ ಪ್ರಸಿದ್ಧ ನಾದವ
ವಿಮರ್ದನ-ಅರೆಯುವುದು
ವಿಮನಾಃ-ದುಃಖದಿಂದ ಕೂಡಿದ ಮನಸ್ಸುಳ್ಳವ
ವಿಯದೀಗಂಗಾ-ಆಕಾಶಗಂಗೆ
ವಿಯರ್, ವಿಷ್ಣುಪದಂ, ವಿಹಾಯ-ಆಕಾಶ
ವಿಯಾತ-ಧಿಟತನುಳ್ಳವ, ಭಾಗ್ಯರಹಿತ
ವಿಯಾಮ-ಪರಪೀಡಾದಿಗಳಿಂದ ಸಾಕುಮಾಡುವಿಕೆ
ವಿರಕ್ತಿ-ವೈರಾಗ್ಯ
ವಿರತ-ವಿಶ್ರಾಂತಿ ಹೊಂದಿದ
ವಿರಾವ-ಧ್ವನಿ
ವಿರೂಪಾಕ್ಷ-ಶಿವ
ವಿರಿಂಚಿ, ವಿಧಾತ-ಬ್ರಹ್ಮ
ವಿಲಕ್ಷಃ ವಿಸ್ಮಯಾನ್ವಿತ-ಪ್ರಕೃತ ಜ್ಞಾನ ವಿಲ್ಲದವ
ವಿಲಕ್ಷಣಂ-ಕಾರ್ಯವಿಲ್ಲದ್ದೊಂದು ಕಡೆಯಿರುವದು
ವಿಲಾಪಃ-ದುಃಖ
ವಿಲೀನಃ, ವಿದ್ರುತಃ-ಗಟ್ಟಿಕರಗಿಸಲ್ಪಟ್ಟದ್ದು
ವಿವರ-ಚಂದವಾಗಿರಿಸುವಿಕೆ
ವಿವರಂ-ರಂಧ್ರ
ವಿವರ್ಣ-ನೀಚ, ಕಳೆಗುಂದಿದ
ವಿವಿಕ್ತ-ರಹಸ್ಯವಾದ
ವಿವಿಕ್ತಃ ವಿಜನಃ-ರಹಸ್ಯಸ್ಥಳ
ವಿಶಂಕಂಟ, ವಿಪುಲಂ-ವಿಶಾಲವಾದದ
ವಿಶದ-ಬೆಳ್ಪು
ವಿಶಬುದಃ-ಬೆಂಕಿ
ವಿಶಯ-ಗೊತ್ತಾಗಿರುವ ಸ್ಥಳ, ಸಂಶಂ

ವಿಶಸನಂ, ವಿಶರಃ-ಕೊಲ್ಲುವದು
ವಿಶಾಖ-ಕುಮಾರಸ್ವಾಮಿ
ವಿಶೇಷ-ತಕ್ಕವಾಗಿ ವಿಂಗಡಿಸಿದ್ದು, ವಿಶ್ರಾವ-ಅಧಿಕವಾದ ಪ್ರಸಿದ್ಧಿ
ವಿಶ್ವ, ವಿಶ್ವಬೇಶಜಂ-ವಣಶುಂಟಿ
ವಿಶ್ವಂಭರಾ-ವಸುಮತಿ, ಭೂಮಿ
ವಿಶ್ವಕ್, ವಿಶ್ವದ್ರೃಶ್-ಕಂಡಕಡೆ ಹೋಗುವವ
ವಿಶ್ವಕದ್ರು-ಬೇಟೆಕುಶಾಲುನಾಯಿ
ವಿಶ್ವಕೇತು-ಮನ್ಮಥ, ಅನಿರುದ್ಧ
ವಿಶ್ವಕ್ಸೇನ, ವಿದುಃ, ವಿಶ್ವಂಭರ-ವಿಷ್ಣು
ವಿಶ್ವಸ್ರುಟ, ವಿಧಿ-ಬ್ರಹ್ಮ
ವಿಷಧರಃ-ಸರ್ಪ
ವಿಷ್ಟ-ಅಮೇದ್ಯ, ಪ್ರವೇಶಿಸಿದ
ವಿಷ್ಟಾರ-ಧನುಟೇಂಕಾರ
ವಿಷ್ಣುರತಃ-ಗರುಡ
ವಿಷ್ವತಃ, ವಿಧವಃ-ಮುಂಡೆ
ವಿಸಟಂಬರಿದುದು-ಜಾತ್ಯಾಚಾರವು ಹಾರಿಹೋಗುವಿಕೆ
ವಿಸಾರಃ-ಮೀನು
ವಿಸ್ಕಿ-ಬಿಟ್ಟಿಗೆ ಹಿಡಿವದು
ವಿಸ್ತರಃ, ವಿವರಣಾ, ವಿಲೇಪನಂ-ಬಾಳುವಿಕೆ
ವಿಸ್ತರಣಾ-ವಿಸ್ತರಿಸಿದಾ
ವಿಸ್ತಾರ ವಿಗ್ರಹ-ಕಿರಿದನ್ನು ಹಿರಿದು ಮಾಡುವಿಕೆ
ವಿಸ್ರಂಭ-ವಿಶ್ವಾಸ
ವಿಸ್ರವಹ-ಮುಪ್ಪು
ವಿಸ್ತೃತಂ, ವಿಸ್ತೃತಂ-ವ್ಯಾಪಿಸಿರುವದು
ವಿಸ್ಮೃತ್ರಂ-ಮರೆಯಲ್ಪಟ್ಟದ್ದು
ವಿಹಂಗಮ, ವಿಹಾಯಸಃ, ವಿವಿಷ್ಕರಃ, ವಿಕಿರಃ-ನಾನಾ ಪಕ್ಷಿಗಳು
ವಿಹಸಿತ-ಬಹಳನಗೆ
ವಿಹಸ್ತ-ಶೋಕಾದಿಗಳಿಂದ ಮುಳಿಗಿದವ
ವಿಹಾಪಿತಂ, ವಿಹಾಯಿತಂ, ವಿಸರ್ಜನಂ, ವಿಶ್ರಾಣನಂ, ವಿತರಣಂ-ಇಷ್ಟೂ ಕೂಡುವುದಕ್ಕೆ, ದಾನ
ವಿಹಾರ-ಸಂಚಾರ
ವೀತಿ-ಕುದುರೆ
ವೀಥಿಃ-ಸಾಲು
ವೀಪಂಚಿ-ವೀಣೆ
ವೀರ-ಕಾಪಾಡುವವನು
ವೀರಃ-ವೀರರಸಃ
ವೀರ್ಯಂ-ಶಕ್ತಿಉಳ್ಳವ, ಉತ್ಸಾಹ
ವೃದೋಕ್ಷ-ಮುದಿಎತ್ತು
ವೃದ್ಧಿ-ಬೆಳವಣಿಗೆ
ವೃಶ್ಚಿಕ-ಚೇಳು
ವೃಷ್ಟಿ-ಮಳೆ
ವೆಪಮಾಃ-ಗಡಕದ ಹೆಸ್ರು
ವೆಶಂತಃ-ಸ್ವಲ್ಪ ನೀರುಳ್ಳ ಚಿಲುಮೆ
ವೇಟ್-ಮುಂಡಾಸು
ವೇದ-ತಿಳಿವಿಕೆ, ವಿದ್ಯೆ
ವೇಶ-ಭೃಂಗರಿಸುವುದು
ವೇಶ್ಮನ್-ಮನೆ
ವೈಜಯೆಂತಿಕಾ-ನಿಶಾಣಿಹಿಡಿವವ

ವೈತರಣೆ-ನರಕದಲ್ಲಿ ಹರಿವ ದುಃಖದ ಹೊಳೆ
ವೈದೇಹಕಾ-ವ್ಯಾಪಾರಿ
ವೈಸಾರಿಣ-ಮೀನುಗಳು
ವೈಹಾಳಿ-ಸಂಚಾರ
ವೊಗರು-ಕಿರಣೈಸಿಕ-ಕಪಟ.
ವೊಸದು-ಶ್ರಮಿಸಿ
ವ್ಯಂಜನ-ರೂಪ, ಸಂಜ್ಞೆ, ಗೊತ್ತು
ವ್ಯಗ್ರದಿ-ಆತುರದಿಂದಾ
ವ್ಯಜಿನ-ಬೀಸಣಿಗೆ
ವ್ಯಧ್ವ-ಕೆಟ್ಟದಾರಿ
ವ್ಯವಾಯ-ರತಿಕ್ರೀಡೆ
ವ್ಯಸ್ತ-ಕೆದರಿದ್ದು
ವ್ಯಾಕುಲ-ಭ್ರಮೆ
ವ್ಯಾಕೋಶ-ಅರಳಿರುವದು
ವ್ಯಾಘ್ರ-ಹುಲಿ
ವ್ಯಾಜ-ಕಪಟ
ವ್ಯಾಪಾದ-ಕೆಟ್ಟಇಚ್ಛೆ
ವ್ಯಾಪಾರ-ಚೆಂದಾಗಿ ಒಂದು ಕೆಲ್ಸ ನಡೆಸುವುದು
ವ್ಯಾಪಿಸುವದು-ಅಗಲವಾಗಿರುವದು
ವ್ಯಾಮೋಹ-ಹೆಚ್ಚು ಪ್ರೀತಿಪಡಿಸುವಿಕೆ
ವ್ಯಾಸಾ-ಕಿರಿದನ್ನು ಹಿರಿದು ಮಾಡುವಿಕೆ
ವ್ಯಾಳಗ್ರಾಹ-ಹಾವುಹಿಡಿವ ಹಾವಡಿಗೆ
ವ್ರಂತಂ-ಹಂಣೆಲೆತೊಟ್ಟು
ವ್ರಕಃ-ತೋಳಮೃಗ
ವ್ರಕ್ಕಣಂ-ಕ್ಯೊಯ್ಯಲ್ಪಟ್ಟದ್ದು
ವ್ರಜಿನಂ-ಸುಟಿಯಾಗಿರುವದು
ವ್ರಜಿನಃ-ಕೇಡುತನ ಕಷ್ಟ
ವ್ರಜ್ಯಾ-ಜಯಾರ್ಥವಾಗಿ ಪ್ರಯಾಣ
ವ್ರತ್ತಃ-ಅಂಗೀಕರ್ರಿಸಲ್ಪಟ್ಟವ
ವ್ರತ್ತಹಾ, ವ್ರಷಾ-ದೇವೇಂದ್ರ
ವ್ರಾತ್ಯ-ಪರಿಶುದ್ಧನಾದವ
ವ್ರೀಡಾ-ನಾಚಿಕೆ

-ಶ-

ಶಂಕು-ಗೂಢ
ಶಂಕು-ನೀರಹಂದಿ
ಶಂಢ-ಸ್ತ್ರೀ ಸ್ವಭಾವವುಳ್ಳವ
ಶಂಪಾ-ಮಿಂಚು
ಶಂಭರಾರಿ-ಮನ್ಮಥ
ಶಂಮ್ಯ-ನೊಗದಕಂಣುಮೊಳೆ
ಶವುಕ್ಲೀಕೇಯಃ-ವಿಷಭೇದ
ಶಶಂಬುಕ-ಕಪ್ಪೆಚಿಪ್ಪು
ಶಾಂತ-ಹದವಿಡಲ್ಪಟ್ಟದ್ದು
ಶಾಂತಃ-ಕ್ರೋಧವಿಲ್ಲದೆ ಮನಸ್ಸು ನಿಗ್ರಹಿಸಿರುವದು
ಶಾಂಬರಿ-ಇಂದ್ರಜಾಲಮೊದಲಾದ ಮಾಯೆ
ಶಿಂಗದೆರವಳು-ಪಾರ್ವತಿ
ಶಿಂಜಾ-ಆಭರಣಧ್ವನಿ
ಶಿಂಜನಿ-ಬಿಲ್ಲುಬಿಗಿವ ಚರ್ಮದ ಹಗ್ಗ
ಶಿಂಶುಪಾ, ಶಿಂಶುಕಾ-ಅಶೋಕವೃಕ್ಷ
ಶಿಂಹಾಣಂ-ಗಿಟ್ಟದ ಕಲ್ಲು
ಶಿಖಂಡಃ-ನವಿಲುಗರಿ
ಶಿಖಿಗ್ರೀವಂ-ಮೈಲುತುತ್ತು

ಶಿಖಿಶಿವ–ಸೈಂದುಪ್ಪು
ಶಿಖಾ–ನವಿಲುಜುಟ್ಟು
ಶಿಖಾವಾತ್–ಅಗ್ನಿ
ಶಿಖಿವಾಹನ–ಷಣ್ಮುಖ
ಶಿಘ್ರುಜಾ–ನುಗ್ಗೆ, ಬೀಜ
ಶಿಥಿಲಿಃ–ಬಿಚ್ಚಿಹೋಗುವಂಥಾದ್ದು
ಶಿಫಾ–ಗೆಡ್ಡೆ, ಮೂಲ
ಶಿಘುನಃ–ಅದ್ವೈತಜ್ಞಾನಿ
ಶಿಬಿಕಃ–ಅಂದಣ
ಶಿರಹಾ, ಶಿರ್ಶಂ–ತಲೆ
ಶಿರೋಧಿ–ಕೊರಳು
ಶಿರೋರುಹಾ, ಶಿಖಂಡಕಾ–ತಲೆ ಕೂದಲು
ಶೀಪ–ಬಾಗೆಮರ
ಶಿರ್ಷ–ಶಿರಸ್ಸು
ಶಿಳೀಮುಖಿ–ತುಂಬಿ, ಬಾಣ
ಶಿಲಾ–ಬಾಗಿಲುವಮುಂದೆ ಮೆಟ್ಟುವ ಹಾಲಿಗೆ
ಶಿವಕ–ದನಕರುಬಂಧಿಸುವ ಗುಂಟ
ಶಿವತಾತಿಃ, ಶಿವಂಕರಃ–ಶುಭಮಾಡುವವ
ಶಿವಾ–ನರಿ
ಶಿವಾ–ಪಾರ್ವತಿ
ಶಿಶ್ನ–ಪುರುಶೇಂದ್ರಿಯದ್ವಾರ
ಶಿಶ್ವಿದಾನಃ–ಒಳ್ಳೆಯ ಆಚಾರವುಳ್ಳವ
ಶೀತಕ–ಚಳಿಗಾಲ
ಶೀತಬಿರು–ಮಲ್ಲಿಗೆಗಿಡ
ಶುಂಡ–ಮದ್ಯಪಾನ ಮಾಡುವ ಮನೆ
ಶುಕ್ತಿ–ಮುತ್ತಿನಚಿಪ್ಪು
ಶುಕ್ಲ–ಶುಭ್ರ, ಶುಚಿ, ಶ್ವೇತ, ಬೆಳುಪ್ಪು
ಶುಚಿ–ಶೃಂಗಾರರಸ
ಶುದ್ಧಾಂತ–ರಾಣಿವಾಸಮನೆ
ಶುನಕ–ನಾಯಿ
ಶುಲಭ–ಪತಂಗಫಲ
ಶುಲ್ಬ–ತಾಮ್ರ
ಶುಷ್ಮ–ಶಕ್ತಿ
ಶುಷ್ಕಮಾಂಸಂ–ಒಣಗಿದ ಮಾಂಸ
ಶೂನಾಸೀರ–ದೇವೇಂದ್ರ
ಶೂರ–ಪರಾಕ್ರಮಿ
ಶೂರ್ಪಕಾರಾತಿ–ಕಾಮಚಕ್ರೇಶ್ವರ
ಶೂಲ–ಪರಮೇಶ್ವರ
ಶೂಷಃ–ಕ್ಷಯರೋಗ
ಶೈವಲಿನೀ–ನದಿ
ಶೈವಾಲ–ಹಾಮಾಜಿ
ಶೈಶವಂ–ಬಾಲ್ಯ
ಶೋಕ–ಕರಕರೆ, ದುಃಖ
ಶೋಚಿಷ್ಕೇಶಾ–ಅಗ್ನಿ
ಶೋಣ–ಕೆಂಪು ನೈದಿಲೆ ಬಣ್ಣ
ಶೋಣಾ–ಗಂಡುಹೊಳೆ
ಶೋಣಿ–ದೊಡ್ಡಗೋರಂಟೆ
ಶೋತ್ರ–ಕಿವಿ
ಶೋಭಾ–ಕಾಂತಿ?
ಶೌಂಡಃ–ಮದ್ಯಪಾನದಿಂದ ಮೈಮರೆತವ
ಶೌರಿ–ಹರಿ
ಶ್ಯಾಟ್ಯಂ–ಕಪಟ
ಶ್ಯಾಮಃ, ಶ್ಯಾಮಲಃ–ಕಪ್ಪು

ಶ್ಯಾವ-ಅರಶಿನಪಚ್ಚೆ
ಶ್ರೀ ಪುತ್ರ-ಮನ್ಮಥ
ಶ್ರೀ ವತ್ಸಲಾಂಛನ-ವಿಷ್ಣು
ಶ್ರೀಃ-ಲಕ್ಷ್ಮೀ
ಶ್ರೀಃ, ಶ್ರೀಮಾನು-ಶೀಲಸಂಪತ್ತುಳ್ಳವ
ಶ್ರೀಕಂಠ, ಶಿಶಿಕಂಠ-ಈಶ್ವರ
ಶ್ರೀಧಃ-ಕುಬೇರ
ಶ್ರುಂಖಲ-ಉಡೆದಾರ, ಆನೆಸರಪಣಿ
ಶ್ರುಂಗ-ಎಮ್ಮೆಕೋಡು
ಶ್ರುಂಗ-ಬೆಟ್ಟದತುದಿ
ಶ್ರುಂಗಬೇರು-ಹಸಿಶುಂಠಿ
ಶ್ರುಂಗಾಟಕ-ನಾಲ್ಕುದಾರಿಕೂಡಿದಸ್ಥಳ
ಶ್ರುಂಗಾರಯೋನಿ-ಮನ್ಮಥ
ಶ್ರುಂಗಿ-ಕನಕಾಭರಣ
ಶ್ರುಂಗಿ-ಹೆಣ್ಣು ಮೀನು
ಶ್ರುಂಗಿಣಿ-ಬಿಳಿಯಾದ ಸಾತ್ವಿಕ ಆಕಳು
ಶ್ರುತ-ಬೆಂಕಿಯಲ್ಲಿಟ್ಟು ಪೂಜಿಸುವುದು
ಶ್ರುತಿ-ವೇದ
ಶ್ರೇಯಃ-ಪುಣ್ಯ, ಮೋಕ್ಷ
ಶ್ರೇಯಸಿ-ಅಣಿಲೆಗಿಡ
ಶ್ರೋಣಿ-ನಿತಂಬ
ಶ್ರೋಣಿತ-ರಕ್ತ
ಶ್ರೋಣಿಫಲಕ-ಸೊಂಟ
ಶ್ಲೇಷ್ಮ-ಅಂಟುಳ್ಳದ್ದೊಂದು ವಸ್ತು
ಶ್ವಭ್ರ-ರಂಧ್ರ
ಶ್ವಶ್ರುಃ ಶ್ವಶುರ-ಗಂಡಹೆಂಡರ ತಾಯಿ ಗಳಿಗೆ
ಶ್ವೇತ-ಬಿಳುಪು
ಶ್ವೇತಗರುಡ-ಹಂಸಪಕ್ಷಿ

-ಸ-

ಸ-ಕೂಡಿ
ಸ-ತನ್ನ
ಸಂಕರಃ-ಗುಡಿಸಲ್ಪಟ್ಟ ಧೂಳು
ಸಂಕಲ್ಪ-ಮಾಡವದು
ಸಂಕೋಚ-ಉಡುಗುವಿಕೆ, ಕಿರಿದಾಗು ವುದು
ಸಂಕೋಚ-ಕುಂಕುಮಕೇಸರಿ
ಸಂಕ್ರಾಮಿಕಾ-ಸೊಂಕುವಂಥಾದ್ದು
ಸಂಖ್ಯಾತ-ದೊಡ್ಡಸಂಖ್ಯೆ
ಸಂಗಾ-ಪ್ರಾಣಿಗಳ ಸಮೂಹ, ಸಂಸರ್ಗ
ಸಂಗ್ರಹ-ಸಾರಾಂಶ, ಬೇಕಾದೆಲ್ಲಾ ಗೂಡಿಸುವದು
ಸಂಗ್ರಾಹ, ಸಂಗ್ರಹ-ಶೇಖರಿಸುವುದು
ಸಂಘ-ಸಮೂಹ
ಸಂಘಾತ-ಕೊಲ್ಲುವುದು, ಗುಂಪು
ಸಂಜೀವನಂ-ನಾಲ್ಕುಸೂತ್ರಮನೆ
ಸತತ-ಎಡೆಬಿಡದಕಾಲ
ಸಂತಮಸ-ಹೆಗ್ಗತಲೆ
ಸಂತಾನಂ-ಕಲ್ಪವೃಕ್ಷ
ಸಂತಾಪಃ, ಸಂಜ್ವರಃ-ಬಿಸಿ
ಸಂಘಟಸಿತು-ವಾದ್ಯನಾಮ
ಸಂದವಣಿ-ತಿಳಿದವರ ಮತದಿ ಸಂಧಾನ
ಸಂದುಕಟ್ಟು-ಗುಟಿತವಾದ ಉಪಾಯ
ಸಂದೇಶಗಾರ-ದೂತ

ಸಂದೇಹ–ಸಂಶಯ
ಸಂನಿವೇಶ–ಬೈಲು, ರಚನೆ
ಸಂಪತಿ, ಸಂಪತ್ತಿ–ಭಾಗ್ಯ
ಸಂಪರ್ತಿಕಾ–ಎಳೆರೇಕು
ಸಂಪುಲ್ಲ–ಅರಳಿರುವದು
ಸಂಪ್ರಧಾರಣ–ನ್ಯಾಯದಿಂದ ನಿರ್ಧರಿಸುವದು
ಸಂಬಳಿ–ತಲೆಹಿಡಿಕೆ
ಸಂಭವ–ಆಗುವಿಕೆ
ಸಮ–ತೂಗಲು
ಸಂಯಮಿ–ಋಷಿಗಳು
ಸಂವರ್ತಕ–ಪ್ರಳಯಕಾಲ
ಸಂವಸತಃ–ಬಹುಮಂದಿ ಇರುವ ಗ್ರಾಮ
ಸಂವೇಗ, ಸಂಭ್ರಮ–ಕಿರುನಗೆ
ಸಂವೇಶಃ–ನಿದ್ದೆ
ಸಂವ್ಯತಾ–ಕಟ್ಟಲ್ಪಟ್ಟ ಕೂದಲು
ಸಂಸರಣ–ರಾಜಮಾರ್ಗ
ಸಂಸಾರ–ಲೋಕಸಂಬಂದದ್ದು
ಸಂಸಿದ್ಧಿ–ಸ್ವಭಾವ
ಸಂಸ್ಥಾ–ಮಾರ್ಯಾದಿ
ಸಂಹತಿ–ವಂದಕ್ಕೊಂದು ತಗಲಿದೆ, ಸಮೂಹ
ಸಕ್ಕದಾ–ಸಂಸ್ಕೃತ
ಸಕ್ತಿ–ಕೂಡೆ, ಶ್ರದ್ಧೆ
ಸಕ್ರುತ್–ಒಂದು ಸರ್ತಿ
ಸಗೇಹ–ಸಮೀಪ
ಸಗ್ಗಾ–ಸ್ವರ್ಗಾ
ಸಗ್ಗಿಗರ ಪೆರ್ಯನು–ಬ್ರಹ್ಮ
ಸಗ್ಗಿಗರಡವಳ–ಅಗ್ನಿ
ಸಚರಃ–ನಡೆಯುವ
ಸಜೀವಾಚರ–ಜೀವವಿದ್ದುಚಲಿಸದೆ ಇರುವದು
ಸಜ್ಜನ–ಸತ್ಪುರುಷ
ಸಜ್ಜರಸ–ರಾಳ
ಸಜ್ಜುಕ–ಮೊಗ್ಗೆ
ಸಜ್ಜೆ–ಸೈಯ್ಯೆ
ಸಡೆದಾ–ಅಂಜಿಕೆ
ಸತ್–ಒಳ್ಳೆದಕ್ಕೆ, ಶ್ರೇಷ್ಠವಾದ
ಸತಿ–ಒಳ್ಳೆ ಸ್ತ್ರೀ, ದಾನ
ಸತೀ–ಪತಿವ್ರತೆ
ಸತ್ಯ–ನಿಜವಾದ
ಸತ್ಯವಚ–ಋಷಿ
ಸದಮಲ–ನಿರ್ಮಲ
ಸದಾಗತಿ, ಸಮೀರ–ವಾಯು
ಸದಾರಹಾ–ಪತಿಸಮರ್ಥಾ
ಸದ್ಗತಿ–ಪಿತೃಕಾರ್ಯ
ಸದ್ದೂ–ಧ್ವನಿಯು
ಸದ್ಮಾ, ಸದನಂ–ಮನೆ
ಸಧರ್ಮಿಣಾ–ಒಂದು ಬಗೆ ನಡತೆ ಉಳ್ಳವರ ಗುಂಪು
ಸನಿ–ಪೂಜ್ಯರಜಿಯೋನಿಸುವದು, ದಿಕ್ಕು
ಸಪತ್ನ–ವೈರಿ
ಸಪ್ತಕೀ–ಹೆಂಗಸರ ಸೊಂಟದಾಭರಣ, ವಡ್ಯಾಣ
ಸಪ್ತತಂತು–ಯಜ್ಞಾ

ಸಪ್ತಯ-ಕುದುರೆ
ಸಪ್ತಾರ್ಚಿಸ್-ಅಗ್ನಿ
ಸಪ್ತಾಶ್ವ-ಸೂರ್ಯ
ಸಪ್ಪಳೆ-ಹರಿಸುತ್ತಿಹ
ಸಪ್ಪುಕಂ-ಹಕ್ಕಿಗಳ ಧ್ವನಿ
ಸಫಾಡದಿ-ದೃಢವಾಗಿ
ಸಫಾಡಿಸು-ತುಳಿದಾಡು
ಸಬ್ಬಾಣಿ-ಪಾರ್ವತಿ
ಸಭಾಸತಿ, ಸಭಾಸ್ತಾರ-ಸಭೆಯಲ್ಲಿ ಇರುವವರು
ಸಭೆ-ಏಕತ್ರಸೇರಿದ ಬಹುಬಗೆ ಪದಾರ್ಥ
ಸಭ್ಯ, ಸಮಾಚಿತಃ-ಸಭೆಯಲ್ಲಿರುವವದು
ಸಭ್ಯಾ-ಒಳ್ಳೆ ಕುಲದವ
ಸಮ-ಸರಿ
ಸಮಂಜಸ-ಉಚಿತಧರ್ಮವಂ ತಪ್ಪದೆ ನಡೆವಿಕೆ
ಸಮಂಜಸತರ-ಹೆಚ್ಚುಗುಣಉಳ್ಳವ
ಸಮಗ್ರ-ಎಲ್ಲಾ
ಸಮಜ್ಯಾ-ಸಭೆ
ಸಮಜ-ಪಶುಗಳ ಹಿಂಡು
ಸಮಜ್ಞಾ, ಸಮಾಕ್ಯ-ಕೀರ್ತಿ
ಸಮನಿಸು-ಸಿದ್ಧವಾಗು
ಸಮಯ-ಶಪತಮಾಡಿಕೊಳ್ಳುವಿಕೆ
ಸಮರ-ಜಗಳ
ಸಮರಲಂಪಟರು-ಯುದ್ಧಶೀಲರು
ಸಮವರ್ತಿ, ಸರ್ವಕರ್ಮವಿಚಾರ-ಅಂತಕ, ಸಮನಾಗಿರುವವನು
ಸಮಾಕರ್ಶಿ-ದೂರವ್ಯಾಪಿಸುವ ಪರಿಮಳ ದ್ರವ್ಯ
ಸಮಾಧಿ-ಆತ್ಮವನ್ನು ತನ್ನ ವಶದಲ್ಲಿ ಇಟ್ಟುಕೊಳುವದು
ಸಮಾವರ್ತ-ವೇದಕಲಿತು ಮದುವೆಗೆ ಅಪ್ಪಣೆಪಡದವ
ಸಮಾಹೃತಿ-ಗ್ರಂಥ, ಸಂಗ್ರಹ
ಸಮೀರಣ-ವಾಯು
ಸಮುತ್ಕಡಾ-ಬಹಳ ಹೆಚ್ಚಿದ
ಸಮುದಗ್ರ-ದೊಡ್ಡದಾದ
ಸಮುದಾಯ, ಸಮುದಾಯ-ಸಂಗಾ
ಸಮುದ್ಗಕ-ಭರಣಿ, ಸಂಪುಟ
ಸಮೂಹ-ಗುಂಪು
ಸಮೂಹ-ಸಂವತ್ಸರ
ಸರಣೀ-ದಾರಿ
ಸರಪಾ-ಮೋಂತಿ
ಸರಮಾ-ಹೆಣ್ಣುನಾಯಿ
ಸರವಿ-ಮೃಗಬೇಟೆ
ಸರಸ-ರಸಉಳ್ಳದ್ದು
ಸರಾ-ಸ್ವರ
ಸರಿ-ಮಳೆ, ನದಿಯ ಪ್ರವಾಹ
ಸರಿತ್ಪತಿ, ಸರಸ್ವಾನ್-ಸಾಗರ
ಸರಿಮಿಂಡಿ-ಋತುವಾಗದವಳು
ಸರಿಸಾ-ಹತ್ತಿರ
ಸರೀಸೃಪ-ಹಾವು
ಸರೋಜಿನ್-ತಾವರೆಬಳ್ಳಿ, ಬ್ರಹ್ಮ
ಸರೋವರ-ಉತ್ತಮವಾದ ಕೆರೆ, ಕೊಳ
ಸರ್ಜನ-ತನ್ನ ಸಂಬಂಧ ಬಿಟ್ಟು ಕೊಡುವಿಕೆ
ಸರ್ವಂಸಹಾ-ಭೂಮಿ

ಸರ್ವತೋಮುಖ–ನೀರು
ಸರ್ವಮಂಗಳಾ–ಪಾರ್ವತಿ
ಸಲಿಲ–ನದಿ, ನೀರು
ಸಲೆ–ಚೆನ್ನಾಗಿ
ಸಲ್ಲಾಪ–ಪ್ರೀತಿಯಿಂದಾಡುವದು
ಸವಗ–ಅಂಗಿ
ಸವಯೆ–ಸರಿಸಂಗಾತದವ
ಸವಸು–ಸಿದ್ಧಮಾಡು
ಸವಿಗಡಲಣೆಗನು–ಚಂದ್ರಬಿಂಬಾ
ಸವ್ಯಸಾಚಿ–ಎಡದಕೈಯಿಂದ ಅಸ್ತ್ರ ಬಿಡುವವ
ಸಸಿನ–ನೆಟ್ಟಗೆ
ಸಸ್ಯ–ವೃಕ್ಷಾದಿಫಲಕ್ಕೆ
ಸಹಸ್ರಪತ್ರ–ಕಮಲ
ಸಹಸ್ರಾಕ್ಷ–ದೇವೇಂದ್ರ
ಸಹಾಯ–ಸಂಗಡಿಗನು, ಸಂಗತಿ
ಸಾಂದ್ರ–ಒಳ್ಳೆ
ಸಾಂದ್ರವಾಗಿ–ವ್ಯಾಪಿಸಿ
ಸಾಂದ್ರಿಷ್ಟಿಕ–ಸದ್ಯಪಡೆಯತಕ್ಕಫಲ
ಸಾಂಯುಗೀನಃ–ಚೆನ್ನಾಗಿ ಯುದ್ಧಬಲ್ಲವ
ಸಾತ್ವಂ–ಸಾಮೊಪಾಯ
ಸ್ವಾತ್ತ್ವಿಕ–ಇರುವಂಥಾದ್ದು
ಸಾಧಕ–ತೀರಿಸುವಿಕೆ
ಸಾಧನ–ದ್ರವ್ಯವಸ್ತು
ಸಾಧಾರಣ–ಎಲ್ಲಿಯೂ ಸಮವಾದದ್ದು
ಸಾಧ್ವೀ–ಸುಚ್ಯರಿತ್ರಾ
ಸಾನ್ನಾಯ–ಚರುಪುರೋಡಶಾ
ಸಾಪತ್ನ–ಸಾನುಹೆಚ್ಚು, ನಾಹೆಚ್ಚೆಂದಾಡುವದು
ಸಾಮಾಗ್ರಿ–ಪೂರ್ಣತೆ
ಸಾಮ್ರಾಟು–ರಾಜಸೂಯ ಮಾಡುವವನು
ಸಾರಂಗಾ–ಚಾತಕಪಕ್ಷಿ, ಜಿಂಕೆ
ಸಾರವಣೆ–ಸಾರೈಪುದು, ಪ್ರಕಟಿಸುವದು
ಸಾರಸ–ತಾವರೆ, ಕೊಂಗರ್ಟು
ಸಾರಸ–ಬಕಪಕ್ಷಿ
ಸಾರಸನ–ಹೆಂಗಳ ಸೊಂಟಾಭರಣ
ಸಾರಸೀರುಹ–ತಾವರೆ ಹೂ
ಸಾರಿ–ಶನಿ
ಸಾರಿಕಾ–ಶುಕಧ್ವನಿ
ಸಾರ್ಥ–ಪ್ರಾಣಿಗಳ ಸಮೂಹ
ಸಾರ್ವಭೌಮ–ಪ್ರಬಲವಾದ ಅರಸು
ಸಾಲ–ಕೋಟೆ, ವೃಕ್ಷಾ
ಸಾವಂತ್ಸರ–ಜೋಯಿಶ
ಸಾವತ್ಯ–ಅಂತಃಪುರ ಕಾಯುವವ
ಸಾವು–ಮೌನ
ಸಾಸವು–ವಾಸನೆ
ಸಾಸವೆಗೋಲ–ಕಾಮ
ಸಾಹಸ–ಒಂದು ಕೆಲಸ ತನ್ನ ಮೇಲೆ ತಕ್ಕೊಳ್ಳುವದು
ಸಾಹಸ–ಸತ್ವ
ಸಾಹಸ–ದೊಡ್ಡ ಉಪಾಯ
ಸಿಂಗ–ಕಾಮ
ಸಿಂಧ–ನಿಶಾನಿ
ಸಿಂಧೂಃ–ಸಮುದ್ರ, ನಿಶಾನಿಕ

ಸಿಂಧುಃ-ಕೆಡಿಸಿಬಿಡು
ಸಿಂಪಿಸು-ಸ್ವಲ್ಪ ಸುರಿಯವದು
ಸಿಂಬೆ-ಸೀವುಡು-ಭಾರಹೊರುವಾಗ ತಲೆ-ಅಡಿಗೆ ಇಡುವ ಚಂಡು
ಸಿಂಹ-ಮೃಗರಾಜ
ಸಿಂಹತಲಃ-ಅಂಗೈ ಜೋಡಿಸಿ ಮುಗಿದಕೈ
ಸಿಂಹಾಸನ-ಸಿಂಹದ ಆಕೃತಿಯಿಂದ ಶೃಂಗರಿಸಿದ ಪೀಠ
ಸಿಕತಾ-ಮಳಲು
ಸಿಗುಡೀ-ಬಿಳಿಮಾಡುವದು
ಸಿಡಿದಾ-ಹಾರಿ ಬೀಳುವವ
ಸಿಡಿಲು-ಉಜ್ಜಿಹೋಗು
ಸಿತಗನು-ಜಾರ
ಸಿದ್ಧಿ-ಪ್ರಾಪ್ತಿ
ಸಿಧ್ಮಂ-ಸಿಬ್ಬು
ಸಿಧ್ಯ-ಪುಷ್ಯಾನಕ್ಷತ್ರ
ಸಿನೀವಾಲಿ-ಅಮಾವಾಸ್ಯೆ
ಸಿರಿಯತರುಮಾಡಾ-ತಾಮರೆ
ಸೀಕರಾ-ಮಳೆಹನಿ
ಸೀಗುರಿ-ಕೈಗೊಡೆ-ಚಾಮರ
ಸೀತಾಂಬೋಜ-ಬಿಳಿತಾವರೆ
ಸೀಮಂತಿನೀ-ಸ್ತ್ರೀ
ಸೀಮೆಯೇ-ಸಾಮಾರ್ಥ್ಯ
ಸೀವರ-ಜಲಬಿಂದು
ಸೀವರ್ಸೀ-ಜರಿದು
ಸುಕರ, ಸುಲಭ-ಒಳ್ಳೆಕೆಲ್ಸದ್ದು
ಸುಕೃತಂ-ಪುಣ್ಯಾ

ಸುಖ-ಸಂತೋಷ
ಸುಗಿದನು, ಸುರುಳ್ದನು-ಅಂಜಿಕೆ
ಸುಗ್ಗಿ-ವಸಂತಕಾಲ
ಸುಗ್ಗಿಗೆಳೆಯಾ-ಕಾಮ
ಸುತ್ಯಾ-ಸೋಮರಸವನ್ನು ಹಿಂಡುವುದು
ಸುದರ್ಶನ-ಚಕ್ರಾ, ಹರ್ಯಾಯುಧ
ಸುಧರ್ಮಾ-ದೇವಸಭೆ
ಸುಧಾ-ಅಮೃತಾ
ಸುಧಿ ಸೂರಿ-ವಿದ್ವಾಂಸ
ಸುಪರ್ಣಾ-ಗರುಡ
ಸುಪರ್ವಾಣ, ಸುಮನಸಃ-ಸುರರು
ಸುಪ್ರತೀಕಃ-ದಿಗ್ಗಜ
ಸುಪ್ರಯೋಗ-ಬಾಣದ ಗುರಿಯುಳ್ಳವ
ಸುಭಗಾ-ತುಲಸಿ
ಸುಮನಸಂ, ಸುಮಂ, **ಸುಮನೋರಜಃ -ಧೂಳಿ**
ಸುಮನಾ-ಜಾಜಿಗಿಡ
ಸುಮುಖಿ-ನಗೆಮೊಗಉಳ್ಳವಳೂ
ಸುರಗಿಃ-ಚಿಕ್ಕಕತ್ತಿ
ಸುರದೀರ್ಘಿಕಾ-ಆಕಾಶಗಂಗೆ
ಸುರದ್ವಿಷಃ-ದೈತ್ಯರು
ಸುರಭಿಃ-ವಸಂತಋತು
ಸುರಭಿಃ, ಸುಗಂಧಿತಾಃ-ಪರಿಮಳ
ಸುರರ್ಷಯ-ನಾರದ ವಗೈರೆ ಋಷಿಗಳು
ಸುರಾಲಯ-ಮೇರುಪರ್ವತಾ
ಸುರೋತ್ತಮಃ-ಸೂರ್ಯ
ಸುರ್ಯಾಚಾರ್ಯ-ಬೃಹಸ್ಪತಿ

ಸುಲಭ–ಬೇಗಸಿಕ್ಕುವಂತಾದ್ದು
ಸುಶಿರ–ವಾದ್ಯ
ಸುಶಿರಂ, ಸುಷಿಃ–ಹೆಗ್ಗತ್ತಲೆ
ಸುಹ್ರುದ್–ಸ್ನೇಹಿತ
ಸೂಂನಲಿಗೆ–ಭಯವಾದದ್ದು
ಸೂಂಬಿನು–ಆಲಸ್ಯಗಾರ
ಸೂಂಮು–ಚೆಲ್ವಿಗೆ
ಸೂಕ, ಸೂಗ–ಸೌಖ್ಯ, ಬಾಣ
ಸೂಕ್ಕಿದಾ–ಮೂರ್ಛೆ
ಸೂಗಿವು–ಪ್ರಕಾಶಿಸುವ ಉಡಿಗೆ
ಸೂಚಕಃ–ಹೊಂಚುಗಾರ
ಸೂಟಿ, ಸೂಠಿ–ವೇಗ
ಸೂಡಂಬಾ–ದೊಡ್ಡದು
ಸೂತ–ಇಂದ್ರಸಾರಥಿ
ಸೂತಿಕಾಗೃಹಾ–ಸುರುಡಿನಮನೆ
ಸೂತಿಮಾಸ–ಬಸುರಿಗೆ ಹೆರಿಗೆ ತಿಂಗಳು
ಸೂತ್ರಾ–ದಾರ, ವಿಧಿ
ಸೂತ್ರಾಮಃ–ದೇವೇಂದ್ರಾ
ಸೂನ್ನೆ–ಇಲ್ಲದೆಇರವದು
ಸೂನ್ರುತ–ಸತ್ಯವಾಕ್ಯ
ಸೂಪ–ತೂವೆ
ಸೂಪ್ಪಳು–ಧ್ವನಿಯು
ಸೂಯ್ಯಲರು–ನಿಟ್ಟಸುಳಿ
ಸೂರ್ಯತನೆಯ–ಯಮುನಾನದಿ
ಸೂಲ್–ಒಂದುಸಾಲ, ಒಂದಾವರ್ತಿ
ಸೂವಡಾ–ವಾಸನೆ
ಸೂಸಿಲು–ರಮಿಸುವದು
ಸೂಳದು–ಸಂತೋಷಾತಿಶಯ
ಸೂಳುಸೂಳು–ಬಾರಿ ಬಾರಿ
ಸೂಳ್ಮೆರೆಯೆ–ಧ್ವನಿಗೈಯಲು
ಸೃಷ್ಟಿ–ನಿರ್ಮಾಣ
ಸೆಣಸು–ಕೋಪ
ಸೆರಗು–ಆಶ್ರಯ
ಸೇಕ–ಮನೆಯಲ್ಲಿ ಸಾಕುವ ಹಕ್ಕಿಮೃಗ
ಸೇತು–ಕಟ್ಟ
ಸೇನಾನಿಃ–ಸೇನಾಪತಿ
ಸೈಂಧವ–ಕುದುರೆ
ಸೊಬಗು–ಗುಣಸುಂಧರಾ
ಸೋಪಪ್ಲವಾ–ರಾಹುಗ್ರಹಣ
ಸೋಪಾನ–ಪಾವಟಿಗೆ, ಮೆಟ್ಟಿಲು
ಸೋಮಯಾಚಿಕ–ವೇದಕಲಿತು ಮದುವೆಗೆ ಗುರುಅರ್ಪಣೆಪಡೆದವ
ಸೋಮವಲ್ಲೀ–ಅಮೃತಬಳ್ಳಿ
ಸೋಮೊದ್ಭವಾ–ನರ್ಮದಾ
ಸೌಗಂಧಿಕ–ಕೆಂಪುನ್ನೈದಿಲೆ
ಸೌದಲ್ಲಾ–ಅಂತಃಪುರ ಕಾಯುವವ
ಸೌದಾ–ಬೆಳ್ಳಿ
ಸೌದಾಮಿನಿ–ಮಿಂಚು
ಸೌಧ–ಅರಮನೆ
ಸೌಭಗಾ–ಶಡ್ಗುಣ ಶೌರ್ಯ
ಸೌಭಾಗಿನೆಯಃ–ಭಾಗ್ಯವಂತಳಮಗ
ಸೌಮ್ಯ–ಬುಧ
ಸೌರಂಭಾ, ಸೌರಭಾ–ಪರಿಮಳ
ಸೌರಾಷ್ಟ್ರಿಕಾ–ವಿಷಬೇಧ

ಸ್ಕಂದ-ಷಣ್ಮುಖ
ಸ್ಕಂದ-ಹೆಗಲು
ಸ್ತಂಬೇರಮ-ಆನೆ
ಸ್ಥಂಡಿಲಃ-ವ್ರತದಿನೆಲದಿ ಮಲಗುವವ
ಸ್ಥಿತಿ-ಮರ್ಯಾದೆ
ಸ್ತಿರಾ-ಭೂಮಿ
ಸ್ತೋಕಕ-ಜಾತಕಪಕ್ಷಿ
ಸ್ತ್ರೀ-ಹೆರುವಂಥಹವಳು
ಸ್ಥಂಭ-ಕಂಭ
ಸ್ಥಬ್ಧ-ಘುಟ್ಟೆ, ಮರುಳು
ಸ್ಥಾಣೆ-ಮರದಮೋಟು
ಸ್ಥಾನ-ಸಭೆ
ಸ್ಥಾಯಿ-ನಿಲ್ಲುವಂತಾದ್ದು
ಸ್ಥಾಯುಕ-ಗ್ರಾಮಾಧಿಕಾರಿ
ಸ್ಥಾವರ-ಸ್ಥಿರವಾದದ್ದು, ನಿಲುಗಡೆ
ಸ್ಥಾವಿರ-ಮುದಿತನ
ಸ್ಥೋಮ-ಗುಂಪುಯೆಕತ್ರಗೂಡಿದ ಬಹುಬಗೆಪದಾರ್ಥ
ಸ್ನಾನ-ಮೈತೊಳೆವದು, ನಾವೆ
ಸ್ನಿಗ್ಧ-ನುಣುಪು, ಚಂದ
ಸ್ನಿಗ್ಧ-ಸರಿಸಂಗಾತದವ
ಸ್ಪ್ರಹಾ-ಯಿಚ್ಛೈಸುವಿಕೆ
ಸ್ಪ್ರುಹೆ-ಇಚ್ಛೆ
ಸ್ಮಿತಂ-ಕಿರುನಗೆ
ಸ್ನುಷಾ-ಸೊಸೆ
ಸ್ಯಂದಿನಿ-ಬಾಯಿಜೊಲ್ಲು, ಜಿನುಗುವುದು
ಸ್ರಂಡಿನಂ, ಸಂದೋಹಾ, ಸಂಚಯೆ, **ಸಂಹತಿ, ಸಂಗ**-ಇವೆಲ್ಲಾ ಏಕತ್ರ ಸೇರಿದ ಬಹುಪದಾರ್ಥಗಳಿಗೆ
ಸ್ರುಃ-ಸಮಭೂಮಿ
ಸ್ರುಕ್ವಿ-ತುಟಿಯಕೊನೆ
ಸ್ರುಗಾ-ಮಾರುದ್ದಗುದಿಗೆ
ಸ್ರುಗಾಲ-ನರಿ
ಸ್ರುಣೆ-ಅಂಕುಷ
ಸ್ರುತ-ಜಲಪ್ರವಾಹ, ಸ್ರವಿಸಿದ
ಸ್ರುತಿ-ದಾರಿ, ರಾಳ
ಸ್ರೋತಸ್ವಿನಿ-ನದಿಗಳು
ಸ್ವಭಾವಿಕ-ಸ್ವಂತಇರುವಿಕೆಯದು
ಸ್ವರ್ಗ-ಪ್ರಕಾಶಹೊಗುವವ-ಉಳ್ಳಸ್ಥಳ
ಸ್ವೇದಜಃ-ಬೆವರಿನಿಂದ ಹುಟ್ಟುವಂಥಾದ್ದು
ಸ್ವೇದ-ಬೆವರು, ಗಮನ

-ಹ-

ಹಂಕೆ-ವಾಸಸ್ಥಾನ
ಹಂಡೆ, ಹಂಚೆ-ನೀಚಳನ್ನು ದಾಸ್ಯಳಂ ಕರೆವಿಕೆ
ಹಂತಾ, ಹಂಜರ್ರಿತು-ಹಂಕಾರ
ಹಂನ-ಬಿಡಲ್ಪಟ್ಟಮಲ
ಹಂಸೀ-ಒಂದುಜಾತಿ ನೀರುಕೋಳಿ
ಹಂಸಿ-ಕೆನ್ನೆಗಳ ಮೇಲ್ಭಾಗ, ಹೆಣ್ಣುಹಂಸ ಪಕ್ಷಿ
ಹಗರು-ಆಧಾರದಕಟ್ಟಿಗೆ
ಹಟ-ನಿರ್ಬಂಧ
ಹದನ-ಯುಕ್ತಿಕಾರ್ಯ
ಹದಿಪದೆ-ಕುಲವತಿ

ಹನನ–ಕೊಲೆ
ಹಯಪು–ಕಾಡುದ್ದು
ಹಯಮಾರಕ–ಗನ್ನೇರಳೆಗಿಡ
ಹಯ್ಯಂಗ ವಿನ–ಆಕುಳಬೆಣ್ಣೆ ತುಪ್ಪ
ಹರವಂತಕ–ಕಡ್ಲೆಬೇಳೆ
ಹರವಡಿಗಾರಣ–ಪ್ರಕಟವಾದದ್ದು
ಹರಹು–ವಿಸ್ತರಿಸು
ಹರಿಕರಃ–ಗ್ರಾಮಸಮೂಹ
ಹರಿಣಃ–ಪಚ್ಚೆಬಣ್ಣ, ಬಿಳಿ
ಹರಿತಕ–ಅಣಿಲೆಗಿಡ, ಗರಿಕೆಹುಲ್ಲು
ಹರಿದ್ರಾ–ಅರಿಶಿನ
ಹರಿದ್ರಾಭ–ಹೊನ್ನೆ ಮರ, ಹೊಂಬಣ್ಣ
ಹರಿಯಕ್ಷ–ಸಿಂಹ
ಹರಿವು–ನಾಶನಾ
ಹರಿಹಯ–ಇಂದ್ರಾ
ಹರೀತಕಂ–ಹುಳಿ–ಪಲ್ಯಸಪ್ಪುಕ್ಯಾ
ಹರೀತತಃ–ಪಚ್ಚೆಬಣ್ಣಉಳ್ಳ ಯೆಲೆ
ಹರುಷಮಾಣಃ–ಸಂತೋಷದಿಂದ ಕೂಡಿದ ಮನಸ್ಸುಳ್ಳವ
ಹರ್ಮ್ಯಾ–ಉಪ್ಪರಿಗೆ
ಧಾತು – ವಾತ, ಪಿತ್ಥ, ಶ್ಲೇಷ್ಮಗಳು, ರಸ, ರಕ್ತ ಮುಂತಾದವು, ಪೃಥಿವಿಆದಿ ಭೂತಗಳು, ಗಂಧಾದಿಗುಣಗಳು, ಚಕ್ಷುರಾದಿ ಇಂದ್ರಿಯಗಳು, ಕಾವಿಮೊದಲಾದ ಶಿಲಾದಿಕಾರಗಳು, ಭೋಗ, ನರ, ಕ್ರಿಯಾಮೂಲ – ೧೩

ಧಾತ್ರಿ – ಸಾಕುತಾಯಿ, ಭೂಮಿ, ನೆಲ್ಲಿಮರ, ಸೂಲಿಗೆತ್ತಿ – ೪

ಧಾಮಾ – ಮನೆ, ಮೈಕಾಂತಿ, ಪ್ರಭಾವ, ಪಾಶ, ಕಿರಣ – ೫

ಧಾರಾಳ – ಶಾಂತತ್ವ, ತಾಳ್ಮೆ, ಉದಾರತ್ವ, ವಾಗ್ಜಾಲತ್ವ – ೪

ಧಾದತಿ – ದುಃಖ, ಕಷ್ಟ, ಆಯಾಸ – ೩

ಧಾಳಿ – ಊಟ, ಸೂರೆ, ನಿಂದಾ, ತೊಂದರೆ, ಕಷ್ಟ – ೫

ಧಿತ್ – ಬೆದರುಸುವಿಕೆ, ನಿಂದಿಸುವಿಕೆ – ೨

ಧಿಷ್ಯ – ಸ್ಥಳ, ಮನೆ, ನಕ್ಷತ್ರ, ಅಗ್ನಿ – ೪

ಧುರ – ಯುದ್ಧ, ಯೌವ್ವನ – ೨

ಧೂಮಕೇತು – ಅಗ್ನಿ, ಉತ್ಪಾತ – ೨

ಧೃತಿ – ಧರಿಸುವಿಕೆ, ಧೈರ್ಯ, ಸಂತೋಷ, ಸಾರ – ೪

ಧೆನುಕಾ – ಹೆಣ್ಣಾನೆ, ಆಕಳು, ರಾಕ್ಷಸ, ಶಸ್ತ್ರ, ಹಸು – ೫

ಧ್ರುವ – ಧ್ರುವನಕ್ಷತ್ರ, ನಿಶ್ಚಯಿಸಲ್ಪಟ್ಟದ್ದು, ಶಾಶ್ವತವಾದ್ದು, ನಿಶ್ಚಯ – ೪

ದ್ವಾಂಕ್ಷಾ – ಕಾಗೆ, ಮೀನುತಿನ್ನುವ ಕೊಕ್ಕರೆ – ೨

-ನ-

ನಂದನ – ಮಗ, ಇಂದ್ರನವನ, ಸಂತೋಷ, ಸಂವತ್ಸರ – ೪

ನಂದಿ – ಸಂತೋಷ, ಶಿವನವಾಹನ – ೨

ನಕುಲ – ಮುಂಗುಲಿ, ಮಾರಿಮಗ – ೨

ನಗ – ಬೆಟ್ಟ, ಗಿಡ, ಹಡಗ, ಆಭರಣ – ೪

ನಚ್ಚು – ತೋರಿಕೆ, ಇಚ್ಛೆ, ನಂಬಿಕೆ, ಸಂದೇಹ, ತಡ – ೫

ನಡೆ – ಗಡಿಗೆ, ನಡತೆ, ಸಮೂಹ, ಒಂದುಬಾರಿ – ೪

ನಭ – ಆಕಾಶ, ಶ್ರಾವಣಮಾಸ – ೨

ನನು –ಪ್ರಶ್ನೆ, ನಿಶ್ಚಯ, ಸಮಾಧಾನಗೊಳಿಸುವಿಕೆ, ಕರೆಯುವ, ಸಂಭೋದನೆ– ೪

ನನೆ – ಮೊಗ್ಗೆ, ಎಳೆದು, ಆರ್ದ್ರತ್ವ – ೩

ನರ – ಮನುಷ್ಯ, ನಾಡಿ, ಅರ್ಜುನ, ಯಮ – ೪

ನರಕ – ಒಬ್ಬ ರಾಕ್ಷಸ, ಕೊಳೆ, ಮೈಲಿಗೆ – ೩

ನರುವು – ಮೋಸ, ಕೆಸರು – ೨

ನಲ – ಸಂವತ್ಸರ, ನಳಚಕ್ರವರ್ತಿ, ಸಂತೋಷ, ಆನಂದ – ೪

ನಾಗ – ಮದ್ದಾನೆ, ವೃಕ್ಷ, ಹಾವು, ಕತ್ತಲೆ, ಉದಕ, ಅಗ್ನಿ, ಸೀಸ, ಮುಖ್ಯವಾದ್ದಕ್ಕೂ, ಶಂಖ – ೯

ನಾಕ – ಭೂಮಿಗೂ, ಆಕಾಶಕ್ಕೂ, ಸ್ವರ್ಗ, ಹುತ್ತ – ೪

ನಿರ್ಯಾಣ–ಸಾಯಂಕಾಲಕ್ಕೂ, ಕೃತ್ಯಕ್ಕು, ಪ್ರಾಣಕ್ಕೂ, ಆನೆ, ಕತ್ತಲೆ, ದ್ವೇಷ, ಪ್ರಾಣವಸಾನಕ್ಕೂ, ಮೋಕ್ಷ, ವೇಗಉಳ್ಳವ, ಉತ್ತರಕ್ರಿಯೆ, ದಶಸ್ಥಾನದ ಲೆಕ್ಕ– ೧೧

ನೀಲ – ನೀಲವನಕ್ಕು, ನೀಲಾಚಲಪರ್ವತಕ್ಕೂ, ಪಾಪ, ಹಾವು, ನೀಲರತ್ನ, ನೀಲನೆಂಬ ಕವಿನಾಯ್ಕು, ಉನ್ನತವಂಶ – ೭

ನೀಲಕಂಠ–ಸರ್ಪ, ನವಿಲು, ಕಪ್ಪಾದಕೊರಳು, ಮಿಜೆ, ಗುಬ್ಬಿ, ಲಾವುಗೆಹಕ್ಕಿ, ಶಿವ–೭

ನೀವಿ–ಜೂಜಿನ ದ್ರವ್ಯಕ್ಕೂ, ಮೋಹನ, ಹಲ್ಲಣ, ರತಿ, ಕೃಪೆ, ನೆರಿ, ದ್ವಂದ್ವ – ೭

–ಪ–

ಪುಂಡರೀಕ – ಹುತ್ತ, ಹುಲಿ, ಕಪ್ಪೆ, ಬಿಳಿತಾವರೆ, ಶ್ವೇತಛತ್ರ, ಮುನಿ, ವಿಷ್ಣು, ಬ್ರಹ್ಮ, ಕಲ್ಪವೃಕ್ಷ, ಇಂದ್ರ, ಶ್ರೇಷ್ಠ, ದಿಗ್ಗಜಕ್ಕು, ಪತಾಕೆಗು, ಕಬ್ಬು, ಶಬ್ದ – ೧೫

ಪಯೋದರ – ನೇತ್ರ, ಮೇಘ, ಉದಧಿ, ಕುಚ – ೪

ಪುಷ್ಕರ – ತಾಮರೆ, ಆಕಾಶ, ವಾದ್ಯ, ಹರುವಿ, ಈಶ್ವರ, ಸರ್ಪ, ಮದ, ಕತ್ತಿ, ತೀರ್ಥವಿಶೇಷ, ವೈದ್ಯ, ಆನೆಸೊಂಡಿಲು – ೧೧

ಪ್ರುಥೆಯ–ಉದಕ, ಅರಣ್ಯ, ಚಂದ್ರ, ಹಂಸೆ, ಕತ್ತಲೆ, ನಡುತಲೆ, ಸೂರ್ಯ, ಇಂದ್ರ–೮

ಪ್ರವಾಳ – ಚಿಗುರು, ಕೂದಲಿಗೂ, ನೇಗಿಲು, ಪಚ್ಚೆಮಣಿ, ವೀಣೆದಂಡು, ಬಾಲಕ್ಕೂ ಹವಳ, ಕೆಂಪು – ೮

ಪಿತಾಮಹ – ಅಯೋಧ್ಯೆ, ಅರಣ್ಯ, ಮಾಂಸ, ಮಲಿನವಾದದ್ದು, ಮಾಂಸಕ್ಕೂ, ಎಂಜಲು, ಬ್ರಹ್ಮ, ಅಜ್ಜನಿಗೂ – ೮

ಪಾರ್ಥಿವ – ದೊರೆ, ಈಶ್ವರ, ನಭ, ಅಲ್ಪವಾದ್ದು, ವೃಕ್ಷ – ೫

ಪಾಳಿ – ಭೂಮಿ, ಬಾಣ, ಮೊದಲಾಗಿ, ದಿಕ್ಕು, ಶರೀರ, ಅಗ್ನಿ, ವೇದ, ವಿಭಾಗ, ಶಿವ, ಧ್ವಜ, ಲತೆ, ಕಿವಿ, ಸಮೂಹ, ಸೂತ್ರ, ಆಯುಧದ ಪಿಡಿ, ಬಿಗಿಯುವದು, ಪ್ರೀತಿಗು, ವಿಚಿತ್ರ, ಆಸ್ಪದ, ಭಯ, ಲಜ್ಜೆ – ೨೧

ಪದ್ಮ – ಕಮಲ, ಯೋಗಿ, ಲಕ್ಷ್ಮಿ, ಕೊಳ, ಚಂದ್ರ, ಜಲ, ಸರ್ಪ, ಆನೆ ಮುಖದ ಜಿಬ್ಬು, ಕುಮುದ, ಸೈನ್ಯಭೇದ, ಪದ್ಮವೆಂಬ ಲೆಃಖ, ಆಸನ, ತ್ರಾಣ – ೧೩

ಪ್ಲವಂಗ – ಶ್ರೇಷ್ಠಕುದುರೆ, ಕವಿ, ಕಪ್ಪೆಗಳಿಗು, ಸಂವತ್ಸರ – ೪

ಪತಂಗ – ಸೂರ್ಯ, ಮಿಂಚು, ಬಾಣ, ಪಕ್ಷಿ – ೪

ಪುನ್ನಾಗ – ಗೋಣ, ಸುರಗೀ ಮರ, ಸರ್ಪ, ಆನೆ – ೪

ಪಾಂಚಜನ್ಯ – ಬೆಂಕಿ, ವೃಕ್ಷ, ಚಂದ್ರ, ಶಂಖ – ೪

ಪಯ – ಹಾಲು, ನೀರು – ೨

ಪ್ರತಿಹಾರ – ಬಾಗಿಲು ಕಾಯುವವ, ನಗರ, ಪಟ್ಟಣಸಮೀಪಕ್ಕು, ತ್ಯಾಜ್ಯ – ೪

ಫಲ – ಮೋಕ್ಷ, ವಿದ್ಯೆ, ಪಣ್ಗಳು, ತೃಪ್ತಿ – ೪

ಪಕ್ಷ – ರೆಕ್ಕೆ, ಭಯ, ಸಹಾಯ, ಬಲ, ಸಮೀಪ, ಶುಕ್ಲಪಕ್ಷ, ಕೃಷ್ಣಪಕ್ಷ – ೭

ಪವಿತ್ರ – ದರ್ಭೆ, ಪರಿಶುದ್ಧ – ೨

ಪಾವಕ – ಅಗ್ನಿ, ಗೇರಿಗೂ, ಚಿತ್ರಮೂಲ, ಜಾಗ್ರತೆ, ತೀರಿಹೊದ್ದು – ೫

ಪಲ್ಲವ – ಹವಳ, ಸ್ತ್ರೀಯರು, ಆನೆಮರಿ, ಜನಸಮೂಹ, ವಿಟಗಾರ, ಚಿಗುರು, ವೀಣೆ, ರತ್ನ, ಶಿಶು, ನೇಲುವ ತಲೆಕೂದಲು – ೧೦

ಪುಶ್ಯ – ಬೆಲೆ, ಶೂನ್ಯವಲ್ಲದಕ್ಕೂ, ಮಾಸಕ್ಕೂ, ನಕ್ಷತ್ರಕ್ಕೂ, ಕಲ್ಲು, ಪೂಜೆ – ೬

ಪಾದ – ಪದ್ಯನಿಲ್ಲಿಸುವದು, ಕಾಲು, ತೇಜಸ್ಸು – ೩

ಪುರಾಣ – ಹಳೆಯದು, ದೀರ್ಘ, ಪೂರ್ವದಕಥೆ – ೩

ಪತ್ರ – ವಾಹನ, ಶತ್ರು, ಕತ್ತಿ, ಎಲೆ, ಅಗ್ನಿ, ಪರ್ವತ – ೬

–ಬ–

ಬಲಿ – ಸತ್ಪುರುಷ, ಸಂತೋಷ, ದೃಢ, ದಳಪತಿ, ಅಗಸ, ಬಲಿಚಕ್ರವರ್ತಿ, ಸುಕೀರ್ತಿ ಪಟ್ಟವನು, ಕಾಗೆ, ಸಮೂಹ, ಸ್ವಭಾವ, ದೇವತಾರಾಧನೆ – ೧೧

ಬಭ್ರ – ಚಿನ್ನದ ಬಣ್ಣಕ್ಕು, ಮುಂಗುಲಿ, ವಿಷ್ಣು – ೩

ಬಾಣ – ಅಸ್ತ್ರ, ಪಟ್ಟೆವಸ್ತ್ರ, ಕರಿಗೊರಂಟೆ, ಬಾಣಾಸುರನೆಂಬ ರಕ್ಕಸ – ೪

ಬಾಲಕ – ಸೂರ್ಯ, ಚಂದ್ರ, ವಾಯು, ಉದ್ದಕೂದಲು, ಬೆರಳುಂಗುರ, ಹಲ್ಲು, ಲಾವಂಛ, ಬಾಲ, ವಿಷ್ಣು, ಶಿಶುಗಳು – ೧೦

ಭದ್ರ – ಬಸವ, ದೊಡ್ಡತನ, ಪಟ್ಟದಾನೆ, ಮಂಗಲಕರ – ೪

ಭವ – ಈಶ್ವರ, ಜನನ – ೨

ಭುಜಂಗ – ಪಾವನಮುನಿ, ವಿಟ, ಹಾವು – ೩

ಭ್ರುಂಗ – ಗದ್ದೆಗರುಗ, ನೀಲವರ್ಣ, ಮೇಘ, ಕತ್ತಲೆ, ಅಭ್ರಕ – ೫

ಭೀಮ – ಅಂತಕ, ಈಶ್ವರ, ಯುದ್ಧಭಟ, ತ್ರಾಣಿ, ಭೀತಿ – ೫

ಭೋಗಾವತಿ – ಪಟ್ಟಣ, ಲಕ್ಷ್ಮಿ, ಪಾತಾಳಲೋಕ, ಭೋಗಾವತಿನದಿ – ೪

ಭೋಗ – ವೇಶ್ಯಸ್ತ್ರೀಯರಿಗೂ, ಭೋಗಕ್ಕೂ, ಸರ್ಪಶರೀರಕ್ಕೂ, ವ್ಯವಹಾರಕ್ಕೂ, ಸಂರಕ್ಷಣೆಗೂ, ಸೈನ್ಯಕ್ಕೂ – ೬

–ಮ–

ಮಲ–ಅಮೇಧ್ಯ, ಅರಣ್ಯ, ಮಾಂಸವಿಶೇಷ, ಮಾಸಕ್ಕೂ, ಮಾಸಿದ್ದು, ಎಂಜಲು– ೬

ಮಧುಪ್ರಿಯ – ವಿಟಗಾರ, ಬಲರಾಮ, ದೂರ್ಜಟಿ, ತುಂಬಿ, ಚೈತ್ರಮಾಸ, ಮನ್ಮಥ, ಸ್ತ್ರೀಗೂ – ೭

ಮರುತ – ಗಿರಿ, ಬಿಲ್ಲು, ದೇಶ, ವಾಯು, ದೇವರ್ಕಳು – ೫

ಮಹಾಕಾಳ – ಈಶ್ವರ ಪ್ರಮಥರು, ಕಪ್ಪಾದ್ದು, ಗೇರಿಗೂ, ಕಠಿಣ, ಹೃದಯರು– ೫

ಮದನ – ಮುನಿ, ಮದನವೃಕ್ಷ, ಉಮ್ಮತ್ತಿಗಿಡ, ಸಾಧು, ಮನ್ಮಥ – ೫

ಮಧು – ತವರ, ಪುಷ್ಪಧೂಳಿ, ತುಂಬಿ, ಮಧುವೆಂಬ ದೈತ್ಯ, ನೀಚ, ಚೈತ್ರಮಾಸ, ಹೆಂಡ, ಜೇನು, ಅಮೃತ – ೯

ಮಾರ್ಗಣ – ಕೀಚಕದ ವೃಕ್ಷ, ಬಾಣ, ಶತ್ರು, ಬೇಡುವವರು, ನರಕ – ೫

ಮುಂಡನ – ತಲೆಯಿಲ್ಲದ ದೇಹ, ಕ್ಷವರ – ೨

ಮೃತ – ಯುದ್ಧ, ರೋಗ, ಶವ, ಉದಕ – ೪

ಮೋಚ – ನಿಶ್ಚಲ, ಬಾಳೆ, ವೃಕ್ಷ, ವಿರಕ್ತಿ, ಮೋಕ್ಷ – ೫

ಮೌಳಿ – ಶ್ರೇಷ್ಠವಾದ ಕಿರೀಟ, ಪ್ರಭು, ಜಡೆ – ೩

ಮಂಗಳ – ಸೂರ್ಯ, ಶೋಭಾನ, ಮಂಗಲಕ್ಕೂ, ಕುಜ, ಕುದುರೆ, ಪೂರ್ವನಡತೆ –೬

ಮಂಡಳಿ – ಸಮೂಹಕ್ಕು, ತುಂಬಿ, ಹಂಸ, ಸುಂದರ, ಆನೆ, ಒಳ್ಳೆವೃತ್ತ – ೬

–ರ–

ರಜತಾ – ಮುತ್ತು, ರಜತಾದ್ರಿ, ಬೆಳ್ಳಿ – ೩

ರವಿ – ಬೆಳ್ಳಿ, ಗಿರಿ, ಸೂರ್ಯ, ರಾಜ – ೪

ರಮಾ – ಲಕ್ಷ್ಮಿ, ಪ್ರಿಯಕ್ಕು, ಸಂಭೋಗಿಸುವುದಕ್ಕು – ೩

ರಾಜೀವ – ತಲೆಕೂದಲು, ತಾವರೆ, ನೀರು, ಸಮೂಹ – ೪

ರಾಜಾ – ಕಕ್ಕೆಗಿಡ, ಶುಭ್ರ, ಕೃಷ್ಣವರ್ಣಕ್ಕೂ, ಮನೆ, ತಪಸ್ವಿ, ಅರಸು, ಚಂದ್ರ – ೭

ರಾಮಾ – ಲಕ್ಷ್ಮಿ, ಪ್ರಿಯಕ್ಕು, ಪಗ್ತಿಕಪ್ಪು – ೩

ರಾಮಾ – ಪಾದರಸ, ತ್ರಿಜಗ, ಶುಭ್ರ, ನೇತ್ರ – ೪

ರೂಪಕ – ಜನ, ಗೊಲ್ಲನಿಗೂ, ಸ್ವಧರ್ಮಕ್ಕೂ, ಶ್ರೇಷ್ಠವಾದಕ್ಕೂ, ಶರೀರ ಮುಂತಾದ ಆಕೃತಿ – ೫

ರೂಭಾ – ನೀರು, ಬಾಳೆ, ದೇವತಾ ವೇಶ್ಯೆ – ೩

–ಲ–

ಲಲಾಮ – ಚಂದ್ರ, ಲಕ್ಷ್ಮಿ, ಸೂರ್ಯ, ಶುಭ್ರ, ಕಿರಣ, ಸರಸ್ವತಿ, ಕುದುರೆ, ಕೊನೆಭಾಗಕ್ಕೂ, ಶ್ರೇಷ್ಠಗೂ, ತಿಲಕಂ, ಪತಾಕೆ, ಚಿನ್ನದ ಒಡವೆ, ಕೆಂಪುಬಣ್ಣ, ದೊಡ್ಡದು, ಸುಂದರ, ತಿಲಕ ವೃಕ್ಷ, ಎತ್ತಿಗರಿ – ೧೮

ಲಿಂಗ – ಈಶ್ವರ, ವಸ್ತುಗಳು, ಸಂಶಯ, ಪ್ರಜಾಪತಿ – ೪

ರಾಮ – ಸ್ತ್ರೀಯರು, ಬಿಳಿದು, ಕರಿಬಣ್ಣ, ಬಲರಾಮ, ನಿರ್ಮಲ, ಪರಶುರಾಮ, ರಘುರಾಮ, ಸೌಂದರ್ಯ, ಲಕ್ಷ್ಮಿ – ೯

–ವ–

ವಸು – ಗೋವುಗಳ ಕುತ್ತಿಗೆಗೆ ಕಟ್ಟಿದ ಹಗ್ಗ, ಅರಣ್ಯ, ಅಷ್ಟವಸುಗಳು, ವಸ್ತ್ರ, ರತ್ನಮಣಿ, ಕಿರಣ, ಪರ್ವಗಳಿಗು – ೭

ವಟ – ಮನ್ಮಥ, ಆಲದಮರ, ಧ್ವನಿ, ಆನೆಮದ, ಉಚಿಷ್ಟಕ್ಕು – ೫

ವತ್ಸರ – ಕರುಗಳು, ಅಮಲ, ವರುಣ, ಎದೆ, ಸಂವತ್ಸರ – ೫

ವಾಜಿ – ವೃಕ್ಷಬೇದಕ್ಕು, ಭೃಂಗ, ಕುದುರೆ, ಶಾಖೆಗೂ, ಯಜ್ಞಾಂತ್ಯ, ರೆಕ್ಕೆ – ೬

ವಾರಣ – ಆನೆ, ಕೆರೆಯೆರಿಗು, ಒಂಟೆಗೂ, ಮೇಘಕ್ಕೂ, ಪಶ್ಚಿಮ ಶರಧಿ – ೫

ವಾನ – ಆನೆಮದ, ಗಿರಿನಿತಂಬ, ಸುಂದರ, ಉದಾರ್ಯ, ಕರ್ಮ, ವಣಕ್ಕಾ – ೬

ವಾಡಬ – ಅತಳ, ಕುದುರೆ, ಬ್ರಾಹ್ಮಣ ಶ್ರೇಷ್ಠ, ವಡಭಾಗ್ನಿ – ೪

ವಿಷ – ಮದ, ನಂಜು, ನೀರು, ನಿಷ್ಠುರ – ೪

ವಿರೋಚನ – ಅಗ್ನಿ, ಚಂದ್ರ, ಸೂರ್ಯ, ಬಾಲಕ, ವಿರೋತನನೆಂಬ ದೈತ್ಯ – ೫

ವಿಧಿ–ಕಾಲಕ್ಕೂ, ಶ್ರೇಷ್ಠನಿಗೂ, ವಿದ್ವಾಂಸ, ಮಾಡತಕ್ಕ ಕ್ರಮ, ಪ್ರೌಢ, ವೇದ, ಬ್ರಹ್ಮ–೭

ವಿಶಾಖ–ನಕ್ಷತ್ರ, ತಾಳದಾರಿ, ಮರದಗೊನೆ, ಶಕ್ತಿ, ಶತ್ರು, ಪೂರ್ವದಿಕ್ಕು, ಷಣ್ಮುಖ–೭

ವಿಜಯ – ಅಣಿಲೆವೃಕ್ಷ, ಪಾರ್ಥ, ಯುದ್ಧ, ಯುದ್ಧಸಮರ್ಥ, ಸಂವತ್ಸರ – ೫

ವಿಶ್ವ – ಪ್ರಪಂಚ, ಗೋಪುರ, ಶುಂಠಿ, ಸರ್ವಕ್ಕು – ೪

ವಿಪ್ರ – ಕಿರಣ, ಬ್ರಾಹ್ಮಣ, ದರ್ಭೆಹುಲ್ಲು – ೩

ವೃತ್ತ – ದ್ವೇಷಿ, ಸುಧೆ, ಅಂಧಕಾರ, ಚಾರಿತ್ರ, ಛಂದಶಾಸ್ತ್ರಾದಿ ಬರುವ ವೃತ್ತ, ವೃತ್ರಾಸುರ, ಧೃಢ, ಕೂಡಿದ ಪರಿಧಿ – ೮

ವೇಷ್ಠಾ – ಕಿರೀಟ, ಸೂರ್ಯಚಂದ್ರರ ಪರಿವೇಶ, ವಸ್ತ್ರ – ೩

ವೈಕುಂಠ – ಮಹಾಮೋಕ್ಷ, ಇಂದ್ರ, ವಿಷ್ಣು – ೩

ವ್ಯಾಳ – ತೋಳಮೃಗ, ನಾಯಿ, ದುರ್ಜನ, ಭಯಸ್ತ, ಸರ್ಪ, ಹಿಂಸೆ ಮಾಡುವವ, ಆನೆ – ೭

ವಂದನ –ಜಲಜಂತುಗಳು, ನಿರ್ಮಲ, ಕತ್ತಲೆ, ತೋರಣ, ಕಾಣಿಸುವಂತಾದ್ದು– ೫

ವಂಶ – ಮುಳ್ಳ ಮುತ್ತುಗದ ಮರ, ಬೆದುರು, ಕುಲ, ಬೆನ್ನಸ್ಥಿ, ತಪಸ್ವಿ, ಸಮೂಹ, ರಾಜ – ೭

ಶರಧಿ – ಬತ್ತಳಿಕೆ, ಸಮುದ್ರ, ಅಡವಿ, ನದಿ – ೪

ಶತಪತ್ರ – ಕಮಲ, ಸಾರಸಪಕ್ಷಿ, ತಾವರೆಹೂ, ಇಂದ್ರ, ಸೇವಂತಿಹೂ – ೫

ಶಕ್ರ – ಇಂದ್ರ, ವಿಷ್ಣು, ಕಳ್ಳಿಮರ, ಮಲ್ಲಿಗೆ, ಪರ್ಣಶಾಲೆ, ಯಮ, ಶುಭ್ರ – ೭

ಶಾ – ಸರ್ವಕಾಲಕ್ಕೂ, ಶೌರ್ಯ, ಪ್ರಕಾಶ – ೩

ಶಾರದ – ಆಕಾಶ, ಅಲ್ಪವಾದ್ದು, ಎಂಜಲು, ಕೆಚ್ಚು, ಶರದೃತು, ಬುದ್ಧಿ, ಬಾಳೆ, ಶುಭ್ರ ಮಾಡಿದಕೆಲ್ಸ, ಹಡಗು, ಸಾರಂಗ, ಸರಸ್ವತಿ – ೧೨

ಶಾಲ – ಮನೆ, ಬಲ, ಕೋಟೆ, ನೆಲ್ಲುತೆನೆ, ಮೊದಲು, ವಿಸ್ತಾರ – ೬

ಶಿವ – ಈಶ್ವರ, ಗಿರಿ, ಜಲ, ಪಾರ್ವತಿ, ಆಲದಗಿಡ, ಮರಳುದಿಣ್ಣೆ, ಅಣಿಲೆ, ನೆಲ್ಲಿಗಿಡ, ಸರಸ್ವತಿ, ಗಿಣಿ, ಜಂಬುಕ, ಶವ, ಸಮುದ್ರದ ಬುರಗೀರು, ಧರ್ಮ, ಹಾವು, ಮಂಗಲಕ್ಕು, ಶುಭ್ರ, ಸೌಖ್ಯ, ಶ್ರೇಷ್ಠ – ೨೦

ಶ್ರೀ – ಲಕ್ಷ್ಮೀ, ಸರಸ್ವತಿ, ಸಂಪತ್ತು, ಅಲಂಕೃತಳಾದ ಸ್ತ್ರೀ, ಕಾಂತಿ – ೫

ಶುಕ–ಮಾವಿನಗಿಡ, ಗಿಣಿ, ಶುಕನೆಂಬ ಋಷಿ, ಈಶ್ವರ, ರಾವಣಸಚಿವ, ಬಾಗೆಗಿಡ–೬

ಶುಚಿ – ಲತಾಭೇದ, ತಪಸ್ವಿ, ಬೆಂಕಿ, ಪರಿಶುದ್ಧಿ, ಗ್ರೀಷ್ಮಋತು, ಬ್ರಾಹ್ಮಣ, ಆಷಾಡ ಮಾಸ, ಕುಂದುಯಿಲ್ಲದ್ದು, ಶುಭ್ರ (ನಯನ) ಮುಖ್ಯಾ, ಕಟ್ಟಿಗೆ, ಸುಧೆ – ೧೨

ಶುಕ್ಲ– ಇಂದ್ರಾಯ, ಶುಭ್ರ, ನಯನ, ಪಟುಭಟ, ದೊಡ್ಡಿತಾದ್ದು, ಶುಕ್ಲಪಕ್ಷ – ೬

ಶೃಂಗ–ದೊರೆ, ತೋರವಾದದ್ದು, ಪರ್ವತಶಿಖರ, ವೃಕ್ಷ, ಆನೆ, ಗೋವುಕೊಂಬು–೬

ಶುಂಡಾಲ – ಆನೆಯಸೊಂಡಿಲು, ಕಪ್ಪೆ – ೨

ಶ್ರೋತ್ರಂ – ಕಿವಿ, ನದಿ, ಕ್ರೂರ, ಕರಿಕರಾಗ್ರ – ೪

ಶಂಬ – ವಜ್ರಾಯುಧ, ಹಡಗು, ನಾವೆ – ೩

ಶಂಬು – ಈಶ್ವರ, ಬ್ರಹ್ಮ, ಪೂಜ್ಯ, ಯುಧಿಷ್ಠಿರ, ಕ್ಷೇಮ – ೫

—ಷ—

ಷಂಡ – ಸಮೂಹ, ನಪುಂಸಕ, ಜೊತೆ – ೩

ಸತ್ವ – ಪ್ರಾಣಿಗಳ ಸಮೂಹ, ಕೂಡಿದ ಸಾಮಾರ್ಥ್ಯ, ಪಾರ್ವತಿ, ಕುದುರೆ, ಧಾತು, ವಾದ, ಕಲ್ಲು, ಮೇಘ – ೮

ಸಾರಂಗ – ನೇತ್ರಗಳು, ಮೋಡ, ಕುದುರೆ, ಕೊಂಬುತುಂಬಿ, ಮನೋಹರ, ಆನೆ, ಚಾತಕಪಕ್ಷಿ, ಜಿಂಕೆ – ೮

ಸುರಭಿ – ಸರಸ್ವತಿ, ವಸಂತಋತು, ಹೆಂಡ, ಮನ್ಮಥ, ಕಾಮಧೇನು, ಮರುಗ, ಸುಂದರ, ಅರಣ್ಯ, ಹೂ, ಪ್ರೌಢ, ಸುವಾಸನೆ, ದೊಡ್ಡವರು – ೧೨

ಸೂತ – ರಥದ ಮೇಲೆ ಯುದ್ಧ ಮಾಡುವವ, ಪಾದರಸ, ಭಟ್ಟರು, ಯುದ್ಧ, ಸಾರಥಿ, ಹುಟ್ಟುವಿಕೆ, ಪರಾಕ್ರಮ, ಸೂತ–ಪುರಾಣಿಕ, ಅತಿಶಯ, ನಾವಿಕನಿಗು – ೧೦

ಸಾರಸ – ಗಾವಟೆಯೆಂಬ ಮರಕ್ಕೂ, ಸಾರಸಪಕ್ಷಿಗೂ, ಕಮಲ, ಚಂದ್ರ, ಸಮೀಪ, ಚಾತುರ್ಯಉಳ್ಳವ, ಆಪರ್ವತ, ಹಂಸಪಕ್ಷಿ – ೮

ಸುಮುಖ – ಗರುಡ, ನಗೆ, ಪಂಡಿತ, ಶಿಶು, ರಾಜವೀಥಿ – ೫

ಸೂಚಕ – ಮಾರ್ಜಾಲ, ಅಡವಿ, ಕವಿ, ಈಶ್ವರ, ಹೇಳುವವರು, ತೋರಣಸಮೂಹ, ಶ್ವಾನ – ೭

ಸೈಂದವ – ಉಪ್ಪು, ಪೂರ್ಣಚಂದ್ರ, ಸಮುದ್ರದಲ್ಲಿ ಹುಟ್ಟಿದ ವಿಷ, ಕುದುರೆ, ಗಿಣಿ – ೫

ಸ್ವೈರಾ – ಲಕ್ಷಣ, ಇಚ್ಛೆ, ಆಲಸ್ಯ – ೩

ಸ್ವರ್ಗ – ಸುರಲೋಕ, ಆನಾದಿ, ಸ್ವರ್ಗಸುಖ, ಸ್ಥಿತಿ, ನಿರ್ಮಾಣ – ೫

ಸೋಮ – ಚಂದ್ರ, ಪಚ್ಚೆಕರ್ಪೂರ, ರಾಜ, ತಪಸ್ವಿ, ಕ್ರುತಯುಗ, ಗಾಳಿ, ಕಾಲ, ಕುಬೇರ, ಈಶ್ವರ, ಸುಧೆ, ಅಮೃತಬಳ್ಳಿ – ೧೧

ಸೌಧ – ನಿಶ್ಚಯ, ಸುಧೆ, ಕೆಸರು, ರಾಜಸದನ, ಶುಭ್ರ, ಹುಲ್ಲು – ೬

ಸೌರಭ್ಯ – ಸುವಾಸನೆ, ಗೋವು, ಪರಿಮಳ – ೩

ಸಂತಾನ – ಕಲ್ಪವೃಕ್ಷ, ಬಾಲಕರು, ದೇಹ, ಸಮೂಹ – ೪

ಸಂಗರ – ಮಾಂಸ, ಯುದ್ಧ, ಅಪವಾದಿ, ದುಃಖ, ರಾತ್ರಿ, ಹಗಲು, ಶಮಿಕ್ಯಾ– ೭

ಸಂವಿರ್ – ತಿಳುವಳಿಕೆ, ಸಂಕೇತ, ಯುದ್ಧ – ೩

-ಹ-

ಹರ – ಕುದುರೆ, ಚಂದ್ರ, ಲಿಂಬೆ, ಋಷಿ, ನೇತ್ರ, ಕಿರಣ, ಪರಮಾತ್ಮ, ಬ್ರಹ್ಮ, ಮುಖ್ಯವಾದ್ದು, ನಿರ್ಮಲ, ವಿಷ್ಣು, ಈಶ್ವರ, ಸೂರ್ಯ, ಕಮಲ – ೧೪

ಹರಿ – ಇಂದ್ರ, ಯಮ, ಅಗ್ನಿ, ವಾಯು, ಸೂರ್ಯ, ಚಂದ್ರ, ಕುದ್ರೆ, ಹಾವು, ಯಜ್ಞ, ನೀರು, ಮಂಗ, ಗಿಳಿ, ಕಪ್ಪೆ, ಶರಧಿ, ಸಿಂಹ, ಬೃಹಸ್ಪತಿ, ವಿಷ್ಣು, ಕಿರಣ, ಬಂಡಿ, ಬಿಳಿ, ಚಿನ್ನ, ಕಪೋತ, ಸಮೂಹ – ೨೩.

ಹಸ್ತ – ಬಿದಿರು, ಆನೆ, ಹಸ್ತಾನಕ್ಷತ್ರ, ಬೆರಳುಳ್ಳಕೈ – ೪

ಹಿಮ – ಹಡಗು, ಪರ್ವತ, ಪಟ್ಟಣ, ನೀರು, ಮಂಜು, ಕರ್ಪೂರ – ೬

ಕ್ಷೀರ – ಹಾಲು, ನೀರು, ಸಮೀಪದ ಮೇಘ – ೩

ಕ್ಷೇಡಾ – ಬೆದ್ರಸೀಬು, ಸಿಂಹನಾದ – ೨

ನಾನಾರ್ಥ ನಿಘಂಟು ಸುಮಾರು ಇಲ್ಲಿಗೆ ಮುಗಿದುದು.

ತಾರೀಕು – ೧೮ನೇ ಜುಲೈ – ೧೮೯೩ನೆ ಯಿಸವಿಯಲ್ಲಿ ಸಮಾಪ್ತಿ

ಕಡಂಗೊಡ್ಲ – ಸಂಣಕೃಷ್ಣಭಟ್ಟರ ಮಗ ಸುಬ್ಬಣ್ಣಭಟ್ಟನ ಸ್ವಾಹಬರಹಾ ಶ್ರೀ ಶ್ರೀ ಶ್ರೀ

- ೩ -

ತತ್ವ ವಿಚಾರ ನಿರ್ಣಯ

೧ ಆತ್ಮ – ಏಕ

೨ ಬ್ರಹ್ಮಾಂಡ – ಪಿಂಡಾಂಡ....ದ್ವಿವಿಧ.
೨ ಪಾಪ – ಪುಣ್ಯ....ದ್ವಿವಿಧ.
೨ ಪ್ರಕೃತಿ – ಪುರುಷ....ದ್ವಿವಿಧ.
೨ ಜೀವ – ಪರಮ....ದ್ವಿವಿಧ.
೨ ಸ್ವರ್ಗ – ನರಕ....ದ್ವಿವಿಧ.
೨ ಸಗುಣ – ನಿರ್ಗುಣ....ದ್ವಿವಿಧ.
೨ ಸವಿಕಲ್ಪ – ನಿರ್ವಿಕಲ್ಪ....ದ್ವಿವಿಧ.

೩ ವಿಶ್ವ, ತೈಜಸ, ಪ್ರಾಜ್ಞ, ಜೀವತ್ರಯ.
೩ ಜಾಗ್ರ, ಸ್ವಪ್ನ, ಸುಷುಪ್ತಿ, ಅವಸ್ಥಾತ್ರಯ.
೩ ನೇತ್ರ, ಕಂಠ, ಹೃದಯ, ಸ್ಥಾನತ್ರಯ.
೩ ಮನಸಾ, ವಾಚ, ಕರ್ಮ, ಕರಣತ್ರಯ.
೩ ಆಗಾಮಿ, ಸಂಚಿತ, ಪ್ರಾರಬ್ಧ.
೩ ಧಾರೇಶಣ, ಧನೇಶಣ, ಪುತ್ರೇಶಣ, ಈಶಣತ್ರಯಾ.
೩ ಸೃಷ್ಟಿ, ಸ್ಥಿತಿ, ಲಯ – ವರ್ಗತ್ರಯ.
೩ ಜ್ಞಾನ ವಿಕೃತಿ, ಮೋಹಗ ವಿಕೃತಿ, ವರ್ತಮಾನ ವಿಕೃತಿ, ವಿಕೃತಿತ್ರಯ.
೩ ಚಿದಾಭಾಸ, ಸ್ವಪ್ನಕಲ್ಪಿತ, ಅವಜ್ಞಿಂನನೆಂಕ ಜೀವನ, ಹೆಸರು.
೩ ತಾಮಸಹಂಕಾರ, ರಜೋಹಂಕಾರ, ಸಾತ್ವಿಕಹಂಕಾರ – ಹಂಕಾರತ್ರಯ.
೩ ವಾತ ಪಿತ್ಥ, ಕಫ, ದೋಷತ್ರಯ.
೩ ಜೀವಾತ್ಮ, ಪರಮಾತ್ಮ, ಅಂತರಾತ್ಮ – ಆತ್ಮತ್ರಯ.
೩ ಅಂತಸಂಗ, ಬಹಿಸಂಗ, ಆತ್ಮಸ್ಸಂಗ – ಸಂಗತ್ರಯ.
೩ ಸತ್ವ, ರಜ, ತಮ, ಗುಣತ್ರಯ.
೩ ಭೂತಪ್ರತಿಬಂಧ, ವರ್ತಮಾನ ಪ್ರತಿಬಂಧ, ಭಾವಿಪ್ರತಿಬಂಧ – ಪ್ರತಿಬಂಧ ತ್ರಯ.
೩ ಪ್ರಭುಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿ – ಶಕ್ತಿತ್ರಯ.

೩ ತ್ರಯ, ಸ್ಥಾನ, ವೃಧ್ಧಿ – ವರ್ಗತ್ರಯ.

೩ ಗೌಡಿರೀತಿ, ವೈದರ್ಭಿರೀತಿ, ಪಾಂಚಾಲಿ ರೀತಿ – ರೀತಿತ್ರಯ.

೩ ಜ್ಞಾತೃ, ಜ್ಞಾತ, ಜ್ಞೇಯ, ತ್ರಿಪುಟಿತ್ಯ

೩ ಶಷಾ, ವೃಷ, ಹಯ – ತ್ರಿವಿಧ ಪರಿಮಾಣ ಪುರುಷರು.

೩ ಸ್ವರ್ಗ, ಮರ್ತ್ಯ, ಪಾತಾಳ – ಭುವನತ್ರೈ.

೩ ಕಾರ್ಶ್ಯ, ಸಂತಾಪನ, ಜಾಗರಣ – ಅವಸ್ಥಾತ್ರಯ.

೩ ಬಾಹ್ಯ, ಅಂತ್ಯ, ಮಧ್ಯ – ಲಕ್ಷತ್ರಯ.

೩ ಊನ್ಮಿನಿ, ಮನೋನ್ಮನಿ, ಸಹಾಜೆ – ಅವಸ್ಥಾತ್ರಯ.

೩ ಪತಿ, ಪಶು, ಪಾಷ – ತ್ರಿಪದ ಸಿದ್ಧಾಂತ ಶಾಸ್ತ್ರ.

೩ ಇಡಾ, ಪಿಂಗಳ, ಸುಶುಮ್ನ – ನಾಡಿತ್ರಯ.

೩ ಉತ್ತಮ, ಮಧ್ಯಮ, ಅಧಮ, ಬೇದತ್ರಯ.

೩ ಆತ್ಮಗರ್ಭ, ಶಿವಗರ್ಭ, ಶಕ್ತಿಗರ್ಭ–ಗರ್ಭತ್ರಯ.

೩ ಆಶ್ವಲಾಯನೀಯ, ಭೋದಾಯನೀಯ, ಆಪಸ್ತಂಭಿನೀಯ – ಸೂತ್ರತ್ರಯ.

೩ ಆಪಾಹನ, ಅರ್ಚನೆ, ನಿವೇದನ – ತ್ರಿವಿಧೋಪಚಾರ.

೩ ಸದಾಚಾರ, ನಿಯತಾಚಾರ, ಗುಣಾಚಾರ – ಆಚಾರತ್ರಯ.

೩ ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ – ಲಿಂಗತ್ರಯ.

೩ ಮೂಲಬಂಧ, ಉಡ್ಯಾಣಬಂಧ, ಜಾಲಾಂಧರ ಬಂಧವೆಂಬ ಬಂಧತ್ರಯ.

೩ ಉದ್ದೇಶಣ, ಪರೀಕ್ಷೆ, ಲಕ್ಷಣ – ಭೋಧತ್ರಯಗಳು.

೩ ಸ್ವಗತಭೇದ, ಸ್ವಜಾತಿಯಭೇದ, ವಿಜಾತೀಯಭೇದ – ಭೇದತ್ರಯ.

೩ ಏಕಮೇವಾದ್ವಿತೀಯ, ಬ್ರಹ್ಮ ಅದ್ವಿತೀಯಾ, ಏಕಂಮೇವಾ, – ಎಂಬ ಪದ ತ್ರಯ.

೩ ಆವರಣ, ವಿಕ್ಷೇಪ, ಚಿತ್ – ಶಕ್ತಿತ್ರ್ಯ

೩ ಜೀವಬ್ರಹ್ಮೈಕ್ಯ, ಅವದಾರಣೆ, ದ್ವಯಿತ ನಿಶೇದವೆಂಬ – ಅರ್ಥತ್ರಯ.

೩ ವ್ಯವಹಾರಿಕಸತ್ತೆ, ಪ್ರತಿಭಾನೇಕಸತ್ತೆ, ಪಾರಮಾರ್ಥಿಕಸತ್ತೆ – ಸತ್ತಾತ್ರಯ.

೩ ಕಾಲಪರಿಚ್ಚೇದ, ದೇಶಪರಿಚ್ಚೇದ, ವಸ್ತುಪರಿಚ್ಚೇದ ಎಂಬ ಪರಿಚ್ಚೇದತ್ರಯ.

೩ ವಿರಾಟ್ಪುರುಷ, ಹಿರಣ್ಯಗರ್ಭ, ಅಂತರ್ಯಾಮಿ – ಈಶ್ವರನ ತ್ರಿಭೇದ.

೩ ಶ್ರುತಿ ಸಂಬಂಧಿ ಜ್ಞಾನ, ಯುಕ್ತಿಸಂಬಂಧಿಜ್ಞಾನ, ಲೋಕ ಸಂಬಂಧಿ ಜ್ಞಾನವೆಂಬ – ಜ್ಞಾನತ್ರಯ.

೩ ಆವಛಿಂನೋಪಾರಿ, ಪ್ರತಿಬಿಂಬೋಪಾದಿ, ಆದ್ಯಾಸೋಪಾದಿ – ಉಪಾಧಿತ್ರ್ಯ

೩ ಸೂರ್ಯ, ಚಂದ್ರ, ಅಗ್ನಿ – ಮಂಡಲತ್ರಯ.

೩ ಸ್ಥೂಲ, ಸೂಕ್ಷ್ಮ, ಕಾರಣ – ತನುತ್ರಯ.

೩ ಅಸಂಭಾವನೆ, ಸಂಶಯಭಾವನೆ, ವಿಪರೀತಭಾವನೆ – ವಿಘ್ನತ್ರಯ.

೩ ಕಾರಣ, ಸ್ವರೂಪ, ಕಾರ್ಯ – ಲಿಂಗತ್ರಯ.

೩ ಸಾಂಖ್ಯಾಸೂತ್ರ, ಯೋಗಸೂತ್ರ, ಬ್ರಹ್ಮಸೂತ್ರವೆಂಬ ಆಧ್ಯಾತ್ಮ – ಶಾಸ್ತ್ರತ್ರಯ.

೩ ಪಾಶುಪಥ, ಕಾಪಾಲಿಕ, ಮಹವ್ರತವೆಂಬ ಶಾಸ್ತ್ರತ್ರಯ.

೩ ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ – ತಾಪತ್ರಯ,

೩ ಪ್ರಾಪ್ಯ, ಪ್ರಾಪಕ, ಪ್ರಾಪ್ತ – ಗಣತ್ರಯ.

೪ ಮನಸ್ಸು, ಬುದ್ಧಿ, ಚಿತ್ತಹಂಕಾರ, ಅಂತಃಕರಣ –ಚತುಷ್ಠಯ.

೪ ಅಂಗ, ಪ್ರತ್ಯಂಗ, ಸಂಗಾಂಗ, ಉಪಾಂಗವೆಂಬ – ಚತುರಂಗಗಳು.

೪ ಶೀತ, ಉಷ್ಣ, ಮೃದು, ಕಠಿಣ.

೪ ಅಂಡಜ, ಉದ್ಭೀಜ, ಸ್ವೇದಜ, ಜರಾಯುಜವೆಂಬ– ಚತುರ ಪ್ರಾಣಿಗಳು.

೪ ಸಾರೂಪ್ಯ, ಸಾಲೋಕ್ಯ, ಸಾಮೀಪ್ಯ, ಸಾಯುಜ್ಯವೆಂಬ ಚತುರ್ವಿಧ ಮುಕ್ತಿ.

೪ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಫಲ ಚತುಷ್ಠಯ.

೪ ಬಹುದ್ವ, ವೈನಾವಿಕ, ಕೃಪಣಕ, ಕಪಾಲಿಕ – ಚತುರ್ವಿಧಕ ಪಾಲಿಕರು.

೪ ಜಾತಿಚಾಂಡಾಲ, ಕರ್ಮಚಾಂಡಾಲ, ವೃತ್ತಿಚಾಂಡಾಲ, ಸಂಕಲಿತ ಚಾಂಡಾಲರೆಂಬ ಚತುವಿಶದ ಚಾಂಡಾಲರು.

೪ ಸಾಮ, ದಾನ, ದಂಡ, ಭೇದ – ಚತ್ರುಪಾಯಗಳು.

೪ ಹಸ್ತಿ, ಅಶ್ವ, ಪದಾತಿ, ರಥ – ಚತುರಂಗ ಬಲ.

೪ ಧಿರೋಧತ್ತ, ಧೀರಲಲಿತ, ಧೀರಶಾಂತ, ಧೀರೋದ್ಧತರೆಂಬ – ಚತುರ್ವಿಧ ಮಹಾ ನಾಯಕರು.

೪ ಅನುಕೂಲ, ದಕ್ಷಿಣ, ದ್ರುಷ್ಟ, ಶಟರು ಎಂಬ–ಚತುರ್ವಿಧಶೃಂಗಾರ ನಾಯಕರು.

೪ ವಿಟ, ವಿದೂಷಕ, ವೀಟಮರ್ದನ, ನಾಗಲೀಕರೆಂಬ ಚತುರ್ವಿಧ ಭೋಗಸುಖರು

೪ ಹಸ್ತಿನಿ, ಚಿತ್ತಿನಿ, ಪದ್ಮಿನಿ, ಶಂಖಿನಿ ರೆಂಬ–ಚುತುರ್ನಿಧ ಜಾತಿ – ಸ್ತ್ರೀಯರುಗಳು.

೪ ಅಭಿಸಾರಿಕೆ, ಚತುರಿಕೆ, ಸಹಸಂಚಾರಿಕೆ, ದೂತಿ ಎಂಬ ಚತುರ್ವಿಧ ದೂತಿಯರು.

೪ ಅಚ್ಚಮೋಹ, ವಿಭವಮೋಹ, ಕರುಣಮೋಹ, ನಿಜಮೋಹ ಎಂಬ ಮೋಹ ಚತುಷ್ಕಲು.

೪ ಪೂರ್ವಾನುರಾಗ, ಮಾನಾಖ್ಯ, ಪ್ರವಾಸ, ಕರುಣಾತ್ಮಕ ಎಂಬ ವಿಯೋಗ ಚತುಷ್ಟವು.

೪ ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರ, ವೆಂಬ ವರ್ಣಚತುಷ್ಟಯ.

೪ ಬಹುದ್ವ, ವೈನಾಸಿಕ, ಕ್ಷಪಣಕ, ಕಾಪಾಲಿಕರೆಂಬ ಚತುರ್ವಿಧ ನಿಂದ್ಯಕರು.

೪ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದವೆಂಬ ವೇದ ಚತುಷ್ಟಯ.

೪ ಆಯುರ್ವೇದ, ಗಾಂಧರ್ವವೇದ, ಅಥರ್ವೇದ, ಧನುರ್ವೇಧ ವೆಂಬ ಉಪವೇದ ಚತುಷ್ಟಯ.

೪ ಕಂಮೆ, ಕಂನಡಿಗ, ಆಂಧ್ರ, ದ್ರಾವಿಡವೆಂಬ ಜಾತಿ ಚುತುಷ್ಟಯ.

೪ ವಿಷಯ, ಸಂಬಂಧ, ಪ್ರಯೋಜನ, ಅಧಿಕಾರಿಗಳು – ಅನುಬಂಧ ಚತುಷ್ಟಯ.

೪ ವೇದಾಂತಶ್ರವಣ, ಮನನ, ನಿಧಿಧ್ಯಾಸನ, ಧರ್ಮಜಿಜ್ಞಾಸನವೆಂಬ ಸಾಧನ ಚತುಷ್ಟಯ.

೪ ನಿತ್ಯಾನಿತ್ಯ ವಸ್ತುವಿವೇಕ, ಇಹಮೃತಾರ್ಥಫಲ ಭೋಗವಿರಾಗ, ಸಮಾಧಿಶಟ್ಕ ಸಂಪತ್ತಿ, ಮುಮುಕ್ಷುತ್ವ ಸಾಧನ ಚತುಷ್ಟಯ.

೪ ಪಾರಮಾರ್ಥಿಕ, ವ್ಯವಹಾರಿಕ, ಪ್ರತಿಭಾಸಿಕ, ತುವ್ವ – ಪ್ರಕಾರ ಚತುಷ್ಟಯ.

೪ ಜೀವ, ಈಶ್ವರ, ಕುಲಸ್ಥ, ಬಹ್ಮ ವೆಂಬ ಚತುರ್ವಿಧ ಭೇದ.

೪ ಪ್ರಾಗ್ಭಾವ, ಪ್ರಧ್ವಂಸಾಭಾವ, ಅನ್ಯೋನ್ಯಭಾವ, ಅತ್ಯಂತಭಾವ – ಅಭಾವ ಚತುಷ್ಟಯ.

೪ ವೃತ್ತಿ, ಪರಿಣಾಮ, ಆರಂಭ, ವಿವರ್ತವೆಂದು ಚತುರ್ವಿಧ ಕಾರ್ಯ ಕಲ್ಪನೆ.

೪ ಪಟಕುವಿಭಾವ, ಕ್ಷಿರದದ್ಯಾಕಾರ, ತಂತುಪಟನ್ಯಾಯ, ರಜ್ಜು ಸರ್ಪತೋರ್ಕೆ ಎಂಬದುಷ್ಟಾತ ಚತುಷ್ಟಯ.

೪ ಪ್ರಜ್ಞಾನಂ ಬ್ರಹ್ಮ, ಅಹಂಬ್ರಹ್ಮಾಸ್ಮಿ, ತತ್ವಮಸಿ, ಅಯಮಾತ್ಮವೆಂಬ ಬ್ರಹ್ಮವಾಕ್ಯ ಚತುಷ್ಟಯ.

೪ ಮೈತ್ರಿ, ಕರುಣೆ, ಮುದಿತೆ, ಪ್ರೇಕ್ಷೆ ಎಂಬ ಸದ್ಗುಣ ಚತುಷ್ಟಯ.

೪ ಗಾರುಡ, ದಕ್ಷಿಣ, ವಾಮ, ಭೂತಂಗಳು ಚತುಷ್ಪಯ ತಂತ್ರ

೪ ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತವೆಂಬ ಬ್ರಹ್ಮ ಚತುಷ್ಟಯ.

೪ ಶ್ವೆತ, ರಕ್ತ, ಶ್ಯಾಮ, ಪೀತ, ವರ್ಣ ಚತುಷ್ಪಯ.

೪ ಗಾರುಢ, ಮಾರಣ, ಮಂತ್ರೌಷದ, ವಾದ ವೆಂಬ ಪ್ರಯೋಗ ಚತುಷ್ಯಯ.

೪ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯವೆಂಬ ವಿಭೂತಿ ಚತುಷ್ಯಯ.

೪ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ ಸಂನ್ಯಾಸಿ ಎಂಬ ಚತುರಾಶ್ರಮ.

೪ ವಿಕ್ಷೇಪ, ಗತಾಗತ, ಸಂಕ್ಲಿಷ್ಪ, ಸ್ಪಲೀನವೆಂಬ ಮನೋವೃತ್ತಿ ಚತುಷ್ಪಯ.

೪ ಮನ, ಬುದ್ಧಿ, ಚಿತ್ರ, ಹಂಕಾರವೆಂಬ ಅಂತಃಕರಣ – ಚತುಷ್ಟಯ.

೪ ಅಂಗ ಪ್ರತ್ಯಂಗ, ಸಂಗಾಂಗ, ಉಪಾಂಗವೆಂಬ ಅಂಗ – ಚತುಷ್ಪಯ.

೪ ನೀಲ, ನಿಷಧ, ಮಾಲ್ಯ, ಗಂಧಮಾಧನವೆಂಬ ಗಿರಿ ಚತುಷ್ಯಯ.

೪ ಶೀತ, ಉಷ್ಣ, ಮೃದು, ಕಠಿಣವೆಂಬ ಧಾತು ಚತುಷ್ಪಯ.

೪ ಮಂತ್ರ, ಹಟ, ಲಯ, ರಾಜವೆಂಬ ಚತುರ್ವಿಧ ಯೋಗ.

೫ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ವೆಂಬ ಪಂಚಕೋಶಗಳು.

೫ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವೆಂಬ – ಪಂಚ ಪ್ರಾಣಗಳು.

೫ ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ವೆಂಬ ಪಂಚ ಉಪವಾಯು.

೫ ಶೋತ್ರ, ನೇತ್ರ, ತ್ವಕ್, ಜಿಹ್ವಾ, ಪ್ರಾಣ, ಪಂಚಜ್ಞಾನೇಂದ್ರಿಯಗಳು.

೫ ವಾಕ್, ಪಾಣಿ, ಪಾದ, ಪಾಯು, ಪಸ್ತ ವೆಂಬ ಪಂಚ ಕರ್ಮೇಂದ್ರಿಯಗಳು.

೫ ಪರಾಶಕ್ತಿ, ಆದಿಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ ಎಂಬ ಪಂಚಶಕ್ತಿಗಳು.

೫ ಅವಿದ್ಯೆ, ಅಸ್ಮೃತಿ, ರಾಗ, ದ್ವೇಷ, ಅಭಿನಿವೇಶ ವೆಂಬ ಪಂಚಕ್ಲೇಶಗಳು.

೫ ಉದರಾಗ್ನಿ, ಮಂದಾಗ್ನಿ, ಕಾಮಾಗ್ನಿ, ಶೋಕಾಗ್ನಿ, ವಡಭಾಗ್ನಿ ಎಂಬ ಪಂಚಾಗ್ನಿ.

೫ ಬ್ರಹ್ಮ, ವಿಷ್ಣು, ಈಶ್ವರ, ರುದ್ರ, ಸದಾಶಿವ ರೆಂಬ ಪಂಚಬ್ರಹ್ಮರು.

೫ ಅಂಡಜ, ಸ್ವೇದಜ, ಉದ್ಭಿಜ, ಜರಾಯುಜ, ಮಂತ್ರಜವೆಂಬ ಪಂಚ ಯೋನಿಭೇದ.

೫ ಬ್ರಹ್ಮತ್ಯ, ಸುರಪಾನ, ಸ್ವರ್ಣಸ್ಥೆಯ, ಗುರುತಲ್ಪಗಮನ, ತತ್ಸಂಯೋಗಿ, ಎಂಬುದೇ ಪಂಚ ಮಹಾಪಾತುಕ.

೫ ಮಂದಾರ, ಪಾರಿಜಾತ, ಸಂತಾನ, ಕಲ್ಪ, ಹರಿಚಂದನ ಎಂಬ ಪ್ರಸಿದ್ಧ ಪಂಚಕಲ್ಪವೃಕ್ಷ.

೫ ಸ್ವಯಂಭುಲಿಂಗ, ಬಾಣಲಿಂಗ, ಚಲಲಿಂಗ, ಸಂಕೀರ್ಣ ಲಿಂಗ, ಪ್ರಾಣಲಿಂಗ ವೆಂಬ ಪಂಚಲಿಂಗಗಳು.

೫ ಆತ್ಮಶುದ್ಧಿ, ಸ್ಥಾನಶುದ್ಧಿ, ದ್ರವ್ಯಶುದ್ಧಿ, ಲಿಂಗಶುದ್ಧಿ, ಮಂತ್ರಶುದ್ಧಿಯೆಂಬ ಪಂಚಶುದ್ಧಿಗಳು.

೫ ಪೃಥುವ್ಯಾದಿ ಪಂಚ ಭೌತಿಕಗಳು.

೫ ಜಾತಿ ಸೂತಕ, ಜನಸೂತಕ, ಪ್ರೇತಸೂತಕ, ಉಚಿಷ್ಟಸೂತಕ, ಪ್ರಜಾಸೂತಕ ಎಂಬುದೇ ಪಂಚಸೂತಕ.

೫ ಅಂಗಾಚಾರ, ಸದಾಚಾರ, ಭಕ್ತಾಚಾರ, ಶಿವಾಚಾರ, ಗಣಾಚಾರ ವೆಂಬ ಪಂಚಆಚಾರ.

೫ ಸೂರ್ಯಾಗ್ನಿ, ಜಠರಾಗ್ನಿ, ವೈದಿಕಾಗ್ನಿ, ಲೌಕಿಕಾಗ್ನಿ, ಜ್ಞಾನಾಗ್ನಿ ಎಂಬ ಪಂಚಾಗ್ನಿ.

೫ ನಿತ್ಯ, ನೈಮಿತ್ಯ, ಪ್ರಾಯಶ್ಚಿತ್ರ, ಕಾಮ್ಯ, ನಿರ್ಮಲವೆಂಬ ಪಂಚವಿಧ ಕರ್ಮ.

೫ ದಿವ್ಯ ಸ್ನಾನ, ವರುಣಸ್ನಾನ, ವಾಯುವ್ಯಸ್ನಾನ, ಮಾನಸಸ್ನಾನ, ಆಗ್ನೇಯಸ್ನಾನ ವೆಂಬ ಪಂಚಸ್ನಾನಗಳು.

೫ ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣ ಎಂಬುದೆ ಆತ್ಮನ ಪಂಚ ಸ್ವರೂಪ.

೫ ಜಾಗ್ರತ್, ಸ್ವಪ್ನ, ಸುಷುಪ್ತಿ, ತುರ್ಯಾ, ತುರ್ಯಾತೀತ ಎಂದು ಪಂಚಾವಸ್ಥೆಗಳು.

೫ ಸರ್ಗ, ಮನ್ವಂತರ, ವಂಶ, ಪ್ರತಿಸರ್ಗ, ವಂಶಾನುಚರಿತ ವೆಂಬುದೇ ಪಂಚಲಕ್ಷಣ.

೫ ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಸಂಗತಿ ಎಂಬ ಪಂಚಾವಯಗಳು.

೫ ಪದ, ಪದಾರ್ಥ, ವ್ಯಾಕ್ಯಯೋಚನೆ, ಪ್ರಶ್ನೆ, ಪರಿಹಾರ ವೆಂಬ ವಾಕ್ಯಾನ ಪಂಚಲಕ್ಷಣ.

೫ ವಿಶೇಷಣ, ವಿಶೇಷ್ಯ, ಕರ್ತು, ಕರ್ಮ, ಕ್ರಿಯೆ, ಎಂಬ ಅನ್ವಯ ಪಂಚಲಕ್ಷಣ.

೫ ಕರ್ಮಿ, ಮುಮುಕ್ಷು, ಅಭ್ಯಾಸಿ, ಅನುಭವಿ, ಆರೂಢರೆಂದು ಪಂಚವಿಧಾಧಿಕಾರಿಗಳು.

೫ ಕರ್ತು ಸಾದಾಕ್ಯ, ಕರ್ಮಸಾದಾಕ್ಯ, ಮೂರ್ತಸಾದಾಕ್ಯ, ಅಮೂರ್ತಸಾದಾಕ್ಯ, ಶಿವಸಾದಾಕ್ಯ ವೆಂಬ ಪಂಚಮೂರ್ತಿಭೇದ.

೫ ಮಾಂತ್ರಿಕ, ದೈವಿಕ, ನೈಸರ್ಗಿಕ, ಯೌಕ್ತಿಕ, ವಾಸ್ತವಿಕಗಳೆಂಬ ಪಂಚಭೇದಸಾಧಕ.

೫ ಸನಕ, ಸನಂದನ, ಸನಾತನ, ಸನತ್ಸುಜಾತ, ಸನತ್ಕುಮಾರರೆಂಬ ಪಂಚ ಮಹಾಋಷಿಗಳು.

೫ ಅರವಿಂದ, ಅಶೋಕ, ಚೂತ, ಮಲ್ಲಿಗೆ, ನೈದಿಲೆ ಎಂಬ ಪಂಚಬಾಣ.

೫ ಉನ್ಮಾದನ, ಮದನ, ಮೋಹನ, ಸಂತಾಪನ, ವಶೀಕರಣ ವೆಂಬ ಪಂಚಮಂತ್ರ ಬಾಣಗಳು.

೫ ಕೊಂಬು, ಹಲಿಗೆ, ಶಂಖ, ಭೇರಿ, ಜೌಕಟೆ ಎಂಬ ಪಂಚವಾದ್ಯ.

೫ ರಾಜಧಾನಿ, ವಣಿಗ್ದಾನಿ, ಜನದಾನಿ, ರಕ್ಷಕದಾನಿ, ಕಿರಾತದಾನಿಗಳೆಂಬ ಪಂಚದಾನಿಗಳು.

೫ ಭೇದತಂತ್ರ, ಪರೀಕ್ಷಾ ತಂತ್ರ, ವಿಶ್ವಾಸತಂತ್ರ, ವಂಚನಾತಂತ್ರ, ಮಿತ್ರಕಾರ್ಯಾತಂತ್ರವೆಂಬ ಪಂಚತಂತ್ರಗಳು.

೫ ಗದ್ಯ, ಪದ್ಯ, ಚಂಪೂಕಾವ್ಯ, ಗೀತ ಪ್ರಬಂಧ, ಕ್ಷುದ್ರ ಪ್ರಬಂಧವೆಂಬ ಪಂಚಕಾವ್ಯ.

೫. ಸೃಷ್ಟಿ, ಸ್ಥಿತಿ, ಸಂಹಾರ, ಶಿರೋಭಾದ, ಅನುಗ್ರಹವೆಂಬುದೇ ಪಂಚಕೃತ್ಯ.

೬ ಪಾದ, ಹಸ್ತ, ಮುಖ, ಪ್ರಾಣ, ನೇತ್ರ, ಶ್ರೋತ್ರ ವೆಂಬ ಷಡಂಗ.

೬ ಶಿಕ್ಷೆ, ವ್ಯಾಕರಣ, ಜ್ಯೋತಿಷ, ಛಂದಸ್ಸು, ಕಲ್ಪ, ನಿರುಕ್ತಿಗಳೆಂಬ ವೇದ ಷಡಂಗ.

೬ ಯಜನ, ಯಾಜನ, ಅಧ್ಯಯನ, ಅದ್ಯಾಪನ, ದಾನ, ಪತಿಗ್ರಹಗಳೆಂಬ ಷಟ್ಕರ್ಮ.

೬ ಶಮ, ದಮ, ತಿತೀಕ್ಷೆ, ಸಮಾಧಾನ, ಶ್ರದ್ಧಾ, ಶಾಂತಿ ಭಕ್ತಿ ಗಳೆಂಬವೇ ಸಮಾಧಿಷಟ್ಸಪ್ತತಿ.

೬ ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹುದ್ರಿ, ವಿಶುದ್ಧಿ, ಆಗ್ನೇಯವೆಂಬ ಷಟ್ಚಕ್ರ

೬ ಪೀತ, ರಕ್ತ, ಶ್ವೇತ, ನೀಲ, ಸ್ಪಟಿಕ, ಮಾಣಿಕ್ಯವೆಂಬ ಷಡ್‌ವರ್ಣಗಳು.

೬ ಅನ್ರುತ, ಅಸ್ಥಿರವಾಕ್ಯ, ವಂಚನೆ, ಪಂಕ್ತಿಭೇದ, ಉದಾಸೀನತೆ, ನಿರ್ದಯವೆಂಬ ಷಡ್‌ದೋಷ.

೬ ಖನನಾ, ದಹನ ಶೋಧನ, ಸಂಪ್ರೋಕ್ಷಣ, ಮರ್ಧನ, ಅನುಲೇಪನ ವೆಂಬ ಷಡ್ಕರ್ಮ.

೬ ಶ್ರದ್ಧಾಭಕ್ತಿ, ಅವದಾರಭಕ್ತಿ, ಅನುಭವ ಭಕ್ತಿ, ಆನಂದಭಕ್ತಿ, ನಿಷ್ಠಾಭಕ್ತಿ, ಸಮರಸಭಕ್ತಿಯೆಂಬ ಷಡ್ವಿದ ಭಕ್ತಿ.

೬ ಪ್ರಾಣ, ಜಿಂಹೆ, ನೇತ್ರ, ತ್ವಕ್, ಶ್ರೋತ್ರ, ಹೃದಯ ವೆಂಬ ಷಡ್ಮುಖ.

೬ ಅಜಿಂಹ, ಷಂಡ, ಪಂಗು, ಅಂದಕ, ಬದಿರ, ಮುಗ್ಧರೆಂಬ ಷಡ್ಗುಣ.

೬ ಹರಿಶ್ಚಂದ್ರ, ನಳ, ಪುರುಕುತ್ಸ, ಪುರೂರವ, ಸಗರ, ಕಾರ್ತಿವೀರ್ಯ ರೆಂಬ ಷಡ್‌ಚಕ್ರವರ್ತಿಗಳು.

೬ ಮೂಲಾಧಾರ, ಸ್ವಾಧಿಷ್ಟಾದಿಯಾದ ಷಡಾಶ್ರಯಸ್ಥಾನ.

೬ ಸಂಧಿ, ವಿಗ್ರಹ, ಯಾಗ, ಆಸನ, ದ್ವದೀಭಾವ, ಸಮಾಶ್ರಯವೆಂಬ ಷಡ್ಗುಣಗಳು.

೬ ಬಕ್ಷ, ಬೋಜ್ಯ, ಲೇಹ್ಯ, ಜೂಳಿಷ್ಯ, ವಿಚ್ಚಲ, ಪಾನೀಯ ಎಂಬ ಷಡ್ವಿಧ.

೬ ಮಧುರ, ಅಮ್ಲ, ತಿಕ್ತ, ಕಟು, ಕಷಾಯ, ಲವಣ ವೆಂಬ ಷಡ್ವಿಧರಸ.

೬ ಶ್ವೇತ, ಪೀತ, ಕಪಿಲ, ಹರೀತ, ಕೃಷ್ಣ, ಮಂಜಿಷ್ಟವೆಂಬ ಷಡ್ವರ್ಣ.

೬ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಷಡ್‌ವೈರಿಗಳು.

೬ ಕ್ಷುತು, ಪಿಪಾಸೆ, ಶೋಕ, ಮೋಹ, ಜರ, ಮರಣವೆಂಬ ಷಡೂರ್ಮಿ.

೬ ಅಸ್ಥಿ, ನರ, ಚರ್ಮ, ರಕ್ತ, ಶುಕ್ಲ, ಮಾಂಸವೆಂಬ – ಷಡ್‌ಕೋಶಗಳು.

೬ ಅಸ್ತಿತೆ, ಜಾಯತೆ, ಮರಣಮತೆ, ವಿವರ್ಧತೆ, ಅಪಕ್ಷೀಯತೆ, ವಿನಶ್ಯತೆ ಎಂಬ ಷಡ್‌ಭಾವ.

೬ ಜಾತಿ, ವರ್ಣ, ಆಶ್ರಯ, ಕುಲ, ಗೋತ್ರ, ನಾಮವೆಂಬ ಷಡ್‌ಭ್ರಮೆ.

೬ ಮನ, ಬುದ್ಧಿ, ಚಿತ್ತಹಂಕಾರ, ಜೀವ, ಅಜ್ಞಾನ, ಭಾವವೆಂಬ ಷಡ್ಕರಣಗಳು.

೬ ಮಧುರ, ಲವಣ, ಆಮ್ಲ, ತಿಕ್ತ, ಕಟು, ಕಹಿಯೆಂಬ ಷಡುರುಚಿ.

೬ ತುವ್ವಿತ, ಕುಬುದ್ಧಿ, ಅಹಂಕಾರ, ವ್ಯಾಕುಲತೆ, ಅಜ್ಞಾನ ವೆಂಬ ಷಡ್ಭಾವ ಷಡ್ಗುಣ, ದುರ್ಭಾವ ಕೂಡಾ ಷಡ್ಗುಣ, ಷಡುಗುಣಅಲ್ಲಾ – ಷಡ್ಬೋಧಗಳು.

೬ ಸಂಚಿತ, ಸೂಚಿತ, ಸುಬುದ್ಧಿ, ನಿರಹಂಕಾರ, ನಿರ್ವ್ಯಾಕುಲತೆ, ಸುಜ್ಞಾನವೆಂಬ ಷಡ್ಭಾವ ಷಡ್ಗುಣ.

೬ ಶೈವ, ವೈಷ್ಣವ, ಶಕ್ತಿ, ಗಾಣಾಪಥ್ಯ, ಗೌರ, ಕಪಾಲಿಕ ವೆಂಬ ಷಣ್ಮತಿಭ್ರಮೆ.

೬ ಜ್ಞಾನ, ವೈರಾಗ್ಯ, ಐಶ್ವರ್ಯ, ಕೀರ್ತಿ, ವರ್ಧನೆ, ಭಕ್ತಿ ಎಂಬ ಷಡ್ಗುಣಗಳು.

೭ ರಸಾ, ರುಧಿರ, ಮಾಂಸ, ಮೇದಾ, ಅಸ್ತಿ, ಮಜ್ಜ, ಶುಕ್ಲ ಎಂಬ ಸಪ್ತ ಧಾತುಗಳು.

೭ ತನುವ್ಯಸನ, ಧನವ್ಯಸನ, ರಜವ್ಯಸನ, ವಿಷ್ಣವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ, ಎಂಬ ಸಪ್ತಧಾತುಗಳು.

೭ ದ್ಯೂತ, ಸುರೆ, ಮಾಂಸ, ಸಂಗಾತ, ಹಾದರ, ಕಳವು, ಬಂಡತನವೇಶ್ಯಾಗಮನ, ಎಂಬ ಸಪ್ತ ದುರ್ವ್ಯಸಗಳು.

೭ ಪೃಥ್ವಿ, ಆಪಃ, ತೇಜ, ವಾಯು, ಆಕಾಶ, ಆತ್ಮ, ಅಹಂಕಾರ ಎಂಬ ಸಪ್ತಾವರಣ.

೭ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿ, ಎಂಬ ಸಪ್ತ ಮಾತೃಕೆಯರು.

೭ ಮರೀಚಿ, ಅತ್ರಿ, ಆಂಗೀರಸ, ಪುಲಸ್ಯ, ಪುಲಹ, ಕೃತು, ವಶಿಷ್ಟರೆಂಬ - ಸಪ್ತಋಷಿಗಳು.

೭ ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಶಿಷ್ಟ, ಕಾಶ್ಯಪರೆಂಬ ಋಷಿ ಸೌಜ್ಞಿಕರಾದ ಸಪ್ತತಾರೆಗಳು.

೭ ಸೌಮಂಗಲ್ಯ, ಸೌಭಾಗ್ಯ, ಸಾಶೀಲಸ್ಯ, ಸದಾನಂದ, ಸತ್ಯ, ಸರ್ವಶಕ್ತಿ, ಸರ್ವಜ್ಞೆಗಳೆಂಬ ಸಪ್ತಮೂರ್ತಿಗಳು.

೭ ಈಶ್ವರ, ಸದ್ಯೋಜಾತ, ವಾಮದೇವ, ತತ್ಪುರುಷ, ಈಶಾನ ಘೋರ, ನಿರಂಗ, ರೆಂಬ ಪರಶಿವನ ಸಪ್ತಮುಖಗಳು.

೭ ಷಡ್ಜ ಋಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ, ನಿಶಾದವೆಂಬ ಸಪ್ತಸ್ವರ.

೭ ಧ್ರುವೆ, ಮಟ್ಟೆ, ರೂಪಕ, ಝಂಪೆ, ತ್ರಿಪುಟಿ, ಅಟ್ಟೆ, ಏಕವೆಂಬ ಸಪ್ತತಾಳಗಳು.

೭ ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ರುಕ್ಷ, ವಿಂಧ್ಯ, ಪಾರಿಯಾತ್ರ ವೆಂಬ ಸಪ್ತಕುಲಶೈಲ.

೭ ನಗರ, ಪಟ್ಟಣ, ಪುರ, ಗ್ರಾಮ, ಪಲ್ಲಿ, ಶಿಬಿರ ವೆಂಬ ದೇಶ ಸಪ್ತವಿಧಗಳು.

೭ ಜಲದುರ್ಗ, ವನದುರ್ಗ, ಗಿರಿದುರ್ಗ, ಕೃತಕಾವನಿ ದುರ್ಗ, ಸಾಲದುರ್ಗ, ಸೇನಾದುರ್ಗ, ಮಂತ್ರದುರ್ಗ ವೆಂಬ ಸಪ್ತದುರ್ಗ.

೭ ಷಡ್ಜ ಜೀವನ ಯುಕ್ತವಾದ ತಟಾಕದರಿದ್ರ, ಸಂಕರ್ಷಣಾದಿ ಧನ ನಿಕ್ಷೇಪ. ನಿಗಮಾಗಮ ಪ್ರಚಾರಾದಿ ಬ್ರಹ್ಮ ಸ್ಥಾಪನ....., ವಾಪನಿ ವೃತ್ತಕ ಶಿವಾಲಯ ಪ್ರತಿಷ್ಠಾವನ, ಛಾಯಾಫಲಾದಿ, ಪ್ರತಿಷ್ಠಾಪನ.

೭ ಪ್ರಜ್ಞಾನವ್ಯ ಲಕ್ಷಣ್ಯ ಉಳ್ಳ ಸದ್ಗ್ರಂಥರಚನೆಯಿಂ... ಧರ್ಮನು ಪಾಲನ ನಿಜ ಸೇವನಾದಿ ನಿದಾನಿಸ್ಯೆ. ಪುತ್ರೋತ್ಪಾದನ ವೆಂಬ ಸಪ್ತ ಸಂತಾನಗಳು.

೭ ಕವಿಗಳು, ಭಟ್ಟರು, ಗಾಯಕರು, ಪರಿಹಾಸಕರು, ಇತಿಹಾಸಜ್ಞರು ಪೌರಾಣಿಕರೆಂಬುದೇ ಸಪ್ತಾಂಗಪರಿವೇಷ್ಟಿಕರು.

೭ ಸ್ವಾಮ್ಯ, ಪ್ರಧಾನಿ, ಬಂದು, ಕೋಶ, ರಾಷ್ಟ್ರ, ದುರ್ಗ, ಬಲ ವೆಂಬ ಸಪ್ತರಾಜಾಂಗಗಳು.

೭ ರೇಚಕ, ಸೂರಕ, ಕುಂಭಕ, ಉತ್ಕರ್ಷ, ಅಪಕತರ್ಷ, ಶೂನ್ಯ, ಉತ್ಕ್ರಾಂತಿಯೆಂಬ ಸಪ್ತ ಪ್ರಾಣಾಯು.

೭ ಮೋಹ, ಮಹಾಮೋಹ, ಮಿಶ್ರ, ತಾಮಿಶ್ರ, ಅಂತತಾಮಿಶ್ರ ವೆಂಬುದೇ ಸಪ್ತ ಮಲಗಳು.

೭ ಕಾಳಿ, ಕರಾಳಿ, ವಿಶುದ್ಧ, ದೂಮ್ರವರ್ಣ, ಸ್ಫುಲಿಂಗಿನೀ, ವಿಶ್ವರುಚಿ, ಲೀಲಾಯಮಾನವೆಂಬ ಅಗ್ನಿಯ ಸಪ್ತ ನಾಲಿಗೆಗಳು.

೭ ಅಜ್ಞಾನ, ಆವರಣ, ವಿಕ್ಷೇಪ, ಪರೋಕ್ಷಜ್ಞಾನ, ಅಪರೋಕ್ಷಜ್ಞಾನ, ಶೋಕನಿವೃತ್ತಿ, ನಿರಂಕುಶವೃತ್ತಿ ಜೀವನ ಸಪ್ತಾವಸ್ಥೆಗಳು.

೭ ಸುಭೇಕ್ಷೆ, ವಿಚಾರಣೆ, ತನುಮಾನಸನ, ಸತ್ಯಾಪತ್ತಿ, ಸಂಪತ್ತಿ, ಪದಾರ್ಥಭಾವನೆ, ತುರ್‍ಯಾಗಾಮಿ ಯೆಂಬ ಸಪ್ತಭೂಮಿಕೆಗಳು.

೭ ಜಂಬು ಪ್ಲಕ್ಷ, ಕುಶ, ಕ್ರೌಂಚ, ಶಾಖ, ಶಾಲ್ಮೀಲಿ, ಪುಷ್ಕರ ಯೆಂಬ ಸಪ್ತ ದ್ವೀಪಗಳು.

೭ ಕ್ಷೀರ, ಶುದ್ಧೋದಕ ಮೊದಲಾದ ಸಪ್ತ ಸಮುದ್ರಗಳು.

೭ ಮೇಲಿನ ಸಹ ಬ್ರಹ್ಮರುಗಳ ಹೆಸರುಗಳು, ಬ್ರಹ್ಮನ ನೇತ್ರದಿಂದ ಮರೀಚಿ, ಹೃದಯದಿಂದ

೮ ಯಮ, ನಿಯಮ, ಆಸನ, ಪ್ರಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗ.

೮ ಭೂಮಿ, ಜಲ, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ವೆಂಬ ಅಷ್ಟ ಮೂರ್ತಿಗಳು.

೮ ಕುಲ, ಛಲ, ಯವ್ವನ, ಧನ, ರೂಪ, ವಿದ್ಯೆ, ಪ್ರಜ್ಞ, ತಪ ಎಂಬ ಅಷ್ಟ ಮದಗಳು.

೮ ಸಂಸ್ಥಿತಿ, ತ್ರಿಣಿ, ಕೃತವರ್ದನಿ, ರೋದನಿ, ಮೋಹಿನಿ, ಅತಿಚಾರಿಣಿ, ವಾಸಿನಿ, ಯೆಂಬ ಅಂತರಂಗ ದುಷ್ಟಮದಗಳು.

೮ ಭಯ, ಶಂಕೆ, ಶೀಲ, ಕುಲ, ಜಾತಿ, ಕರಣ, ಲಜ್ಜಾ, ಜಿಗುಪ್ಸೆ ಎಂಬ ಅಷ್ಟ ಪಾಶಗಳು.

೮ ಇಂದ್ರದ್ವೀಪ, ಕುಶದ್ವೀಪ, ತಾಮ್ರವರ್ಣದ್ವೀಪ, ನಾಗದ್ವೀಪ, ಸಾಮ್ಯದ್ವೀಪ, ಗಂಧರ್ವದ್ವೀಪ, ಗಭಸ್ತಿದ್ವೀಪ, ವಾರುಣದ್ವೀಪ ಯೆಂಬ ಅಷ್ಟ ದ್ವೀಪಗಳು.

೮ ಸುಂದರ ಸುಶೀಲರಾದ ದಾಸೀಜನರು, ಚತುರರಾದ ಭೃತ್ಯವರ್ಗರು, ಧಾರ್ಮಿಕ ಪುತ್ರರು, ಬಂಧುವರ್ಗರು, ಮಹಾರ್ಹವಸ್ತ್ರ ನಿಚಯ, ಯೋಗ್ಯ ವಾಹನ, ರತ್ನಾದಿ ಸಂಪತ್ತು ಸಮೃದ್ಧಿ, ಬಹುಧಾನ್ಯ ಸಂಗ್ರಹವೆಂಬ ಅಷ್ಟ ಐಶ್ವರ್ಯಗಳು.

೮ ಮಲ ನಿರ್ಮೋಚನ ಜಲಸ್ನಾನ, ಯಜ್ಞಶೀಶಾದಿ – ಭೋಜನ, ವಸನಾರ್ಹ ತುಲಾದಿ, ವಸ್ತ್ರಮುಂ, ಸುವಾಸಿತಾಂಗಾದಿ ಗಂಧಮುಂ, ಚಕ್ಷುಪ್ರಾಣಾದಿ ಪುಷ್ಪಮಂ, ಮುಖವಾಸ್ಥ, ಕುಲರಾಜಕವಾದ ತಾಂಬೂಲ ವೆಂಬ ಸುಖಸಂತಾನ ಸಂಯೋಗವೆಂಬ ಅಷ್ಟಭಾಗಗಳು.

೮ ಸಂಧಿ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ, ಚಿತ್ರ ಚಮತ್ಕಾರವೆಂಬ ಅಷ್ಟಪ್ರಕಾರ.

೮ ಅನರ್ಥಕ, ಶ್ರುತಿಕಠೋರ, ದ್ಯಾಹಕಾರ್ಥ, ತ್ರಿಲಕ್ಷಣ, ಸ್ವಸಂತೋಷ, ಅಸಂಮತ, ಯತಿಭೃಷ್ಠ, ಅಸಕ್ರಿಯೆ ಯೆಂಬ ೮ ಬಲಷ್ಟವಾಕ್ಯ ದೋಷಗಳು.

೮ ಸ್ತಂಭ, ಸ್ವೇದ, ರೋಮಂಥನ, ಕಂಪನ, ವಿವರ್ಣ, ಪ್ರಳಯ, ಅಶ್ರು ಯೆಂಬ ಅಷ್ಟವಿಧ ಸಾತ್ವಿಕಗಳು.

೮ ಹಸಿತವ್ಯ, ಶ್ಯೋಚ್ಯ, ದ್ವೇಷ್ಯ, ಪ್ರತಿಭಟ, ಭೀಷಣ, ಜಿಗುಪ್ಸನೀಯ್ಯೆ, ಆಶಾಚಾರ್ಯ, ಸಾಮ್ಯಾಸ್ಪದಂಗಳೆಂಬ ರಸಾಷ್ಟಕಗಳು.

೮ ಉಮೆ, ಚಂಡೀಶ್ವರ, ನಂದಿಕೇಶ್ವರ, ಮಹಾಕಾಳಿ, ಬ್ರುಂಗಿರಿಟ, ಗಣಪತಿ, ವೃಷಭ, ಷಣ್ಮುಖರೆಂಬ ಅಷ್ಟಗಣೇಶ್ವರರು.

೮ ಇಂದ್ರಾದಿ ಅಷ್ಟ ದಿಗ್‌ಪಾಲಕರು.

೮ ಪಂಚಭೂತ, ಸೂರ್ಯ, ಚಂದ್ರ, ಜೀವರೆಂಬ ಅಷ್ಟಮೂರ್ತಿಗಳು.

೮ ಚಂದನ, ಅಗರು, ಕಸ್ತೂರಿ, ಕರ್ಪೂರ, ಕೇಸರ, ಕಚೂರ, ಲಾವಂಛಕ ಕೋಷ್ಠವೆಂಬ ಅಷ್ಟಗಂಧಗಳು.

೮ ಪ್ರಸರಾಂಗ, ದದ್ಯಾಂನ, ಗುಡಾನ್ನ, ಶುದ್ಧಾನ್ನ, ಶಾಲ್ಯಾನ್ನ ಹರಿದ್ರಾನ್ನ, ಪರಮಾನ್ನ, ಮುದ್ಗಾನ್ನ ವೆಂಬ ಅಷ್ಟಅನ್ನಗಳು.

೮ ಸೂರ್ಯಭೇದನ, ಉಜ್ಜಾಯ, ಸಿತ್ಕಾರಿ, ಸೀತಳ, ಒಸ್ತ್ರಿಕೆ, ಬ್ರಮರಿ, ಮೂರ್ಛೆ, ಕೇವಲವೆಂಬ ಕುಂಭಾಷ್ಟಕ.

೮ ಧರ್ಮಜ್ಞಾನ, ವೈರಾಗ್ಯ, ಐಶ್ವರ್ಯ, ಅಕರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ, ವೆಂದು ಬುದ್ಧಿಯ ಅಷ್ಟಭಾವವಗಳು.

೮ ಉರಸ್ಸು, ಕಂಠ, ಜಿಂಹ್ವೆ, ಮೂಲ, ತಾಲು, ಓಷ್ಠಾ, ದಂತ, ನಾಸಿಕ, ಶಿರಸ್ಸು ಯೆಂಬ ಅಷ್ಟಸ್ಥಾನಗಳು.

೮ ಭೂತ, ತನ್ಮತ್ರೆ, ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣ, ಗುಣ, ಪ್ರಕೃತಿ, ಕಲಾಧಿಕವೆಂದು ಎಂಟುವರ್ಗವಾಗಿ ಪುರಿಯಾಷ್ಟಕ.

೮ ಸುಪ್ರತೀಕ ಅಷ್ಟ ದಿಗ್ಗಜಗಳು.

೮ ಅನಂತ, ತಕ್ಷಕ, ವಾಸುಕಿ, ಶಂಖಪಾಲ, ಪದ್ಮ, ಕಾರ್ಕೋಟಕ, ಕ್ರೋಡಾ, ಕಾಲ ವೆಂಬ ಅಷ್ಟಕುಲಪಣಿಗಳು.

೮ ಕೌರವ, ದ್ವಾಂತ, ಸೀತ, ಉಷ್ಣ, ಸಂತಾಪ, ಅಂಬುಜ, ಮಹಂಬುಜ, ಕಾಲಸೂತ್ರವೆಂಬ ನರಕಾಷ್ಟಕಗಳು.

೮ ಸೂಜೀಮುಖ, ಕಾಲ, ಖಡ್ಗ, ಕ್ಷುರಧಾರೆ, ಅಂಬರೀಷಕ, ಸಪ್ತಾಂಗರ, ಮಹಾದಾಹ, ಸಂತಾಪಗಳೆಂಬ ಎಂಟು ನರಕಾಷ್ಟಕಗಳು.

೮ ರಂಭೆ, ಊರ್ವಶಿ, ತಿಲೋತ್ತಮೆ, ಮೇನಕಿ, ಚಿತ್ರಲೇಖೆ, ಮಂಜುಗೋಶಿ, ಸುಕೇಶಿ, ಘೃತಾಚಿಯೆಂಬ ಅಷ್ಟದೇವಗಣಿಕೆಯರು.

೮ ಪ್ರತ್ಯಕ್ಷ, ಅನುಮಾನ, ಅನುಪಲಬ್ಧ, ಆಗಮ, ಅರ್ಥಾಪತ್ತಿ, ಉಪಮಾನ, ಸಂಭವ, ಇತಿವ್ಯ ಪ್ರಮಾಣರೆಂಬ ಅಷ್ಟಪ್ರಮಾಣ.

೮ ವಿಷಯಾನಂದ, ಬ್ರಹ್ಮಾನಂದ, ವಾಸನಾನಂದ, ಮುಖ್ಯಾನಂದ, ನಿಜಾನಂದ, ಆತ್ಮಾನಂದ, ವಿದ್ಯಾನಂದಗಳೆಂಬ ಆನಂದಾಷ್ಟಕಗಳು.

೮ ಭೋಧಕಗುರು, ವೇದಕಗುರು, ನಶೇಧಕಗುರು, ಕಾಮ್ಯಕಗುರು, ಕಾಮ್ಯಾಗುರು, ಸೂಚಕಗುರು, ವಾಚಕಗುರು, ಕಾರಣಗುರು, ವಿಹಿತಗುರು ಯೆಂಬ ಅಷ್ಟವಿಧಗುರುಗಳು.

೮ ಪದದ್ವಯ, ಭುಜದ್ವಯ, ಹಸ್ತದ್ವಯ, ವಕ್ಷಲಲಾಟದ್ವಯವೆಂಬ ಅಷ್ಟಾಂಗವು.

೮ ದರ, ಧ್ರುವ, ಸೋಮ, ಆಪ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸವೆಂಬ ಅಷ್ಟವಸುಗಳು.

೮ ನಂದೀಶ್ವರ, ಭೃಂಗೀಶ್ವರ, ಮಹಾಕಾಳ, ಕಿರೀಟ, ಘಂಟಾಕರ್ಣ, ಸುಘೋಷ, ದಂಡಿ ಈಶಾನ ಯೆಂಬ ಅಷ್ಟಮುಖ್ಯ ಗಣೇಶ್ವರರು.

೮ ಸ್ಥೂಲವಾಗುವದು, ಸೂಕ್ಷ್ಮವಾಗುವುದು, ಬಾಲನಾಗುವದು, ಯೌವನವಾಗುವದು, ವೃದ್ಧನಾಗುವದು, ನಾನಾರೂಪವಾಗುವದು, ಪೃಥ್ವಿ ಹೊರ್ತು ನಾಲ್ಕು ಭೂತ ರೂಪವಾಗುವದು, ನಿತ್ಯ ಸುಗಂಧಮಂ ಸೇವಿಸುವದು, ಇದು ವಾರ್ತಿವಾಷ್ಟಸಿದ್ಧಿಗಳು.

೮ ಹೀಗೆಯೇ ಜಲಾಷ್ಟಸಿದ್ಧಿಗಳು.

೮ ತೈಜಸಾಷ್ಟಸಿದ್ಧಿಗಳು.

೮ ವಾಯುವೇಷ್ಟಸಿದ್ಧಿಗಳು.

೮ ಆಕಾಶಾಷ್ಟಸಿದ್ಧಿಗಳು.

೮ ಮಾನಸಾಷ್ಟಸಿದ್ಧಿಗಳು.

೮ ಅಹಂಕಾರಾಷ್ಟಸಿದ್ಧಿಗಳು.

೮ ಬುದ್ಧ್ಯಾಷ್ಟಸಿದ್ಧಿಗಳು.

೮ ಈ ಚತುಚ್ಚಷ್ಟಿ ಯುಕ್ತರಾದ ಚತುರ್ಮುಖ ಬ್ರಹ್ಮನಿಂದ ನವಬ್ರಹ್ಮರ ಉತ್ಪತ್ತಿ.

೮ ರುಕ್ಮೀಣಿ, ಸತ್ಯಭಾಮೆ, ನೀಲೆ, ಸುಶೀಲೆ, ಕಾಳಿನಿ, ಮಿತ್ರೆ, ವಿಂದ್ಯೆ, ಜಾಂಬವತಿಯೆಂಬ ಅಷ್ಟಮಸ್ತ್ರೀಯರುಗಳು.

೮ ಅರಿಷಡ್ವರ್ಗ ಆರಕ್ಕೆ, ರಾಗದ್ವೇಷ ಕೂಡಾ ಅಷ್ಟರಾಗಗಳು.

೯ ಬ್ರಹ್ಮ ನೇತ್ರದಿಂದ ಮರೀಚಿ, ಹೃದಯದಿಂದ ಭ್ರಗು, ಶಿರದಿಂ ಅಂಗೀರಸ, ಉದರದಿಂದ, ವಿನಿಂ ಪುಲಸ್ಯ, ವ್ಯಾನದಿಂ ಪುಲಹ, ದಿಂಕ್ರತು, ಪ್ರಾಣವಾಯುವಿನಿ ದಕ್ಷ, ಶ್ರೋತ್ರದಿಂ ಅತ್ರಿ ಯೆಂಬ ನವ ಬ್ರಹ್ಮರುಗಳು.

೯ ರತಿ, ಹಾಸ, ಶೋಕ, ಕೋಪ, ಉತ್ಸಾಹ, ಭಯ, ಜಿಗುಪ್ಸೆ ವಿಸ್ಮಯ, ತಮ ಎಂಬ ನವರಸಾಲಂಕಾರಗಳು.

೯ ಬುದ್ಧಿ, ಸುಖ, ದುಃಖ, ರಾಗ, ದ್ವೇಷ, ಪ್ರಯತ್ನ, ಧರ್ಮ, ಅಧರ್ಮ, ಭಾವನೆಯೆಂಬ ನವಗುಣಗಳು.

೯ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮಾರ್ಪಣ ವೆಂಬ ನವಭಕ್ತಿಗಳು.

೯ ಕಾಮ, ಸಂಕಲ್ಪ, ವಿಕಲ್ಪ, ತಾಮಸ, ವಿಶೋಕ, ಮೌನ, ಪ್ರೇಮ, ಮೂರ್ಛಾ, ಸುಷುಪ್ತಿ, ಬಡಯೆಂಬ ನವಗುಣಗಳು.

೯ ನಾಭಿ, ಕಿಂಪುರುಷ, ಹರಿವರುಷ, ಯಿಳಾವ್ರತ, ರಮ್ಯಕ, ಹಿರಣ್ಯಕ, ಉತ್ತರ, ಕುರು, ಭದ್ರಾಶ್ವ, ಕೇತುಮಾಲ್ಯ, ರೆಂಬ ನವಖಂಡದೊರೆಗಳು.

೯ ನವಗ್ರಹರುಗಳು.

೯ ನವಧಾನ್ಯಗಳು.

೯ ನವದ್ವಾರಗಳು.

೧೦ ದ್ವೇಷ, ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ, ಅರ್ಥಪತ್ತಿ, ಉದಾರತ್ವ ಒಜಸ್ವಿ, ಕಾಂತಿ, ಸಖಿಯೆಂಬ ದಶಪ್ರಾಣ.

೧೦ ಪ್ರಣವದಿಂ ಸ್ವರ ನಿರ್ಘೋಷ, ನಿರ್ಣಯಧ್ವನಿ, ಘಂಟಾಧ್ವನಿ, ಕಹಳೆಧ್ವನಿ, ಶಂಖಧ್ವನಿ, ಮೇಘಧ್ವನಿ, ಮೃದಂಗ ಧ್ವನಿ, ಭೇರಿಧ್ವನಿ, ಮಂತ್ರಧ್ವನಿ, ಅವ್ಯಕ್ತ ಪ್ರಣವಧ್ವನಿಯೆಂಬ ದಶನಾದಗಳು.

೧೦ ಅಭಿಲಾಷೆ, ಚಿಂತೆ, ಸಂಸ್ಮೃತಿ, ವಿಭುಗುಣಸ್ಮೃತಿ, ಸಂತಾಪ, ಕ್ರಿಯಾದ್ವೇಷ, ವಿಕಲ, ಮೌನ, ಮೂರ್ಛೆ, ಮರಣ ವೆಂಬ ದಶಾಪತ್ತೆ.

೧೦ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನಾ, ಭಾರ್ಗವರಾಮ, ರಘುರಾಮ, ಯಾದವದೊರೆಕೃಷ್ಣ, ಬಷುದ್ವ, ಕಲ್ಕ್ಯಯೆಂಬ ದಶಾವತಾರಗಳು.

೧೦ ಪ್ರಶ್ನೆ, ಅನಂತ, ಈಶ್ವರ, ಪಿಂಗಳ, ಕಾಲ, ಕ್ರೋದೇಶ, ಜಲದ, ಬಲ, ಧನದ, ಶಂಕರಯೆಂಬ ದಶ, ಲೋಕೇಶ್ವರರು.

೧೦ ಅಹಿಂಸೆ, ಸತ್ಯ, ಆಸ್ಥೇಯ, ಬ್ರಹ್ಮಚರ್ಯ, ಕ್ಷಮೆ, ಧೃತಿ, ದಯೆ, ಆರ್ಜವ, ಮಿತಾಹಾರ, ಶೌಚ ವೆಂಬಯಮಾಂಗ ದಶಕ.

೧೦ ಈಡಾ, ಪಿಂಗಳ, ಗಾಂಧಾರಿ, ಹಸ್ತಿ, ಜಿಹ್ವಾ, ಅಲಭ್ಯ, ಪುರುಷ, ಕುಕುರ, ಶಶ್ನಿ, ಸುಶುಮ್ನಯೆಂಬ ದಶನಾಡಿಗಳು.

೧೦ ದಶೇಂದ್ರಿಯಗಳು.

೧೧ ಪ್ರಸೂತಿ, ಆಕೂತಿ, ಖ್ಯಾತಿ, ಧ್ರುತಿ, ಸಂಭೂತಿ, ಪ್ರೀತಿ, ಕ್ಷಮೆ, ಸಂನುತಿ, ಆನಸೂಯೆ, ದೇವಮಾತೆ, ಅರುಂಧತಿಯೆಂಬ ಏಕಾದಶ ಪ್ರತಿವ್ರತೆಯರು.

೧೧ ವೀರಭದ್ರ, ಶಂಭು, ಗಿರೀಶ, ಅಜ್ಯಕಪಾರಿ, ಅಹರ್ಬುಧ್ಯಾ, ಪಿನಾಕಿ, ಸ್ಥಾಣು, ಪಶುಪತಿ, ಭವ, ಉಗ್ರ, ತ್ರೀಟುಪತಿಯೆಂಬ ಮಹೇಶನ ಮಾನಸಪುತ್ರರಾದ ಯೆಕಾದಶ ರುದ್ರರುಗಳು.

೧೨ ಪುಷ್ಕರ, ವಿವಿಧಕ, ದ್ರುಷಕ, ಪೀಡನ, ವೃಕ್ಷಾರೋಹಣ, ಲತಾವೇಷ್ಟನ, ತಿಲತಂಡುಲತೆ, ಕ್ಷೀರನಿರಾಯುತ, ಊರುಪಗೂಹ, ಜಗನೋಪಗೂಹನ, ಸ್ತನಕ್ಲೇಶ, ಲಲಾಟಕ ವೆಂಬ ದ್ವಾದಶವಿಧ ಚುಂಬನಗಳು ಆಲಿಂಗನಗಳು.

೧೨ ನಿಮಿತ್ತಕ, ಸಂಗಟಕ, ಸ್ಫುರಿತಕ, ಬ್ರಾಂತಿಕ, ತಿರ್ಯಗಾಯಿತಕ, ಅತಿದ್ರುಷ್ಟಿಕಾ, ಉತ್ತರಸಂಘುಟತಕಾ ಜಿಂಹಾಮೆಳನಕಾ, ಅತಿ ಜಿಂಹಯೋಗ, ಸಿತ್ಕಾರ, ದಂಶನಕಾ ವೆಂಬ ದ್ವಾದಶ ವಿಧಚುಂಬನ.

೧೨ ವಾಮದೇವ, ಭೀಮ, ಉಗ್ರ, ಭವ, ಸರ್ವೇಶಾನ, ಏಕವೀರ ಪ್ರಚಂಡ, ಈಶ್ವರ, ಉಮಾಪತಿ, ಜಯ, ಅನಂತ, ಏಕಶಿವರೆಂಬ ದ್ವಾದಶ ರುದ್ರರು.

೧೨ ತಪನಿ, ತಾಪನಿ, ಧೂಮ್ರ, ಮರೀಚಿ, ಜ್ವಾಲಿನಿ, ರುಚಿ, ಸುಷುಮ್ನೆ, ಭೋಗದೆ, ವಿಶ್ವಬೋಧಿನಿ, ಧರಣಿ, ಕ್ಷಮೆ, ಪ್ರಭೆಯೆಂಬ ಸೂರ್ಯನ ದ್ವಾದಶ ಕಲೆಗಳು.

೧೨ ಧಾತ, ಆರ್ಯಮ, ಮಿತ್ರ, ವರುಣ, ಇಂದ್ರ, ವಿವಸ್ವಾನ್, ಪ್ರಜನ್ಯ, ಪೂಶ, ಆಶುಂಮಾನ್, ಗಭಸ್ತಿಮಾನ್, ತ್ವಷ್ಟ್ರ, ವಿಷ್ಣುವೆಂಬವರೇ ದ್ವಾದಶಾದಿತ್ಯರು.

೧೨ ಪುಲಸ್ಯ, ಪುಲಹ, ವಸಿಷ್ಠ, ಅಂಗೀರಸ, ಭೃಗು, ಭಾರದ್ವಜ, ಅತ್ರಿ ಕಾಶ್ಯಪ, ದಕ್ಷ, ಕ್ರತು, ಜಮದಗ್ನಿ, ಕಲುಶಿಕರೆಂಬ ದ್ವಾದಶ ಋಷಿಗಳು.

೧೨ ವಾಸುಕಿ, ಕಂಕ, ವೀರ, ತಕ್ಷಕ, ನಾಗ, ಇಳಾಪುತ್ರ, ಶಂಖಪಾಲ, ಐರಾವತ, ಧನಂಜಯ, ಮಹಾಪದ್ಮ, ಕಾರ್ಕೋಟಕ, ಕಂಬಳ, ಆಶ್ವತರರೆಂಬ ದ್ವಾದಶ ಸೂರ್ಯನ ವಾಜಿಬಂಧನಾಧಿಕಾರಿಗಳಾದ ನಾಗ ಪ್ರಮುಖರು.

೧೨ ತುಂಬುರ, ನಾರದ, ಹಾಹಾ, ಹೂಹೂ, ವಿಶ್ವವಸು, ಉಗ್ರಸೇನ, ವಸುರುಚಿ, ಸರ್ವಾಪಿ, ಚಿತ್ರಸೇನ, ಉರ್ಣಾಹ, ಧೃತರಾಷ್ಟ್ರ, ಸೂರ್ಯವರ್ಚರೆಂಬ ದ್ವಾದಶಗಂಧರ್ವ ಪ್ರಮುಖರು.

೧೨ ಕ್ರುತಕಸ್ಥಲೆ, ಪುಂಜಕಸ್ಥಲೆ, ಮೇನಕಿ, ಸಹಾಕನ್ಯೆ, ಪ್ರಮೋಚಂತಿ, ಘ್ರತಾಚಿ, ಊರ್ವಶಿ, ಪೂರ್ವಚಿತಿ, ತಿಲೋತ್ತಮೆ, ರಂಭೆ, ಭದ್ರೆ ಎಂಬ ದ್ವಾದಶ ಅಪ್ಸರ ಸ್ತ್ರಿಯರುಗಳು.

೧೨ ರಥಭ್ರುತಿ, ರಥಜ, ರಥಚಿತ್ರ, ರಥಾಶ್ವ, ಅರುಣ, ಸುಶೇಣ, ಸೇನಚಿತ್, ಕಾಶ್ಯ, ವೃತ್ತ, ಅರಿಷ್ಠನೇಮಿ, ರುತಿಜಿತ್, ಸತ್ಯಜಿತ್ ಯೆಂಬ ಸೂರ್ಯಸಾರಥಿಗಳಿಂದ ದ್ವಾದಶ ಗ್ರಾಮಿಯರು.

೧೪ ಯಕ್ಷ, ರಾಕ್ಷಸ, ಸುಹ್ಯ, ಇಂದ್ರ, ಬ್ರಹ್ಮ, ಸೋಮ, ಪ್ರಜಾಪತ್ಯ, ಪಶು, ಪಕ್ಷಿ, ಸರ್ಪ, ಮೃಗ, ವೃಕ್ಷ, ಮನುಷ್ಯನೆಂಬ ಚತುರ್ದಶ ಸೃಷ್ಟಿಗಳು.

೧೪ ಸ್ವಯಂಭುವ, ಸ್ವಾರೋಚಿಷ, ಉತ್ತಮ, ತಾಯಸ, ರೈವತ, ಚಕ್ಷುಷ, ವೈವಸ್ವತ, ಸೂರ್ಯಸಾವರ್ಣಿಕ, ದಕ್ಷಸಾವರ್ಣಿಕ, ಬ್ರಹ್ಮಸಾವರ್ಣಿಕ, ಧರ್ಮಸಾವರ್ಣಿಕ, ರುದ್ರಸಾವರ್ಣಿಕ, ಕಾಚ್ಯ, ಇಂದ್ರ ಸಾವರ್ಣಿಕರೆಂಬ ಚುತುರ್ದಶ ಮನುಗಳು.

೧೪ ವೇದ, ವೇದಾಂಗ, ನ್ಯಾಯ, ಮೀಮಾಂಸ, ಸ್ಮೃತಿ, ಪುರಾಣ ಚತುರ್ದಶ ವಿದ್ಯೆಗಳು.

೧೫ ಬೆಟ್ಟ, ಅಡಿ, ಹರಡು, ಮೊಳಕಾಲು, ಜಘನ, ನಾಭಿ, ಎದೆ, ಕುಚ, ತಕ್ಷ, ಕೊರಳು, ಕದಪು, ತುಟಿ, ಕಣ್ಣು, ಫಣೆ, ನೆತ್ತಿ, ಎಂಬ ಪಂಚ ದಶಕಲಾಸ್ಥಾನ -ಗಳು.

೧೬ ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ಉಪಕರ್ಮ, ಉತ್ಸರ್ಜನ, ವೇದವ್ರತ, ಸೌಧನಿಕ, ಸ್ನಾತಕ, ವಿವಾಹಿ, ಸ್ಮಾದಾಗ್ನಿ ಹೋತ್ರ, ಊರ್ಧ್ವದೇಹಿಕಗಳೆಂಬ ಷೋಡಶಕರ್ಮಗಳು.

೧೬ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ, ನಿಗ್ರಹ ವೆಂಬ ಷೋಡಶ 'ಪದಾತಿ.

೧೬ ಅಮೃತ, ಮಾನದ, ಪೋಷ, ತುಷ್ಟಿ, ಪುಷ್ಟಿ, ರತಿ, ಧೃತಿ, ಶಶಿನಿ, ಚಂದ್ರಿಕೆ, ಕಾಂತಿ, ಜ್ಯೋತ್ಸ್ನಿ, ಶ್ರೀ, ಅಂಗದೆ, ಪೂಣೆ, ಅಮೃತೆ, ಕಾಮದಾಯಿನಿ ಯೆಂಬ ಚಂದ್ರನಷೋಡಶ ಕಲೆಗಳು.

೧೬ ಗಯ, ಅಂಬರೀಷ, ಶತಬಿಂದು, ದಂತಿ, ಪೃಥು, ಮರುತ್ವಂತ, ಭರತ, ಸುಹೋತ್ರ, ರಾಮ, ದಿಲೀಪ, ರಘು, ರಂತಿದೇವ, ಯಯಾತಿ, ಮೊಂಧಾಂತ, ನೃಗ, ಭಗೀರಥರೆಂಬ ಷೋಡಷ ಮಹಾರಾಯರುಗಳು.

೧೬ ಜ್ಞಾನೇಂದ್ರಿಯ ಕರ್ಮೇಂದ್ರಿಯ, ಮನಸ್ಸು, ಅಹಂಕಾರ, ವಿದ್ಯೆ, ವಾಕು, ಶಕ್ತಿ, ಯೆಂಬ ಷೋಡಶಕಲೆಗಳು.

೧೭ ಶಂಕರಕೂಟ, ಮಹಾನಗ, ಹಂಸಗಿರಿ, ನಾಕಶ್ಯೆಲ, ಕಪಿಲಾದ್ರಿ, ಇಂದ್ರಗಿರಿ, ಸಾನ್‌ಮಾನ್, ಚಾರುದಿ, ಹೇಮಕೂಟ, ನೀಲಭದ್ರ, ಕೂಟಶೃಂಗ, ಪುಷ್ಯರಾಗ, ಮೇಘಪರ್ವತ, ಹೇಮಪ್ರಭಾ, ವರಾಹಗಿರಿ, ಮಯೂರನಗ, ಶೈಲೇಂದ್ರ, ಎಂಬ ಹದಿನೇಳು ಕುಲಾದ್ರಿಗಳು.

೧೭ ಸೂಕ್ಷ್ಮತನುಯೆಂಬ ಲಿಂಗದೇಹ.

೧೮ ಬ್ರಹ್ಮ ಪುರಾಣಗಳು - ಪದ್ಮಪುರಾಣ, ವೈಷ್ಣವಪುರಾಣ, ಶೈವಪುರಾಣ, ಭಾಗವತಪುರಾಣ, ಸ್ಕಾಂದ ಪುರಾಣ, ನಾರದೀಯ ಪುರಾಣ, ಮಾರ್ಕಾಂಡೇಯ ಪುರಾಣ, ಆಗ್ನೇಯ ಪುರಾಣ, ಭವಿಷ್ಯ ಪುರಾಣ, ವಾಮನಪುರಾಣ, ಕೂರ್ಮ ಪುರಾಣ, ಮತ್ಸ್ಯ ಪುರಾಣ, ಗರುಡ ಪುರಾಣ,

ವರಾಹ ಪುರಾಣ, ಬ್ರಹ್ಮಾಂಡಪುರಾಣ, ಬ್ರಹ್ಮವೈವರ್ತಕಪುರಾಣ, ಲಿಂಗಪುರಾಣ ವೆಂಬ ಅಷ್ಟಾದಶ ಪುರಾಣಗಳು.

೧೮ ಪುರ, ಗಿರಿ, ಋತು, ನಂದನ, ಸೋಮ, ಉದಯ, ಸಮುದ್ರ, ಜಲಕೇಳಿ, ಮಧುಪಾನಗೋಷ್ಠಿ, ಸಂಭೋಗ, ವಿಪ್ರಲಂಬ, ವಿವಾಹ, ಪುತ್ರೋತ್ಸಹ, ಮಂತ್ರಿ, ನೃಪತಿ, ದೂತ, ಮೃಗ, ಯಾನಗೋಷ್ಠಿ, ಎಂಬ ಅಷ್ಟದಶವರ್ಣನೆ.

ಅಣಿಮಾದಿ ಸಿದ್ಧಿ ಎಂಟು ಸಿದ್ಧಿಗಳು ಊರ್ಮಿತೆ, ಮೋಕ್ಷ, ದೂರ, ದೂರದಿಂಕಾಂಬುದು, ದೂರದಶ್ರಮ. ನನದಾಗುವದು, ಪರಕಾಯಪ್ರವೇಶ, ದನುಜದಿವಿಜಾದಿಗಳ ನೆನೆಯುವುದಕ್ಕೆ ಮೊದಲೆ ಕಾಂಬುದು. ಹಿತಕಾಲವರಿವದು ಅನಲಜಲ – ಸ್ಥಂಬನ ೧೮ ಸಿದ್ಧಿ.

೧೯ ಮನುಸ್ಮೃತಿ, ಅತ್ರಿಸ್ಮೃತಿ, ಹರಿತಸ್ಮೃತಿ, ವಿಷ್ಣುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ, ಉಶನಸ್ಮೃತಿ, ಆಂಗೀರಸಸ್ಮೃತಿ, ಯಮಸ್ಮೃತಿ, ಆಪಸ್ತಂಭಸ್ಮೃತಿ, ಸಂವರ್ತಸ್ಮೃತಿ, ಕಾತ್ಯಾಯನಸ್ಮೃತಿ, ಬೃಹಸ್ಪತಿಸ್ಮೃತಿ, ಪರಾಶರ ಸ್ಮೃತಿ, ವ್ಯಾಸಸ್ಮೃತಿ, ಶಂಖಲಿಖಿತಸ್ಮೃತಿ, ದ್ರಕ್ಷಸ್ಮೃತಿ, ಗೌತಮಸ್ಮೃತಿ, ಶಾತಾತಪಸ್ಮೃತಿ, ವಶಿಷ್ಠಸ್ಮೃತಿ, ಯೆಂಬ ಹತ್ತೊಂಬತ್ತು ಧರ್ಮಶಾಸ್ತ್ರಗಳು.

೨೬ ಉಕ್ತಾ, ಅತ್ಯುಕ್ತಾ, ಮಧ್ಯ, ಪ್ರತಿಷಾ, ಸುಪ್ರತಿಷ್ಠಾ, ಗಾಯತ್ರಿ, ಊಷ್ಣಿಕ್, ಅನುಷ್ಟಪೂ, ಬ್ರಹ್ಮಸ್ಮೃತಿ, ಪುನ್ತ್ರಿಷ್ಟಪುಃ, ಜಗಂ, ಅತಿಜಗತಿ, ಚಕ್ಷರಿ, ಅತಿಚಕ್ಷರಿ, ಅಷ್ಟಿ, ಅತ್ಯಷ್ಟಿ, ಧ್ರುತಿ, ಅತಿಧ್ರುತಿ, ಕ್ರುತಿ, ಪ್ರಕೃುತಿ, ಆಕೃತಿ, ವಿಕೃತಿ, ಆಕೃತಿ, ಸಂಕೃತಿ, ಉತ್ಕ್ರುತಿ, ಯೆಂಬ ಷಷ್ಠವಿಂಶತಿ ಛಂದಸ್ಸು.

೩೦ ಕರ, ಚೂರಿ, ಕಕ್ಕಡಾ, ಕಡುಗತ್ತಿ, ಸಾಣೆಗತ್ತಿ, ನಬ್ಬಳ, ಈಟಿ, ಇದಿರುಗತ್ತಿ, ಉಬ್ಬಣ, ಚಕ್ರ, ಚಂಡು, ಓತಿ, ಚಲ್ಲೆಹ, ಬಲ್ಲೆಹ, ಬಂಕು, ಬಾಣ, ನೆದೆ, ನರಾದಿಶೂಲ, ಶಿರಾದಿ, ಚೂರಿ, ಚಿಕ್ಕಡಾರಿ, ಕಿರಸೆ, ಪರಶು, ಪಾಶ, ಪಟ್ಟೆಹ, ಮಟ್ಟಲಂಕುಶ, ವಂಕಿ, ಲೌರಿ, ಜವದಾಡೆ ಯೆಂಬ ದ್ವಿತ್ರಿಂಶತಿ ಬತ್ತಿಸ್ಸಾಯುಧಗಳು.

೩೮ ಬಿಲ್ಲತಿರು, ಹೆದೆ, ಬತ್ತಳಿಕೆ, ಸೀಸಕ, ವಜ್ರ ಕವಚ, ವಜ್ರ ಮುಷ್ಠಿ, ಕರತ್ರಾಣ, ಶಿರತ್ರಾಣ, ಮಧ್ಯತ್ರಾಣ, ಪದತ್ರಾಣ, ವರ್ಮವರ, ಕಚಕ್ಷುರಿಕೆ, ಕರಪತ್ರ, ಕುಠಾರ, ಉಲ್ಕಾಮುಖ, ಅಗ್ನಿಸ್ಪುಟ ಮಹೋಲ್ಕ, ಅಂಗಾರಸ್ಫೋಟಸ್ಪುಲಿಂಗ,

ಪ್ರಕೀರೇಕಾ, ಘಟಿಕಾ ಪ್ರವೇಶಿಕಾ, ಗಂದೆಂಗಾಲಕ, ನಾಳೀಕದಾಹ, ದ್ರೋಣದಹನ, ಶತಗ್ನಿ, ಸಹಸ್ರಾಗ್ನಿ, ಅಂತರ್ದಾಹಿನಿ, ಬಹಿರ್ದಾಹಿನಿ, ಆಕಾಶಗಾಮಿನಿ, ಬೇಟಕ ಮುಂತಾದ ಅಷ್ಟ ತ್ರಿಂಶತಿ ಶತ್ರು ಜಯಾರ್ತಕ ಸಾಧನೆಗಳು.

೧೦೦ ಶ್ರೀರುದ್ರ, ಬ್ರಹದಾರಣ್ಯ, ಶ್ವೇತಾಶ್ವತರ, ಕೈವಲ್ಯ, ಕಾಲಾಗ್ನಿರುದ್ರ, ಕಟವಲ್ಲಿ, ಕಾತ್ಯಾಯನ, ಬ್ರಹ್ಮನಾರಾಯಣ ಹಂಸ, ಪರಮಹಂಸ, ಬಾಶಳ, ಬ್ರಹ್ಮಬಿಂದು, ಅರುಣ, ಅಮೃತಬಿಂದು, ಚರ್ಚ, ಪಂಚಬ್ರಹ್ಮ, ಜಾಬಾಲಿ, ತೇಜೋಬಿಂದು, ವಾಜಸನೇಯ ಬಿಂದು, ಭೋದಾಯನೀಯ, ಮೈತ್ರಾಣೀಯ, ಸಾಂಖ್ಯಾಯಣೀಯ, ಭಾಗುರಾಣೀಯ, ಶೌನಕೀಯ, ಶಿವಸಂಕಲ್ಪ ಶ್ರವಣ, ಈಶಾವಾಸ್ಯ, ತಳವಕಾರ, ನಿರಾಲಂಬ, ತೈತ್ತಿರೀಯ, ಛಾಂದೋಗ್ಯ, ಕೌಶೀವಕೀ, ಮಾಂಡೂಕ್ಯ, ಮುದ್ಗಲೀ, ಮುಂಡಕ, ಮೊದಲಾದ ಶತಉಪನಿಶತ್ತುಗಳು

ತತ್ವನಿರ್ಣಯ ಸುಮಾರು ಇಲ್ಲಿಗೆ ಮುಗಿಯಿತು.

ಕಡೆಂಗೋಡ್ಲು ಸುಬ್ಬಣ್ಣ ಭಟ್ಟನ ಸ್ವಾಸ್ಥಬರಹದ ಸ್ವತಹ ಪುಸ್ತಕಾ.

ಶ್ರೀ ಶ್ರೀ ಶ್ರೀ.

- ೪ -

ಆರೋಗ್ಯ ನಿರ್ಣಯ

ಆರೋಗ್ಯಕ್ಕೆ ಕಾರಣವಾದ ಆಚರಣೆಗಳು

ಆರೋಗ್ಯಕ್ಕೆ ಕಾರಣವಾದ ಆಚರಣೆಯ ಪೇಳ್ವೆ ನದೆಂತೆನೆ.

ಅತ್ಯಂತ ಹುಳಿ, ಅತಿಶೀತ, ಅತಿಮೈಥುನ, ಅತಿಶಾಸ್ತ್ರಭ್ಯಾಸ, ಅತಿಭಾರವ ನೆತ್ತುವದು, ಅತಿನಿದ್ದೆಗೈವದು, ಸದಾವಂದೇಶಾವಿನಲ್ಲಿ ಕುಳ್ಳಿರುವದು. ಮಾಂಸಗಳ ಸೇವಿಸುವದು, ಬಹುನಗೆ, ಬಹುಭೋಜನ, ಅನಿಷ್ಟರಿದ್ದಲ್ಲಿಯು ದುರ್ಗಂಧವಿರುವ ಮನೆಯಲ್ಲಿಯು, ಕೆಸರಿದ್ದಲ್ಲಿಯು, ಹೊಗೆ ಬಹಳವಿದ್ದಮನೆಯಲ್ಲಿಯೂ, ಸಮಭೂಮಿಯಿಲ್ಲದಲ್ಲಿಯೂ, ಕಠಿಣಾಸನದಲ್ಲಿಯು, ಭೋಜನಕ್ಕೆ ಯೋಗ್ಯವಲ್ಲಾ – ಯಿಹಲಾಗದು – ಭೋಜನದ ಕ್ರಮಹ್ಯಾಗೆ– ಮೃದುವಾದ ಆಸನದಲ್ಲಿ, ಕಿಂಚಿತ್ಪ್ರಕಾಶ ಸ್ಥಾನಗಳು, ಸಾರಣೆಯಂ ಮಾಡಿ ಸುಗಂಧದೂಪವಿಕ್ಕಿ, ಸೂಡುರು ಹೊತ್ತಿಸಿ, ಮೇಲುಗಟ್ಟುಕಟ್ಟೀರ್ದ್ದ ಸ್ಥಳದಲ್ಲಿ – ಪಾತ್ರಂಗಳ ಅತಿಶುದ್ಧವಾಗಿ ತೊಳೆದು, ಮಂಡಲಯುಕ್ತವಾಗಿ ವಿರಚಿಸಿ, ದಿವ್ಯಾಭರಣಭೂಷಿತಳಾದ ಸ್ತ್ರೀಯು, ಕುಂಕುಮಸುಗಂಧ ಲೇಪನಾಂಗಿಯು, ನವಕುಸುಮ ಮಾಲೆಯನ್ನುಳ್ಳ ಪ್ರಸನ್ನಹೃದಯಳಾದ ಹೇಮಾಂಗಿಯ ಸ್ವಾಯವ್ವನಸ್ಥಳಾದ, ಪರಸ್ತ್ರೀಯರಿಂದ ಉಣಲಿಕ್ಕಿಸಿಕೊಂಬುದು, ನೀರು ಕುಡಿಯಲಿರಿಸಿ ಕೊಂಬುದುಂ ಆಲವಟವನಿಕ್ಕಿಸಿ ಕೊಂಬುದು, ಆರೋಗ್ಯಕ್ಕೆ ಕಾರಣಂ – ಈ ಪ್ರಕಾರ ಆಚರಣೆಯುಳ್ಳರೆ ಆಯುಷ್ಯ ವಂತನಹನು – ನಡುವೆ, ಆಮ್ಲ, ಲವಣ, ಅಲ್ಲಿಂದಕ್ಷಾರಾ – ಕೈ – ಕಡೆಯಲ್ಲಿ ಲೇಸಂಗೊಂಬುದು – ಸ್ತ್ರೀ ಸಂಭೋಗದಲ್ಲಿ ಕ್ಷುದಾಪ್ರಷಾ ಮಲಮೂತ್ರ ನಿರೋಧ – ಅಶುಚಿತನದಿಂದ ಗರ್ಭಸಂಗ್ರಹಿಪೆ – ಜಡನು, ನಿರ್ಭಾಗ್ಯನು ದೇಹಶುದ್ಧಿಯಂ ಮಾಡಿ – ಮಧುರ ಭೋಜನಗಳಿಂ ಭೋಗಿಸೆ – ಸುಗಂಧ ತಾಂಬೂಲಗೊಂಡು ರಮಿಸೆ, ರುತುಕಾಲದಲ್ಲಿ ಹುಟ್ಟಿದವನು – ಹೇಮಕಾಯನುಳ್ಳ ಭಾಗ್ಯಾಧಿಕಾರಿಯಾದ ಪರಾಕ್ರಮ ನಕ್ಕುಂ–

ಇನ್ನು ಜನ್ಮ ಪ್ರಕೃತಿಯ ಲಕ್ಷಣಾವಂ ಪೇಳುವೆನು – ಶ್ಲೇಷ್ಮ ಪ್ರಕೃತಿಯವನು ದೊಡ್ಡದೇಹಿ ಪ್ರಸಂಗನು. ಶ್ಯಾಮವರ್ಣನು, ಶ್ರೀಮಂತನು, ಮಹಾಜಿನ ಪರಿವೇಷ್ಟಿತನು, ಸಿಂಹನಾದನು, ಗೀತವಾದ್ಯಪ್ರಿಯನು, ಸ್ಥಿರನು, ಮಧುರಾಳಪನು. ಧೈರ್ಯಪರನು, ಕ್ಷಮಾಪರನು, ವಿಚಾರಪರನು, ಶಿಕ್ಷಾ ಚಪಳನು, ಹೇಳಿದ್ದನ್ನು ಶೀಘ್ರದಲ್ಲಿ ಗ್ರಹಿಕೆಗೊಂಬವನು, ಸ್ವಪ್ನದಲ್ಲಿ–ತಾವರೆಕೊಳನು ಹಂಸಂಗಳಂನದಿಯಂ ಸಮುದ್ರಂ ಕಾಣುವವನು –ಇವನನ್ನು ಶ್ಲೇಷ್ಮ ಪ್ರಕೃತಿಯೆಂದು ತಿಳಿಯಬೇಕು.

ಇನ್ನು ಪ್ರಕೃತಿಯಂ ಪೇಳ್ವೆನು – ಸಿದ್ಧಉಳ್ಳವನು – ಕೋಪಿಯು – ಅತಿ ತೀಕ್ಷ್ಣನು, ಪ್ರಾಜ್ಞನು, ಬೆವರುವವನು, ನಾಲಿಗೆಯು, ತುಟಿ, ಕೈ ಕಾಲುಗಳು, ತಳಕೆಮೊಗಿಹನು, ಶೂರನು, ವಿದ್ವಾಂಸನು, ಎಲ್ಲಾ ಕರ್ಮದಲ್ಲಿ ಪ್ರವೀಣನು, ಧರ್ಮಪರನು, ಊಷ್ಣಕಾಯನು, ಕೃಷನು, ಸೌಭಾಗ್ಯವಂತನು, ಭೋಜನಪ್ರಿಯನು, ಸದಾಶುಚಿಯು, ಸ್ವಪ್ನದಲ್ಲಿ ಸುವರ್ಣವಂ, ಆನೆಯ ಚರಣಮಂ, ರಕ್ತ ಮಾಂಸಗಳಂ, ಪದ್ಮರಾಗ ಮಾಣಿಕ್ಯಂಗಳಂ, ಶಿರೀ ಹೊಗೆಯಿಲ್ಲದ ಕಿಚ್ಚು, ಮುಳ್ಳು ಮುತ್ತುಗ ಮೊದಲಾದ ಕೆಂಪುಮರಗಳಂ ಕಾಣ್ಬನು – ಇವುಗಳು ಸಿದ್ಧ ಲಕ್ಷಣ ವೆಂದರಿಯುವುದು.

ವಾತಾಧಿಕನ ಪ್ರಕ್ರುತಿ ಲಕ್ಷಣವೆಂತೆಂದ್ರೆ – ರಾತ್ರಿಯಲ್ಲಿ ನಿದ್ದೆಗೈಯುವಾಗ ಬಾಯಿಬಡಿಯುವುದು, ನಿತ್ಯಾವುಭಾಗ್ಯನು, ಎಲ್ಲರಿಗೆ ಪ್ರಿಯನು, ಮತ್ಸರಿಯು, ಗುಣಹೀನನು, ಕೃತಘ್ನನು, ಕೈಕಾಲು ತಳಬೆಟ್ಟದಂಹವು, ಹಲ್ಲುಗಳ ತಿಂಬುವನು, ಅಸ್ಥಿರನು, ತೊಳಲಿದ ಸ್ವಭಾವನು, ನಿರ್ದಾಕ್ಷಿಣ್ಯನು, ಕ್ಲೇಶಪರನು, ಅಲ್ಪಧೈರ್ಯನು, ಸ್ವಪ್ನದಲ್ಲಿ ಆಕಾಶಕ್ಕೆ ಹಾರುವದು, ಪರ್ವತದ ಮಸ್ತಕಂಗಳಂ ನೇರುವದು, ಇನಿತುವಾತಾಧಿಕನಲಕ್ಷಣವು.

ಆನಂದಸಾರವಂ ಪೇಳ್ವೆನು – ಶೀಯು, ಖ್ಯಯೂ, ವಗರು, ಖಾರವು, ಉಪ್ಪು, ಹುಳಿಯು ಯಿತು ಆರು ರಸಂಗಳನ್ನು ಕಾಲವರಿತು ಸೇವಿಸಿದರೆ ಆರೋಗ್ಯವಹುದು – ಅತಿಕ್ರಮಸೇವಿಸಿದರೆ, ಕ್ರೂರವ್ಯಾಧಿಗಳು ಆಶ್ರಯಯಿಸುವದು. ಖ್ಯ – ವಗರು, ವಾತ, ಹುಳಿಯು, ಶೀಯುಂ, ಶ್ಲೇಷ್ಮಕರ, ಲವಣ, ಕ್ಷೌರ, ಪಿತ್ಥಕರ ಇನ್ನು... ಋತು ಲಕ್ಷಣವಂಹೇಳ್ತೆನೆ – ಮಳೆಗಾಲದಲ್ಲಿ ವಾತ ಘಟ್ಟುವದು.

ಮಾಗಿಯಲ್ಲಿ ಶ್ಲೇಷ್ಮ ಹುಟ್ಟುವದು,
ಬೇಸಗೆಯಲ್ಲಿ ಪಿತ್ಥ ಹುಟ್ಟುವದು.

ರಸವುಳ್ಳ ಸುಗಂಧವಾದ, ಸ್ನಿಗ್ಧವಾದ ನವಪಾಕದ ಭೋಜನ ಆರೋಗ್ಯಕರ ಪರಮಾಯುಷ್ಯ, ಸತ್ಯಪರನು – ದೈವಮುರಷಾರ್ಥಕಾಮನು – ಅತ್ಯಂತಹುಳಿಯು ಅತಿಲವಣವು – ಅತಿ ಉಷ್ಣವು, ಅಕಾಲ ಮೃತ್ಯುವಹುದು.

ನಿರಸಂಗಳಂ ಹಳಿವದು, ತಂಗುಳಿಗೆ ಪ್ರಿಯನಾದವರು.

ನಿರ್ದಯನು, ಅಧರ್ಮನು, ಕಲಹಪ್ರಿಯನು, ಶುಚಿತ್ರನು, ಸ್ತ್ರೀ ರಹಿತನು, ಶಾಸ್ತ್ರದೂಷಕನು, ಅತಿನಿದ್ರಾತುರನು, ಶೂಲೆಯಾದ ಹಾಗೆ ಮೈಬ್ಯಾನೆಯಹುದು. ಇದು ವಾತದ ಲಕ್ಷಣ. ಬಾಯಿ ಕಹಿ ಆಗುವದು, ಉಷ್ಣವಾಗುವದು,

ಮೂತ್ರಕೆಂಪಗುವದು, ಶ್ಲೇಷ್ಮದ ಲಕ್ಷಣವು - ಇನ್ನು ಪ್ರಾಯದ ಪರಿಯಾಯ ಬಾಲಪ್ರಾಯದಲ್ಲಿ ಶ್ಲೇಷ್ಮ, ಮಧ್ಯ ಪ್ರಾಯದಲ್ಲಿ ಸಿದ್ಧ, ವೃದ್ಧಂಗೆ ವಾತಾಧಿಕವು. ಇನ್ನು ಭೋಜನದ ಲಕ್ಷಣವಂ ಪೇಳ್ವೆನು - ವಿದಳಾಂನಕ್ಕೆ - ಕೂತ್ತಂಬ್ರಿಕಾಳು ವಿರುದ್ಧ, ಕೊಳಂಬಾಡಂ ಸಮಾನಕಲಶಿ ಉಂಬುದು ವಿರುದ್ಧ, ಹಾಲ ಮೇಲೆ ಮೊಸರುಂಬುದು ವಿರುದ್ಧ, ಹಾಲು - ಘಣ್ಣೆ ಎಂಬುದು ವಿರುದ್ಧ ; ತುಪ್ಪ - ಎಣ್ಣೆ ಸಮಾನ ಎಂಬುದು ವಿರುದ್ಧ, ತೆಂಗಿನಕಾಯಿ, ತೆಂಗಿನನೀರು ಕರ್ಪೂರವಿರುದ್ಧ, ದಾರೆಹೀರ್ರಿಯೂ - ಸಾಸಿವೆ ವಿರುದ್ಧ. ನವಜ್ವರಿತಂಗೆ - ತುಪ್ಪ, ಮೊಸರು ವಿರುದ್ಧ. ಅತಿಕ್ರಮದಿಂದುಂಬುದು ವಿರುದ್ಧ,

ಉಪವಾಸವಿದ್ದು ಮೊದಲು ಹುಳಿಉಂಬುದು ವಿರುದ್ಧ. ಪ್ರಮೇಹಕ್ಕೆ ಘ್ರತ ವಿರುದ್ಧ, ನೇತ್ರರೋಗಿಗೆ - ನೆತ್ತರುಳ್ಳ ಸ್ತ್ರೀಗೆ ಮೈಥುನ ಮಾಡುವದು ವಿರುದ್ಧ ; ಜಲೋದರಂಗೆ ನೀರು ಕುಡಿವದು ವಿರುದ್ಧ - ಮೊದಲು ಅವಲಕ್ಕಿ, ಎಳ್ಳು, ಚಕ್ಕುಲಿ. ಮೊದಲಾದ ಭಕ್ಷಗಳೆಲ್ಲಾ ವಿರುದ್ಧ, ಈ ಪ್ರಕಾರ ಉಳ್ಳ ವಿರುದ್ಧ ಪದಾರ್ಥಂಗಳು ಸೇವಿಸಿದರೆ - ಸರ್ವವ್ಯಾಧಿಗಳು ಆಶ್ರಯಿಸುವದು. ಭೋಜನಕ್ಕೆ ಉತ್ತಮ ವೆಂತೆಂದ್ರೆ - ಧವಳಿತಉಳ್ಳ ಹಳೇ ರಾಜಾಂನ, ಗಂಧಸಾಲೆ, ಕಳಂಮೆ, ಅನ್ನಮಂ. ಅತಿ ಬಿಸಿಯಲ್ಲದೆ, ಸೀತವಲ್ಲದೆ ಭೋಜನವಂ ಮಾಡುವದು. ತ್ರಿದೋಷಹರಂ - ಬಲವರ್ಧನ ಬುದ್ಧಿಹೆಚ್ಚುವದು ; ಆರೋಗ್ಯವಹುದು - ತೆಂಗಿನಕಾಯಿ ನೀರು ಕಿಂಚಿತ್ ಉಷ್ಣಕರ, ವಾತಹರ - ಇಂದ್ರಿಯ ವೃದ್ಧಿ, ಶುಂಠಿವಾಳದ ಬೇರು. ಪರ್ಪಟಕ, ಭದ್ರ ಮುಷ್ಠಿ, ಬೆರಸಿ, ಕಾದಾರಿದ ಹಾಲುವೆರಸಿ ಕುಡಿಯಲಾಗಿ - ಶಡಂಗಪಾನ - ಸೇವಿಸುವದು ಹುಣಿಸೆಹಣ್ಣು ಸ್ವಲ್ಪ ಸುಟ್ಟುಹಾಕಿ, ಬಿಸಿನೀರಿನಲ್ಲಿ ನೆನೆಯಿಟ್ಟು, ಕಿವಿಚಿ - ನೀತಳ ಆಗುವವರೆಗೆ ಇಟ್ಟು ಆ ತಿಳಿನೀರತೆಗೆದು - ಸಕ್ಕರೆ, ಕರ್ಪೂರ, ಏಲಕ್ಕಿ, ಜಾಯಿಫಲ, ಶ್ರೀಗಂಧ ಬೆರಸಿ ಉಷ್ಣಕಾಲದಲ್ಲಿ ಕೊಳ್ಳಲು ಆರೋಗ್ಯಕರ, ಆಯುಸ್ಯವರ್ಧನ, ಸೌಮ್ಯಕರ, ಅಗ್ನಿವರ್ಧನ, ಆಹಾರಪ್ರೀತಿಕರ, ರೋಗಂಗಳು ಆಶ್ರಯಿಸಲು, ಬಿಸಿನೀರಲ್ಲಿ ಸ್ನಾನಂ ಮಾಡಲು - ಬಲವಕ್ಕು ; ವಾತಶ್ಲೇಷ್ಮಹರ - ಅತ್ಯಂತ ಬಿಸಿನೀರನ್ನು ಮಂಡೆಗೆ ಹ್ಯೊದರೆ ಕಣ್ಣಿಗೆವಿರೋಧ - ಬೆಚ್ಚಗಿನ ನೀರು ಲೇಸು, ಸ್ನಾನದಿಂದ ಪಿತ್ಥಕೆಡುವದು - ಮದನವಾತಹರ. ಗರ್ಭಿಣಿ ವ್ರಣಕ್ಷತಂಗಳುಳ್ಳ ವಗೆಜ್ವರಿತಂಗೆ ಸ್ನಾನಹೊಲ್ಲ - ಕ್ಷಯರೋಗಿಗೆ ಪಿತ್ಥಾಧಿಕಂಗೆ ಮರ್ಧನ ಕೂಡದು, ತ್ರೀವ್ರತ್ರಿಷೆಉಳ್ಳವನಿಗೆ, ಬಳಲಿದವನಿಗೆ, ಕ್ಷೀಣಬಲದವನಿಗೆ, ಜ್ವರ ಉಳ್ಳವಗೆ, ರಕ್ತಪಿತ್ಥದವಗೆ, ಶ್ಲೇಷ್ಮರೋಗಿಗೆ - ತಾಂಬೂಲ ವಿರೋಧ.

ಸರ್ವರಿಗೂ ತಾಂಬೂಲ ಲಕ್ಷಣ – ಶ್ಲೋಕಾಃ –

ತಾಂಬೂಲಂ ಕಟುತಿಕ್ತ ಮುಷ್ಣಮಧುರಂ ಕ್ಷಾರಂ ಕಷಾಯಾನ್ವಿತಂ
ವಾತಘ್ನಂ ಕಫನಾಶನಂ ಕ್ರಿಮಿಹರಂ ದುರ್ಗಂಧ ನಿರ್ನಾಶನಂ।
ವಕ್ತ್ರಸ್ಯ ಆಭರಣಂ ವಿಶುದ್ಧಿಕರಣಂ ಕಾಮಾಗ್ನಿ ಸಂದೀಪನಂ
ತಾಂಬೂಲಸ್ಯ ಸಖೆ। ತ್ರಯೋದಶಗುಣಾಃ ಸ್ವರ್ಗೇಪಿ ತೇ ದುರ್ಲಭಃ॥

ಟೀಕೂ – ಪೂರ್ವಾಹ್ನದಲ್ಲಿ ವಗರು ಅಧಿಕವಾಗಿಯೂ; ಮಧ್ಯಾಹ್ನದಲ್ಲಿ ಸುಣ್ಣವಧಿಕವಾಗಿಯೂ; ರಾತ್ರಿಯಲ್ಲಿ ಎಲೆ ಅಧಿಕವಾಗಿಯೂ ಕೊಳ್ಳಲು ಲೇಸು– ತಾಂಬೂಲ ಚರ್ವಣ ಹೆಚ್ಚಾದರೆ ದೇಹ ಕ್ಷೀಣಕರ, ಚಕ್ಷು ಮಧ್ಯಮ, ಕರ್ಣ ಮಂದ, ಮೈಬಣ್ಣಕೆಡುವದು – ಕರಿಯೆಲೆವಾತಹರ, ಕ್ರಿಮಿನಾಶ, ಪಿತ್ಥಕರ – ಚಿಬ್ಬದ ಎಲೆ – ವಾತಶ್ಲೇಷ್ಮಹರ,

ಬಿಳಿಎಲೆ – ತ್ರಿದೋಷಹರ. ಗಂಧ ಪೂಸ್ವ ಕ್ರಮ – ಮಾಗಿಯಲ್ಲಿ ಬೇವಿನಗಂಧ – ವಾತ ಶ್ಲೇಷ್ಮಹರ, ಬೇಸಿಗೆಯಲ್ಲಿ ಅವರೆಯಗಂಧ ಶೈತ್ಯಕರ –

ಮಳೆಗಾಲದಲ್ಲಿ ಬಿಲ್ವದ ಗಂಧ ತ್ರಿದೋಷಹರ – ಅರಳಿಹಾಕಿದ ಹಾಸಿಗೆ ಮಂಚ ಮಳೆಗಾಲ ಮಾಗಿಯಲ್ಲಿ ಲೇಸು, ಯೆಕ್ಕೆಯ ಬೂಶಲದ ಅರಳಿಹಾಕಿದ ಮಂಚ ವಾತಾಧಿಕರಿಗೆ ಲೇಸು ;

ಯೆಲವದ ಬೂರಲದ ಅರಳಿ ಹೂ ನಿದ್ರೆ. ತ್ರಿದೋಷಯೆಲ್ಲಾ ಋತುವಿನಲ್ಲಿಯು ಲೇಸು.

ಸುವರ್ಣದ ಪಾತ್ರೆ ತ್ರಿದೋಷಹರ – ಕಂಚಿನ ಪಾತ್ರೆರಕ್ತವರ್ಧನ, ಲೋಹದ ಪಾತ್ರೆ ಸರ್ವಗುಣ, ಜಾಜಿಹೂವಿನ ಪುಷ್ಪದ ಪರಿಮಳ ನಾಲ್ಕು ಘಳಿಗೆ ಲೇಸು, ಕ್ಯಾದಿಗೆ ಪರಿಮಳ ಮೂರುದಿನಲೇಸು, ರತಿಗುತ್ಸಹ – ಈ ರೀತಿ ಬೋಜನ ತಾಂಬೂಲ ಅಶನ ಶಯನ ಗಂಧ ಮಾಲ್ಯಾದಿ ಸೇವಿಸಿದರೆ ಊಟ ಮಾಡಿ ಶತಪಾದಹಜ್ಜೆ ನಡೆದು ಕುಳಿತರೆ ಡೊಳ್ಳು ಬಾರದು – ಆರೋಗ್ಯ ಬಲವಕ್ಕು – ಉಂಡಾಗಲೆ ಓಡುವದು, ಕುದುರೆಯ ನೆರುವದು, ಸ್ತ್ರೀ ಸಂಭೋಗವಂ ಮಾಡುವದು ವಿರೋಧ –

ವ್ಯಾಧಿಗಳಿಗೆ ಕಾರಣ – ಒಂದಾವರ್ತಿ ಉಂಡರೆ ಆರೋಗ್ಯ, ಎರಡಾವರ್ತಿ ಉಂಡರೆ ಬಲವಕ್ಕು , ಮೂರುಸಾರಿ ಉಂಡರೆ ರೋಗಗಳಿಗೆ ಕಾರಣ, ಅಪರಿಮಿತ

ಎಂಬುವದು, ಉಂಡಮೇಲೆ ಒಂದೇಷಾವಿನಲ್ಲಿ ಕುಂಟುವದು, ಹೊಲ್ಲಾ ಎಂಬುದಕ್ಕೆ ಮೊದಲೆ ನೀರು ಕುಡಿದರೆ ಮೈ ಬಡವಕ್ಕು, ಊಟದ ನಡುವೆ ನೀರು ಕುಡಿದರೆ ಸಮದೇಹಿ, ಉಂಡನಂತ್ರ ನೀರು ಕುಡಿದರೆ ಡೊಳ್ಳುಬರುವದು, ತಣ್ಣೀರು ಕುಡಿವದು ಹೊಲ್ಲಾ, ಉಂಡು ಸುಖವೀರ್ದೆಡೆಯಲ್ಲಿ ಪಾದನಡೆಯಲ್ಲಿ ಸಂಚರಿಸಿ. ಎಡಮಗ್ಗುಲಲ್ಲಿ ಮಲಗುವದು, ಬಲಮಗ್ಗುಲಲ್ಲಿ ಮೊಗಚಿ, ಉಶ್ವಾಸ- ನಿಶ್ವಾಸಂಗಳಂ ಬಿಡುವದು ಲೇಸು, ಎರಡುಸಾರಿ ಮಲವಿಸರ್ಜನಾ, ಐದುಸಾರಿ ಮೂತ್ರ ವಿಸರ್ಜನ ಗೈಯ್ಯಲು ಲೇಸು.

ಸೂರ್ಯಸ್ತಮಾನದಲ್ಲಿ-ಶೀನುವದು, ಸ್ತ್ರೀಸಂಭೋಗ, ಕಣ್ಣೀರು ಇವು ತ್ರಿದೋಷ ಉಂಟುಮಾಡುವವು. ಬಿಸಿನೀರು ತ್ರಿದೋಷಹರ ಕಾದಾರಿದ ನೀರು ತ್ರಿದೋಷಹರ; ಮೂತ್ರ ಧರಿಸಿದರೆ ಕಣ್ಣಿಗೆ ವಿರೋಧ, ಮಲಧರಿಸಿದರೆ ಕಿವಿಮಂದ; ಛರ್ದಿಯ ಧರಿಸಿದರೆ ತುರಿಕೆ, ಕುಷ್ಟಕ್ಕೆ ಕಾರಣ; ಮಲ ಧರಿಸಿದರೆ ಗುಲ್ಮಕ್ಕೆ ಕಾರಣ, ಶುಕ್ಲನಿರೋಧ-ಪ್ರಮೇಹದುಕ್ಕು, ಕಣ್ಣಿಗೆ ಅಂಜನಹಚ್ಚಲು ದಂತಕ್ಕೆ ಲೇಸು,

ದಂತದಾವನ ಕಿವಿಗೆ ಲೇಸು, ಶಿರೋಭ್ಯಾಂಗನ ಪಾದಕ್ಕೆ ಲೇಸು, ಪಾದವ ಪೂಸಲು ಕಣ್ಣಿಗೆಲೇಸು-ನಿತ್ಯಸ್ನಾನ ಎರಡುದಿನಕ್ಕೆ ಮೈ ಮರ್ಧನ, ಮೂರು ದಿನಕ್ಕೆ ಕಾಲಹೂಸೂಣ-ಏಳುದಿವಸಕ್ಕೆ ದಂತಧಾವನ, ಪಕ್ಷಕ್ಕೆ ನಖ ಛೇದನ, ಪಕ್ಷಕ್ಷೆ ವಪನ. ಮಾಸಕ್ಕೆ ಮಲಪ್ರವೃತ್ತಿ ಮಾಡಲು ಲೇಸು,

ಸ್ತ್ರೀ ಸಂಭೋಗದ ಕ್ರಮ-ದುರ್ವ್ಯಾಳೆಯರ, ದುಷ್ಟರೋಗಿಯರ, ರಜಸ್ವಿಯಾದವರ, ಕುಲಹೀನೆಯರ, ತನ್ನಿಂದಹಿರಿಯಳ, ಅಧಿಕಪ್ರಿಯರುಳ್ಳವಳ, ವಿಧವೆಯಳ, ಇನಿತುವಿರುದ್ಧ, ಕಾಲಮೃತ್ಯುವಕ್ಕು ಚಿತ್ತಕ್ಕಾನಂದಕಾರಿಯಂ, ಪಂಚೇಂದ್ರಿಯಕ್ಕೆ ಭೋಗಾನಂದವ ಕೊಡಲು ಬಲ್ಲವಳಂ, ಅನುಕೂಲೆಯಂ, ಕುಲಾಚಾರೆಪಾಲೆಯುಂ-ನಿರ್ಮಲಾಂಗಿಯುಂ, ಉತ್ತುಂಗಸ್ತನೆಯುಂ, ಕೋಮಲಾಂಗಿಯಪ್ಪ ಕುಲಸ್ತ್ರೀರುಗಳ ಭೋಗಿಸಲು.

ವಂಶವರ್ಧನಕ್ಕೆ ಕಾರಣ-ಪುರುಷನು ಸಾಮಗಾದವನು. ಸೌಭಾಗ್ಯವಂತನುಂ ಪ್ರಸನ್ನ ಚಿತ್ತದಯಾಪರನು, ಕಾಮಕ್ರೀಡಾದಯಾಪರನು, ಧೈರ್ಯವಂತನು, ಶೃಂಗಾರವಂತನು, ದೇವಗುರು, ಭಕ್ತಿವಂತನು, ಇಷ್ಟಜನಪರಿವೇಷ್ಟಿತನು, ವಂಶವರ್ಧನಕ್ಕೆ ಕಾರಣನಾಗುತ್ತಾನೆ.

ಗ್ರೀಷ್ಮಕಾಲದಲ್ಲಿ ಬೆಲ್ಲ, ಅಣಿಲೆ; ವರ್ಷಕಾಲದಲ್ಲಿ ಅಜಿವಾನ ಅಣಿಲೆ, ಶರತ್ಕಾಲದಲ್ಲಿ ಸಕ್ಕರೆ -ಅಣಿಲೆ, ಹಿಮವಂತಕಾಲದಲ್ಲಿ ಬೆಲ್ಲ, ಅಣಿಲೆ, ಶಿಶಿರ ಕಾಲದಲ್ಲಿ ಹಿಪ್ಪಲಿ-ಅಣಿಲೆ, ವಸಂತಕಾಲದಲ್ಲಿ ಖರ್ಜೂರ ಅಣಿಲೆ, ಇನಿತು- ಶಡುರುತುವಿನಲ್ಲಿ ಅಣಿಲೆಯ ಸೇವಿಸಲು ಕಲ್ಯಾಣಶರೀರ. ದೀರ್ಘಾಯುಳ್ಳವನಾಗುತ್ತಾನೆಂದು ದೇವವಿರಚಿತ ವೈದ್ಯದೊಳಗಣ ಅನುಪಾನಭೋಗ ಪ್ರಕರಣ ಸಮಾಪ್ತಿ.

॥ ಶ್ರೀ ಮಹಾಗುರು ಗಣಾಧಿಪತಯೆ ನಮಃ ॥

॥ ಶ್ರೀ ಮಹಾನಂದಿಕೇಶ್ವರಾಯ ನಮಃ ॥

ಶ್ರೀ ವಿಜಯ ಸಂ ॥ ದ ನಿಜ ಆಷಾಢ ಬಹುಳ ೨ಲ್ಲು ಶ್ರೀ ಮುತ್ತು ಪೆರ್ವಾಯಗ್ರಾಮದ ಕಡೆಂಗೊಡ್ಲ ಸಂ । ಕೃಷ್ಣಭಟ್ಟರ ಮಗ ಶ್ರೀಮಂತಮುತ್ರ ಸುಬ್ಬಂಣನು ತನ್ನ ಸ್ವತಹ ಬರಹದಿಂದ ಬರದು ಪೂರೈಸಿದ -ಶಬ್ದಬೋಧೆ -ನಾನಾರ್ಥನಿಘಂಟು- ತತ್ತ್ವ ನಿರ್ಣಯ ಆರೋಗ್ಯಕ್ಕೆ ಇರುವ ಆಚರಣೆ ವಗೈರೆ ಇರುವ ಪುಸ್ತಕಕ್ಕೆ ಸೂರ್ಯ-ಚಂದ್ರರಿರುವವರೆಗೆ ಶಾರದಾ ಅನುಗ್ರಹವಾಗಿರಲಿಯೆಂಬ ಪುಸ್ತಗಕ್ಕೆ ಶುಭಮಸ್ತು - ಮಂಗಲ್ಯಮಸ್ತು, ಐಶ್ವರ್ಯಮಸ್ತು, ಸೌಭಾಗ್ಯಮಸ್ತು ॥ ವಲ್ಲಾ॥

॥ ಶ್ರೀ ॥

◆

- ೫೮ -

ಅನುಬಂಧಗಳು

ಶಬ್ಧ ಭೋದೆ – ನಾನಾರ್ಥ ನಿಘಂಟು – ತತ್ವ ನಿರ್ಣಯ ಮತ್ತು ಆರೋಗ್ಯ ನಿರ್ಣಯ – ಕೃತಿ ರಚಿಸಿದ ಸುಬ್ಬಣ್ಣ ಭಟ್ಟರ ವಂಶವೃಕ್ಷ

ಕಡೆಂಗೋಡ್ಲು ಸುಬ್ರಹ್ಮಣ್ಯ ಭಟ್ಟ – ಲಕ್ಷ್ಮಿ ಅಮ್ಮ

↓


ಕಡೆಂಗೋಡ್ಲು ಸಣ್ಣ ಕೃಷ್ಣ ಭಟ್ಟ – ತಿರುಮಲೇಶ್ವರಿ


→ ಸುಬ್ಬಣ್ಣ ಭಟ್ಟ – ಸಾವಿತ್ರಿ/ಸರಸ್ವತಿ – ೧ನೇ ಕವಲು


→ ಶಂಕರ ಭಟ್ಟ – ತಿರುಮಲೇಶ್ವರಿ – ೨ನೇ ಕವಲು


→ ರಾಮ ಭಟ್ಟ – ಸಾವಿತ್ರಿ – ೩ನೇ ಕವಲು

[illegible]
[illegible] 00746631656
[illegible] 28-11-2010


ವಂಶವೃಕ್ಷ




ವಂಶವೃಕ್ಷ
ಕಡೆಂಗೋಡ್ಲು ಸಣ್ಣ ಕೃಷ್ಣ ಭಟ್ಟ/ ತಿರುಮಲೇಶ್ವರಿ
ಕಡೆಂಗೋಡ್ಲು ವ್ಯಾಸ ತೆಕ್ಕೇಕರೆ ರಾಮ ಭಟ್ಟ/ ಸಾವಿತ್ರಿ



ಸುಮಾರು ೧೧೮ ವರ್ಷಗಳ ಹಿಂದೆ ಪ್ರತಿ ಮಾಡಲಾದ ಹಸ್ತಪ್ರತಿ ಲೇಖಕರ ಮಕ್ಕಳಿಗೆ ಇತ್ತೀಚೆಗೆ ದೊರೆತಿರುವುದು ಕನ್ನಡಿಗರ ಸುದೈವವೇ ಸರಿ. ಕೇವಲ ೩ನೇ ತರಗತಿಯವರೆಗೆ ಔಪಚಾರಿಕ ಶಿಕ್ಷಣ ಪಡೆದಿದ್ದ ಶ್ರೀ ಸುಬ್ಬಣ್ಣ ಭಟ್ಟರು ಆಗಿನ ಕಾಲಕ್ಕೆ ಎಂಥ ಹಿರಿಯ ವಿದ್ವಾಂಸರು ಎಂಬುದು ಗೊತ್ತಾಗುತ್ತದೆ. ಕನ್ನಡ ನಿಘಂಟು ರಚನೆಗೆ ಮಾರ್ಗದರ್ಶಕ ಸೂತ್ರಗಳೇ ರಚಿತವಾಗದ ಕಾಲದಲ್ಲಿ ಯಾವುದೇ ರೀತಿಯ ಸಾಂಪ್ರದಾಯಿಕ ಶಿಕ್ಷಣ ಪಡೆಯದ ವ್ಯಕ್ತಿಯೊಬ್ಬರು ತಮ್ಮ ಸತತ ಸಾಧನೆ ಪರಿಶ್ರಮದಿಂದ ಇಂತಹ ಮಹತ್ವದ ಕಾರ್ಯ ಕೈಗೊಂಡಿರುವುದು ಆಶ್ಚರ್ಯ ಹಾಗೂ ಮೆಚ್ಚುಗೆಯನ್ನು ಉಂಟುಮಾಡುತ್ತದೆ. ಸುಮಾರು ನಾಲ್ಕು ಸಾವಿರಕ್ಕೂ ಅಧಿಕ ಶಬ್ದಗಳಿರು ಈ ಕೃತಿಯು ಇಂದಿನ ವಿಮರ್ಶಾ ಮಾನದಂಡಗಳಿಂದ ಗಮನಸೆಳೆಯದಿದ್ದರೂ, ಐತಿಹಾಸಿಕವಾಗಿ ಇದರ ಪಾತ್ರ ಬಹಳ ಮಹತ್ತರವಾದದ್ದು. 'ಶಬ್ದಬೋಧೆ ನಾನಾರ್ಥ ನಿಘಂಟು – ತತ್ವ ನಿರ್ಣಯ ಮತ್ತು ಆರೋಗ್ಯ ನಿರ್ಣಯ' ಕೃತಿಯನ್ನು ಡಾ. ಎಸ್.ಆರ್. ವಿಘ್ನರಾಜ ಹಾಗೂ ಪೈಕಾನ ತೆಕ್ಕೆಕೆರೆ ಶಂಕರನಾರಾಯಣ ಭಟ್ಟ ಅವರು ಸಂಪಾದಿಸಿಕೊಡ್ಡಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಬೆಲೆ : ₹ ೮೦/-